UNIVERSAL LIBRARY
OU_198270
UNIVERSAL LIBRARY

ನಿಮ್ಮ ಬಟ್ಟೆಗಳು ಶುಭ್ರವಾಗಿ ಇರಬೇಕಾದರೆ

•

# ಕೈ ಮಾರ್ಕ್

# ಬಾರ್ ಸಾಬೂನನ್ನೇ

ಉಪಯೋಗಿಸಿರಿ.

•

ತಯಾರಕರು :

ದಿ ಮೈಸೂರ್

ಕೆಮಿಕಲ್ ಅಂಡ್ ಸೋಪ್ ವರ್ಕ್ಸ್

ಬೊಂಬಾಯಿ — ಬೆಂಗಳೂರು

# ಗಾಂಧೀಜೀ

[ ಒಂದು ಅಂತರಂಗ ಪರಿಚಯ ]

ಮಿಲ್ಲೀ ಗ್ರಹಾಂ ಪೋಲಕ್

ಗಾಂಧೀ ಸಾಹಿತ್ಯ ಭಂಡಾರ
ಮಲ್ಲೇಶ್ವರಂ, ಬೆಂಗಳೂರು

## ಇಂದೇ ಚಂದಾದಾರರಾಗಿ

ಸಂಪಾದಕರು:

ಸಿದ್ದವನಹಳ್ಳಿ ಕೃಷ್ಣಶರ್ಮ

# ಪ್ರಭಾತ ಸಾಹಿತ್ಯ

ವರ್ಷಕ್ಕೆ ಆರು ಪುಸ್ತಕ, ಆರು ರೂ. ಚಂದಾ, ನುರಿತ ಕೆಲಸಗಾರ-ಬರಹಗಾರರು. ಕಾದಂಬರಿ, ನಾಟಕ, ರಾಜಕೀಯ, ಆರ್ಥಿಕ, ಸಾಹಿತ್ಯ, ಕತೆ.

ಈ ವರ್ಷ

ಸಿದ್ದವನಹಳ್ಳಿ ಕೃಷ್ಣಶರ್ಮರ

* ಕನ್ನಡ ಸಮಸ್ಯೆ *

* ಕನ್ನಡದ ಕಿಡಿಗಳು *

ಮುದ್ರಕರು:

ಸಿ. ರಾಜಗೋಪಾಲಾಚಾರ್,

ಇಂಡಿಯನ್ ಪ್ರೆಸ್, ಬೆಂಗಳೂರು ಸಿಟಿ.

# ಪ್ರ ಸ್ತಾ ವ ನೆ

ಗಾಂಧೀಜಿಯ ಈ ನೆನಪುಗಳನ್ನು ಬರೆದಿರುವ ಶ್ರೀಮತಿ ಪೋಲಕ್‌ರನ್ನು ಈಗ ಸುಮಾರು ಹದಿನೇಳು ವರ್ಷಗಳ ಹಿಂದೆ ಡರ್ಬಾನ್‌ನಲ್ಲಿ ನೋಡುವ ಸುಯೋಗ ನನಗೊದಗಿತ್ತು. ಹಲವಾರು ಘಟನೆಗಳನ್ನು ಮಾಲೆ ಹೆಣೆದು ಈಕೆ ಚಿತ್ರಿಸಿರುವ ಈ ಗಾಂಧೀ ವ್ಯಕ್ತಿಚಿತ್ರದಿಂದ, ಗಾಂಧೀಜಿಯ ನಾಯಕತ್ವದಲ್ಲಿ ನಡೆಯುತ್ತಿದ್ದ ಸತ್ಯಾಗ್ರಹದಲ್ಲಿ — ಆಗ ಅದು ಏರಿಕೆಯಲ್ಲಿತ್ತು — ಭಾಗ ವಹಿಸಿದ ನಮ್ಮೆಲ್ಲರ ಆಗಿನ ಸುಖದುಃಖ ಬೆರೆತ ನೋವು ಸ್ಪಷ್ಟವಾಗಿ ಜ್ಞಾಪಕಕ್ಕೆ ಬರುತ್ತಿದೆ.

ಶ್ರೀಮತಿ ಪೋಲಕ್ ತುಂಬಾ ನೋವುಗೊಂಡಿದ್ದುದು ಸ್ಪಷ್ಟ ವಾಗಿತ್ತು, ಆದರೂ ತನ್ನ ಮನೆಗೆ ನನ್ನನ್ನು ಕರೆದುಕೊಂಡು ಹೋಗುವಾಗ ಆಕೆಯ ಮುಖದಲ್ಲಿ ಮಿಂಚುತ್ತಿದ್ದ ಕಾಂತಿ ಆಕೆಯೊಳ ಗಿನ ಉಜ್ವಲ ಆನಂದವನ್ನು ಸಾರಿ ಹೇಳುತ್ತಿತ್ತು.

ಗೋಖಲೆಯವರ ಹೇಳಿಕೆಯಂತೆ ದಕ್ಷಿಣ ಆಫ್ರಿಕದ ಭಾರತೀ ಯರ ಸಮಸ್ಯೆಯನ್ನು ಭಾರತಕ್ಕೆ ವಿವರಿಸಲು ಆಕೆಯ ಗಂಡ ಬರು ವಾಗ ಆತ ದಸ್ತಗಿರಿಯಾದ್ದರಿಂದ, ಆತನ ಬದಲು ಈಕೆಯೇ ಆಗ ಸೇರಲಿದ್ದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸಿಗೆ ಹೋಗಬೇಕೆಂದು ಅಲ್ಲಿನ ಭಾರತೀಯರು ಒತ್ತಾಯ ಮಾಡಿದರು; ಆಕೆ ಪ್ರಯಾಣ ಹೊರಟೂ ಇದ್ದಳು. ಆಗ ಗೋಖಲೆಯವರೇ ನಾನು ಅಲ್ಲಿಗೆ ಬರುತ್ತಿದೇನೆಂದು ಹೇಳಿ ಆಕೆಯನ್ನು ಹಿಂದಕ್ಕೆ ಕರೆಸಿಕೊಂಡರು.

ನಾನಲ್ಲಿಗೆ ಬರಲಿಕ್ಕೆ ಸ್ವಲ್ಪ ಮುಂಚೆ ಆಕೆಯ ಗಂಡ ಹೆನ್ರಿ ಪೋಲಕ್-ಕೆಲವು ವರ್ಷಗಳಿಂದ ನನಗೆ ಇವರ ಪರಿಚಯವಿತ್ತು- ಗಾಂಧೀಜಿಯೊಂದಿಗೆ ಸೆರೆಯಿಂದಹೊರಗೆ ಬಂದರು ಆತ ಸೆರೆಯ ಕಷ್ಟವನ್ನು ನಗುನಗುತ್ತ ಸಹಿಸಿದ್ದರೂ ಬಡವಾಗಿದ್ದ. ಆದರೂ ಭಾರತದ ಬಗ್ಗೆ ಅದೇ ಉತ್ಸಾಹವಿತ್ತು ಅಡ್ಡಬಂದ ನೂರಾರು

ಕಷ್ಟಗಳನ್ನು ಆಕೆಯೂ ಆತನೂ, ತಮ್ಮ ಮಕ್ಕಳೊಂದಿಗೆ ನಗು ನಗುತ್ತಾ ಗೆದ್ದಿದ್ದರು. ಅವರೂ ಅವರ ಸಹೋದ್ಯೋಗಿಗಳೂ ಉಸಿರಾಡಿಸುತ್ತಿದ್ದ ಗಾಳಿಯಲ್ಲೇ ಗೆಲವಿನ ಭರವಸೆಯಿತ್ತು.

ದಕ್ಷಿಣ ಆಫ್ರಿಕದಲ್ಲಿದ್ದಾಗ ಹೆನ್ರಿ ಪೋಲಕ್‌ರ ಗೆಳೆಯರಾಗಿದ್ದ ಜೊಹಾನೆಸ್‌ಬರ್ಗಿನ ರೆ. ಡೋಕ್ ಪೋಲಕ್ ಬಗ್ಗೆ ಹೀಗೆ ಬರೆದಿದಾರೆ :—

"ನ್ಯಾಯಾಲಯದಲ್ಲಿ ಈತ ಬ್ರಿಟಿಷ್ ಭಾರತೀಯರ ಲಾಯರು ; ತನ್ನ ಆಫೀಸಿನಲ್ಲಿ ಅವರ ಸಲಹೆಗಾರ; ಸಾದಾ ರೀತಿಯಲ್ಲಿ ಅವರ ಗೆಳೆಯ. ಭಾರತೀಯರ ಹಿತರಕ್ಷಣೆಗಾಗಿ ಪೋಲಕ್ ದಕ್ಷಿಣ ಆಫ್ರಿಕದಲ್ಲೆಲ್ಲಾ ಭಾಷಣ ಮಾಡಿದರು, ಬರೆದರು ; ತಮ್ಮನ್ನೇ ತಾವು ಅದಕ್ಕೆ ಧಾರೆ ಎರೆದುಕೊಂಡರು ಏನೇ ಆಗಲಿ ಹಿಡಿದಿದ್ದನ್ನು ಬಿಡದ ಆ ಕೆಚ್ಚು ಅದ್ಭುತವಾದ್ದು. ಎಲ್ಲಾ ಮಹಾ ಜನನಾಯಕರಂತೆ, ಹೆನ್ರಿ ಪೋಲಕ್‌ರಂಥವರ ತೀವ್ರ ಶ್ರದ್ಧೆಯನ್ನು ತಮ್ಮ ಕಡೆ ಸೆಳೆದುಕೊಳ್ಳಬಲ್ಲ ಮೋಡಿ ಗಾಂಧೀಜಿಯಲ್ಲೂ ಇತ್ತು."

ಶ್ರೀಮತಿ ಪೋಲಕ್ ಬಗ್ಗೆ ಗಾಂಧೀಜಿಯ "ದಕ್ಷಿಣ ಆಫ್ರಿಕಾದಲ್ಲಿ ಸತ್ಯಾಗ್ರಹ" ಹೀಗೆ ಹೇಳುತ್ತದೆ. "ಭಾರತದ ಜನರಿಗೆ ಶ್ರೀಮತಿ ಪೋಲಕ್‌ರ ಪರಿಚಯವಿದೆ. ಆಕೆ ತನ್ನ ಗಂಡನ ದಾರಿಗೆ ಅಡ್ಡ ಬರಲಿಲ್ಲ. ಅಷ್ಟೇ ಅಲ್ಲ; ಹೋರಾಟದ ಕಾಲದಲ್ಲಾಕೆ ತುಂಬಾ ಸಹಾಯಕಳಾಗಿದ್ದಳು.

ಗಾಂಧೀಜಿಯ ಸುತ್ತು ಸೇರಿದ್ದ ಐರೋಪ್ಯ ಗೆಳೆಯರ ಕಿರಿ ಗುಂಪಿನಲ್ಲಿ ಪೋಲಕ್ ದಂಪತಿಗಳು ಅವರ ಜೊತೆಗೆ ಕೆಲಸಗಾರರಾದದ್ದಷ್ಟೇ ಅಲ್ಲ, ಅವರ ಸಂಗಡ ಅವರ ಮನೆಯಲ್ಲೇ ಇದ್ದು, ಅವರ ಗೃಹ ಜೀವನದಲ್ಲಿ ಅವರೊಂದಿಗೇ ಒಂದಾಗಿ ಬೆರೆತು ಹೋಗಿದ್ದರು. ಅವರ ಹಿರಿಯ ಮಗ ವಾಲ್ಡೊ ಗಾಂಧೀಜಿಗೆ ತುಂಬಾ ಪ್ರಿಯವಾಗಿದ್ದ. ಕೆಲವರ್ಷಗಳ ಹಿಂದೆ ಇದ್ದಕ್ಕಿದ್ದ ಹಾಗೆ ಅವನು ತೀರಿಕೊಂಡ. ಈ ಅನಿರೀಕ್ಷಿತ ಸುದ್ದಿ ಬಂದಾಗ ನಾನು ಡರ್ಬಾನ್‌ನಲ್ಲಿದ್ದೆ. ಮೊದ

ಮೊದಲ ದಿನಗಳಲ್ಲೇ ಇವರ ಪರಿಚಯವಿದ್ದ ಭಾರತೀಯರು ಈ ದುಃಖಸಮಯದಲ್ಲಿ ಮಗನನ್ನು ಕಳೆದುಕೊಂಡ ತಂದೆತಾಯಿಗಳಿಗೆ ತೋರಿಸಿದ ಅನುತಾಪ, ಪ್ರೇಮ ನಿಜವಾಗಿಯೂ ಹೃದಯಸ್ಪರ್ಶಿಯಾದ್ದು, ನನಗಂತೂ ಕಣ್ಣು ತೆರೆಯಿತು

ಈ ಸರಳ ಸಂಬಂಧಗಳನ್ನು ದೀರ್ಘವಾಗಿಯಾದರೂ ಪರವಾ ಇಲ್ಲ, ವಿವರಿಸುವುದು ಸರಿಯಾದ್ದೆ ಗ್ರಂಥಕ್ಕೆ ಅದೇ ಸರಿಯಾದ ಮುನ್ನುಡಿ ಅಷ್ಟೇ ಅಲ್ಲ ಗ್ರಂಥಲೇಖಕರನ್ನು ನಾವೂ ಬಲು ಬೇಗ ಅರಿತುಕೊಳ್ಳಲು ಸಹಾಯವಾಗುತ್ತದೆ ಗಾಂಧೀಜಿಯ ಸೇವಾ ಜೀವನದ ಬಾಳನ್ನು ಕಥೆಯ ಮೇಲೆ ಕಥೆ ಹೇಳಿ ನೇರವಾದ, ಜೀವಂತ ಶೈಲಿಯಲ್ಲಿ ಹೇಳಿಕೊಂಡು ಹೋಗುತ್ತಿರುವಾಗ, ಈಕೆ ತನಗೆ ತಿಳಿಯದಂತೆ ತನ್ನ ಸ್ವತಂತ್ರ ಮನೋಧರ್ಮದ ಅಂತರಂಗವನ್ನು ನಮಗೆ ತೋರುತ್ತಾಳೆ. ಕಥೆ ಹೇಳುವ ರೀತಿಯು ಸರಳತನದಿಂದ ಇದು ಮತ್ತಷ್ಟು ಪರಿಣಾಮಕಾರಿಯಾಗಿದೆ; ಅಷ್ಟು ಸಹಜವಾದ ಓಜಸ್ಸಿದೆಯೆಂತಲೇ ತುಂಬಾ ಪ್ರಭಾವಶಾಲಿಯಾಗಿದೆ ಈಕೆಯ ಬರಹ ಗಾಂಧೀಜಿಯ ವಿಚಿತ್ರ ಮನೋಧರ್ಮವನ್ನು ಎದ್ದು ಕಾಣುವಂತೆ ಮಾಡಲು ಈ ಗ್ರಂಥಕ್ಕಿಂತ ಉತ್ತಮವಾದ ಪ್ರಭಾವಳಿ ಇನ್ನಿಲ್ಲ. ಗಾಂಧೀಜೀ ಮುಗಿಲಿನಲ್ಲಿ ಹಾರುವಾಗ-ತನಗೂ ಹಾರಲು ಬೇಕಾದ ಕಲ್ಪನಾವಿಲಾಸವಿದ್ದರೂ-ಸತ್ಯವಾದ ಸಂಗತಿಗಳ ಮೇಲೆ ನಿಂತು ಈಕೆ ವಿಮರ್ಶೆ ಮಾಡುತ್ತಾಳೆ. ತಾನೇ ಆದರ್ಶಜೀವಿಯಾದರೂ ವಿಚಿತ್ರವಾದ ವ್ಯವಹಾರಬುದ್ಧಿ, ಕೂರಾದ ದೃಷ್ಟಿಗಳಿಂದ ಗಾಂಧೀಜಿಯ ತತ್ವಗಳನ್ನು ಪರೀಕ್ಷಿಸಿ, ಅತಿ ಎಂದು ಕಂಡುಬಂದುದನ್ನು ತಡೆಯುತ್ತಾಳೆ. ಹೀಗೆ ಈಕೆ ಗಾಂಧೀಜಿಯ ಬಗ್ಗೆ ಮೂಡಿದ್ದ ಎಲ್ಲ ಕಟ್ಟುಕತೆಗಳನ್ನು ತೊಲಗಿಸಿ, ಗಾಂಧೀಜೀ ಜಗತ್ತಿನಲ್ಲೆಲ್ಲಾ ಅತ್ಯಂತ ಮೃದುವಾದ ಜೀವ, ಹಸುಮಗುವಿನಂಥ ದೀನತನ ಅವರದು, ಎಂದು ತೋರಿಸಿಕೊಟ್ಟಿದಾಳೆ.

ಇದನ್ನೆಲ್ಲಾ ಈ ಗ್ರಂಥವನ್ನೋದುವಾಗ ವಾಚಕರು ತಾವೇ ಕಂಡುಕೊಳ್ಳುತ್ತಾರೆ; ಗಾಂಧೀಜಿಯ ರಮ್ಯಮಾನವತೆ ಆಶ್ಚರ್ಯಾ

ದ್ಭುತವಾಗಿ ಕಂಡುಬರುತ್ತದೆ. ಅಂತರಾತ್ಮದ ಪ್ರಕಾಶ, ಸೌಂದರ್ಯ ದಲ್ಲಿ ಅಸಿಸಿಯ ಸಂತ ಫ್ರಾನ್ಸಿಸನನ್ನು ಸರಿಹೋಲುವ ವ್ಯಕ್ತಿಯನ್ನಿಲ್ಲಿ ಕಾಣುತ್ತಾರೆ. ಯಾವಾಗಲೂ ಅನನುಕೂಲತೆಯೇ ತನಗೆ ಬೇಕೆಂದು ಒತ್ತಾಯ ಮಾಡುತ್ತಿದ್ದ, ಹಟಮಾರಿಯಾದರೂ ಪ್ರಿಯನಾದ ಸಂತ ನೊಂದಿಗೆ ಒಂದೇ ಮನೆಯಲ್ಲಿದ್ದು, ದಿನಜೀವನದ ಬಳಕೆಯಲ್ಲಿ ಇದಿರಾದ ನೂರು ಸಮಸ್ಯೆಗಳಲ್ಲಿ, ಕಷ್ಟಗಳಲ್ಲಿ ಶ್ರೀಮತಿ ಪೋಲಕ್‌ ಳೊಂದಿಗೆ ಓದುಗರೂ ಪಾಲುಗೊಳ್ಳುತ್ತಾರೆ. ಇದನ್ನು ಓದುವಾಗ ಒಂದೊಂದಾಗಿ ಗಾಂಧೀಜಿಯ ಬಗ್ಗೆ ಹುಟ್ಟಿದ ಕಟ್ಟು ಕತೆಗಳೆಲ್ಲವೂ ತೊಲಗಿ ಹೋಗಿ ಈಕೆಯ ಕಥನದಲ್ಲಿ ಅವರ ವ್ಯಕ್ತಿತ್ವ ಮತ್ತಷ್ಟು ಬೆಳಗುತ್ತದೆ; ಗಾಂಧೀಜೀ ನಮ್ಮ ಎದೆಗೆ ಮತ್ತಷ್ಟು ಹತ್ತಿರ ಬರು ತ್ತಾರೆ, ಪ್ರಿಯರಾಗುತ್ತಾರೆ.

ಸಿ. ಎಫ್. ಆಂಡ್ರೂಸ್

---

ಇಂಗ್ಲಿಷಿನಲ್ಲಿ Gandhi the Man ಎಂದು ಪ್ರಕಟವಾದ ಪುಸ್ತಕವನ್ನು ನನ್ನ ಕಿರಿಗೆಳೆಯ ಶ. ರಾ ಸುಬ್ಬರಾಯರು ಕನ್ನಡಕ್ಕೆ ಅನುವಾದಿಸಿದಾರೆ. ಗಾಂಧೀ ಸಾಹಿತ್ಯದಲ್ಲಿ ಇದನ್ನು ಸಂತೋಷದಿಂದ ಪೋಣಿಸಿದೇನೆ.

ಗಾಂಧೀಜಿಯ ವ್ಯಕ್ತಿತ್ವ ತುಂಬಾ ದೊಡ್ಡದು. ಒಬ್ಬೊಬ್ಬರದು ಒಂದು ಬಗೆಯ ಅನುಭವ. ಲಿಲ್ಲೀ ಪೋಲಕರ ಈ ಅನುಭವ ಕಥನದಲ್ಲಿ ಗಾಂಧೀಜಿಯ ಮಾನವತೆ ಸ್ಪಷ್ಟವಾಗಿ ವರ್ಣಿತವಾಗಿದೆ. ಅವರ ಮನಸ್ಸು ಹಂತಹಂತಹಾಗಿ ಹೇಗೆ ತೂಗುತ್ತ ಬಂತೋ ತಿಳಿಯುತ್ತದೆ.

ಸಿದ್ದವನಹಳ್ಳಿ ಕೃಷ್ಣಶರ್ಮ

---

# ಗಾಂಧೀಜೀ

## ೧

ಮಹಾತ್ಮಾ ಗಾಂಧೀಜಿಗೂ ನನಗೂ ಪ್ರಥಮ ಪರಿಚಯವಾದದ್ದು ೧೯೦೫ರಲ್ಲಿ. ನಾನಾಗ ಲಂಡನ್‌ನಲ್ಲಿದ್ದೆ; ಬೇಗನೆ ದಕ್ಷಿಣ ಆಫ್ರಿಕಾಕ್ಕೆ ಹೋಗಿ ನನ್ನ ನಲ್ಲ ಹೆನ್ರಿ ಎಸ್. ಎಲ್. ಪೋಲಕ್‌ನನ್ನು ಮದುವೆಯಾಗಲು ಯಾವಾಗ ಅನುಕೂಲವಾದೀತೊ ಎಂದು ಕಾದಿದ್ದೆ. ಲಂಡನ್ನಿನ ಇನ್ನರ್ ಟೆಂಪಲಿನ ಶ್ರೀಯುತ ಗಾಂಧೀ ಜೊಹಾನೆಸ್‌ಬರ್ಗ್‌ನಲ್ಲಿ ವಕೀಲರಾಗಿದ್ದರು. ನನ್ನ ನಲ್ಲ ಅವರ ಜೊತೆಯಲ್ಲಿ ಕೆಲಸಮಾಡಲು ಗೊತ್ತುಮಾಡಿಕೊಂಡಿದ್ದರು.

ಕೆಲ ದಿನದಿಂದ ನನ್ನ ಆರೋಗ್ಯ ಚೆನ್ನಾಗಿರಲಿಲ್ಲ. ನನ್ನ ನಲ್ಲನ ಬಳಿಗೆ ನಾನು ಹೋಗಲಿದೇನೆಂದು ಕೇಳಿ, ಅವರ ತಂದೆ ವಸಾಹತಿನಲ್ಲಿರಲು ಬೇಕಾದ ದೇಹದಾರ್ಢ್ಯ ನನಗಿಲ್ಲದುದರಿಂದ, ನಿಮ್ಮ ದಾಕ್ಷಣ್ಯ ಉಪಯೋಗಿಸಿ ಮದುವೆ ಅನಿಶ್ಚಿತ ಕಾಲದವರೆಗೆ ಮುಂದುವರಿಯುವಂತೆ ಮಾಡಿ ಎಂದು ಗಾಂಧೀಜಿಗೆ ಕಾಗದ ಬರೆದರು. ಅದಕ್ಕೆ ಗಾಂಧೀಜೀ ಅವರಿಗೆ ಕೊಟ್ಟ ಪ್ರತ್ಯುತ್ತರ, ಆಮೇಲೆ ನನಗೆ ಬರೆದ ಕಾಗದ—ಅದೇ ನನಗೆ ಗಾಂಧೀಜೀ ಬರೆದ ಮೊಟ್ಟಮೊದಲನೆ ಕಾಗದ—ನಮ್ಮಿಬ್ಬರ ಸಂಬಂಧವನ್ನು ನಿಶ್ಚಯಿಸಿತು; ಅರಿತು ಪ್ರೀತಿಸುವ ಹಿರಿಯಣ್ಣನಾದರು ನನಗೆ ಗಾಂಧೀಜೀ. ನನಗೆ ಆ ಕಾಗದ ಅವರ ಮಾನವೀಯ ಮೃದುತ್ವವನ್ನು ತೋರಿಸಿಕೊಟ್ಟಿತು.

ಶ್ರೀ ಪೋಲಕ್‌ಗೆ—ನನ್ನ ನಲ್ಲನ ತಂದೆ—ಗಾಂಧೀಜೀ ‘ ನೀವು ಹೇಳುವಾಕೆಯ ಆರೋಗ್ಯ ಲಂಡನ್ನಿನಲ್ಲಿ ಚೆನ್ನಾಗಿಲ್ಲದಿದ್ದರೆ, ಆಕೆ ಆದಷ್ಟು ಬೇಗ ಲಂಡನ್ ಬಿಡಲು ಅದೇ ಕಾರಣ ಸಾಕು. ದಕ್ಷಿಣ ಆಫ್ರಿಕದಲ್ಲಿಯ ಪ್ರೀತಿಪೂರ್ಣವಾದ ಉಪಚಾರ, ಸುಂದರವಾದ ಹವೆ, ಸರಳ ಜೀವನದಿಂದ ಆಕೆ ಬೇಗ ಆರೋಗ್ಯ ಪಡೆಯಬಹುದು ’ ಎಂದು ಕಾಗದ ಬರೆದರು. ತಮ್ಮ ಮನೆಗೇ ಬರಬೇಕು, ಅಲ್ಲಿ

ಸಾಧ್ಯವಾದ ಎಲ್ಲಾ ಉಪಚಾರವನ್ನೂ ಒದಗಿಸುತ್ತೇನೆ ಎಂದು ನನಗೆ ಬರೆದರು ನನ್ನ ನಲ್ಲ ಆಗ ಅವರ ಮನೆಯವನಾಗಿ ಅವರ ಮನೆಯಲ್ಲೇ ಇದ್ದುಬಿಟ್ಟಿದ್ದ.

ಇದಾದ ಮೇಲೆ ಗಾಂಧೀಜೀ ಎರಡು ಮೂರು ವಿಶ್ವಾಸದ ಪತ್ರ ಬರೆದರು. ಆಮೇಲೆ ೧೯೦೫ನೆ ಡಿಸೆಂಬರ್ ೩೦ನೆ ಪ್ರಾತಃಕಾಲ ಆರು ಘಂಟೆಗೆ ಜೊಹಾನೆಸ್‌ಬರ್ಗಿನ ಜೆಪ್ಪೆ ನಿಲುತಾಣದಲ್ಲಿ ಕಾಲಿಟ್ಟೆ. ಗಾಂಧೀಜೀ, ಪೋಲಕ್ ಇಬ್ಬರೂ ನಿಲುಮನೆಯಲ್ಲಿ ನನಗಾಗಿ ಕಾಯುತ್ತಿದ್ದರು.

ನಡು ಎತ್ತರದ ತೆಳುವಾದ ಮೈ ಕಟ್ಟು; ಅಷ್ಟು ಕಪ್ಪಲ್ಲದ ಬಣ್ಣ; ದೊಡ್ಡ ತುಟಿಗಳ ಬಾಯಿ; ಸಣ್ಣ ಕಪ್ಪು ಮೀಸೆ; ಮಾತನಾಡುವಾಗ ಒಳಗಿನಿಂದ ಬೆಳಗುತ್ತಿದ್ದ, ಮತ್ತಾರಿಗೂ ಇರದಂಥ ಅತ್ಯಂತ ಕರುಣಾಪೂರ್ಣ ಕಣ್ಣುಗಳು—ಇದು ಮೊದಲ ಬಾರಿಗೆ ನಾ ಕಂಡ-ಗಾಂಧೀಜಿಯ ಮೂರ್ತಿ ಕಣ್ಣುಗಳೇ ಅವರ ಅಂಗಾಂಗಗಳಲ್ಲೆಲ್ಲಾ ಯಾವಾಗಲೂ ಪ್ರಧಾನ. ವಾಸ್ತವವಾಗಿ ಅವು ಅವರ ಆತ್ಮದೀಪ; ಅವುಗಳಲ್ಲಿ ಎಷ್ಟೋ ಓದಬಹುದಾಗಿತ್ತು. ಅವರ ಧ್ವನಿ ಮಿದು, ಸ್ವರಪೂರ್ಣ; ಹುಡುಗತನದ ಹೊಸತು ಅವರ ಧ್ವನಿಯಲ್ಲಿತ್ತು ಮನೆಗೆ ಹೋಗುತ್ತಾ ದಾರಿಯಲ್ಲಿ ನನ್ನ ಪ್ರಯಾಣದ ಆ ಈ ವಿಷಯಗಳನ್ನು ಮಾತಾಡುವಾಗ ನಾನಿದನ್ನು ಗಮನಿಸಿದೆ

ಊರ ಹೊರಗೆ, ಸಾಧಾರಣ ಮಧ್ಯಮ ವರ್ಗದ ನೆರೆಹೊರೆಯಲ್ಲಿತ್ತು ಅವರ ಮನೆ. ಹೊಸ ಬಂಗಲೆಗಳ ರೀತಿಯ ಎಂಟು ಕೋಣೆಯ ಎರಡಂತಸ್ತಿನ ಮನೆ. ಮನೆಯ ಸುತ್ತು ತೋಟ ಮುಂದುಗಡೆ ಕೋಪ್ಜೆಯ (ದಕ್ಷಿಣ ಆಫ್ರಿಕದಲ್ಲಿ ಗುಡ್ಡಕ್ಕೆ ಈ ಹೆಸರಿದೆ) ಬಯಲು. ಮಹಡಿಯ ಕೈಸಾಲೆ, ಬೇಕೆನ್ನಿಸಿದರೆ ಮಲಗಬಹುದಾದಷ್ಟು ವಿಶಾಲವಾಗಿತ್ತು. ಬೇಸಿಗೆ ಕಾಲದಲ್ಲಿ ಎಷ್ಟೋ ಸಲ ಅಲ್ಲೇ ಮಲಗುತ್ತಲೂ ಇದ್ದರು.

ಮನೆಯಲ್ಲಿ ಗಾಂಧೀಜೀ, ಅವರ ಹೆಂಡತಿ, ಮೂರು ಜನ ಮಕ್ಕಳು—ಹನ್ನೊಂದು ವರ್ಷದ ಮಣಿಲಾಲ, ಒಂಭತ್ತು ವರ್ಷದ ರಾಮದಾಸ್, ಆರು ವರ್ಷದ ದೇವದಾಸ್—ತಂತಿ ಕೆಲಸದಲ್ಲಿದ್ದ ಇಂಗ್ಲಿಷ್ ಹುಡುಗನೊಬ್ಬ, ಗಾಂಧೀಜಿಯ ರಕ್ಷಣೆಯಲ್ಲಿದ್ದ ಭಾರತೀಯ ಯುವಕನೊಬ್ಬ, ಶ್ರೀ ಪೋಲಕ್ ಇಷ್ಟು ಜನ ಇದ್ದರೆಂದು ಗೊತ್ತಾಯಿತು ನಾನೂ ಆ ಸಂಸಾರಕ್ಕೇ ಸೇರಿದ್ದರಿಂದ ಮನೆ ಪೂರಾ ತುಂಬಿಹೋಯಿತು.

ಅದೇ ಬೆಳಿಗ್ಗೆಯೆ ಟ್ರಾನ್ಸ್‌ವಾಲ್‌ನ ವರ್ಣ ವ್ಯವಹಾರದ ಕಟುಪರಿಸ್ಥಿತಿಯ ಪ್ರಥಮಾನುಭವವೂ ನನಗೆ ಆಯಿತು. ನ್ಯಾಯಾಧೀಶರ ಕಛೇರಿಯಲ್ಲಿ ವಿಧಿಪೂರ್ವಕವಾಗಿ ನಾವು ಮದುವೆ ಆಗಲಿರುವೆವೆಂದು ತಿಳಿಸಿದ್ದೆವು ನಾಗರಿಕ ಶಾಸ್ತ್ರಕ್ಕಾಗಿ ಮದುವೆಗಳ ರಿಜಿಸ್ಟ್ರಾರ್‌ರ ಬಳಿಗೆ ಹೋದಾಗ ಎಲ್ಲಾ ಸರಿಯಾಗಿದೆ ಎಂದೇ ತಿಳಿದುಕೊಂಡಿದ್ದೆವು. ಅಗತ್ಯವಾದ ವಿವರಗಳನ್ನೆಲ್ಲಾ ತಿಳಿದುಕೊಂಡಾದ ಮೇಲೆ ಆತ ಬರುತ್ತೇನೆಂದು ಹೇಳಿ ಹೋದವನು ಸ್ವಲ್ಪ ಹೊತ್ತು ಮಾಯವಾಗಿ ಬಿಟ್ಟ. ಸಮಾಗಾಶ್ಚರ್ಯವಾಯಿತು. ಆ ಹೊತ್ತು ಶನಿವಾರ, ಮಧ್ಯಾಹ್ನದ ವೇಳೆಗೆ ಆಫೀಸು ಮುಚ್ಚುತ್ತಿತ್ತು; ಅದಕ್ಕಾಗಿ ಆತುರವೂ ಇತ್ತು. ಏಕಿಷ್ಟು ತಡ ಮಾಡುತ್ತಿದಾರೆ ಎಂದು ವಿಚಾರಿಸಲು ಗಾಂಧೀಜಿಯೇ ಮುಖ್ಯ ನ್ಯಾಯಾಧೀಶರ ಆಫೀಸಿಗೆ ಹೋದರು. ಮುಖ್ಯ ನ್ಯಾಯಾಧೀಶರು ಗಾಂಧೀಜಿಗೆ ಕೆಲ ವರ್ಷಗಳಿಂದ ಗೊತ್ತಿದ್ದ ಗೆಳೆಯರು, ದಿವ್ಯಜ್ಞಾನ ಸಮಾಜದ ಸದಸ್ಯರು; ಅವರ ಜೊತೆಯಲ್ಲಿ ಗಾಂಧೀಜೀ ಹಿಂದೂ ವೇದಾಂತ ಶಾಸ್ತ್ರವನ್ನು ಅಭ್ಯಾಸ ಮಾಡಿದ್ದರು. ಗಾಂಧೀಜೀ ಸ್ವತಃ ಆ ಸಮಾಜದ ಸದಸ್ಯರಲ್ಲದಿದ್ದರೂ, ಸದಸ್ಯರಾದ ಎಷ್ಟೋ ಜನ ಗೆಳೆಯರಿದ್ದರು ಗಾಂಧೀಜಿಗೆ. ಶಾಂತ ಪರಿಸ್ಥಿತಿಯಿದ್ದ ಆ ಕೆಲ ವರ್ಷಗಳಲ್ಲಿ ಆಗಾಗ ಆ ಸಮಾಜದಲ್ಲಿ ಗಾಂಧೀಜೀ ಭಾಷಣ ಮಾಡುತ್ತಿದ್ದರು.

ಅಲ್ಲಿ ಆತ ಈ ವಿವಾಹ ವಿಧಿಬದ್ಧವಾದ್ದಲ್ಲವೆಂದು ತಕರಾರು ತೆಗೆದದ್ದನ್ನು ಕೇಳಿ ಗಾಂಧೀಜಿಗೆ ಆಶ್ಚರ್ಯವಾಯಿತು. ಟ್ರಾನ್ಸ್

ವಾಲ್ ವಿವಾಹಶಾಸನದ ಪ್ರಕಾರ ಬಿಳಿಯ ಮತ್ತು ಬಣ್ಣದ ಜನರ ಸಂಕರ ವಿವಾಹ ನಿಷಿದ್ಧವಾದದ್ದು ಅಂಥ ವಿವಾಹವನ್ನು ನೆರವೇರಿಸಿ ಕೊಟ್ಟ ವಿವಾಹದ ಅಧಿಕಾರಿಗೆ ಭಾರಿ ದಂಡ ಬೀಳುತ್ತಿತ್ತು. ಗಾಂಧೀಜೀ ಮತ್ತು ಇತರ ಭಾರತೀಯರ ಜೊತೆಯಲ್ಲಿ ಪೋಲಕ್ ಹೆಚ್ಚು ಇರುತ್ತಿದ್ದುದರಿಂದ, ಇವರೂ ಬಣ್ಣದ ಮನುಷ್ಯನೇ ಇರ ಬೇಕೆಂದು ರಿಜಿಸ್ಟ್ರಾರ್ ಭಾವಿಸಿದ್ದ ಸಮಾಜದ ಬಹಿಷ್ಕಾರಕ್ಕೆ ಗುರಿ ಯಾಗುವಂಥ, ಬಣ್ಣದ ಭೇದವನ್ನು ಮುರಿಯುವ ಧೈರ್ಯ ಯಾವ ಬಿಳಿಯವನು ತಾನೇ ಮಾಡಿಯಾನು? ರಿಜಿಸ್ಟ್ರಾರ್‌ಗೆ ಇದು ಹೊಳೆ ಯಲಿಲ್ಲ. ಒಂದೆರಡು ವರ್ಷದ ಹಿಂದೆ ನನ್ನ ನಲ್ಲನ ತಂದೆ ದಕ್ಷಿಣ ಆಫ್ರಿಕಾದಲ್ಲಿ ಸ್ವಲ್ಪ ದಿನ ಇದ್ದು ಹೋಗಲು ಬಂದಾಗ ತಾವು ಅವ ರನ್ನು ನೋಡಿದ್ದುದರ ಜ್ಞಾಪಕವನ್ನು ಗಾಂಧೀಜೀ ಮುಖ್ಯನ್ಯಾಯಾ ಧೀಶರಿಗೆ ಮಾಡಿಕೊಟ್ಟ ಮೇಲೆ ವಿವಾಹಶಾಸನವನ್ನು ಮುರಿಯುವ ಉದ್ದೇಶವಿಲ್ಲವೆಂದು ಆತನಿಗೆ ನಂಬಿಕೆ ಮಾಡಿಕೊಡುವುದು ಕಷ್ಟ ವಾಗಲಿಲ್ಲ. ಗಾಂಧೀಜೀ ಕನ್ಯಾಪಿತೃವಾಗಿ ನಿಂತು, ಮುಖ್ಯನ್ಯಾಯಾ ಧೀಶರೇ ಪುರೋಹಿತರಾಗಿ, ನಾವಿಬ್ಬರೂ ಬಿಳಿಯವರೆಂಬ ನಂಬಿಕೆಯ ಮೇಲೆ ನಮ್ಮ ವಿವಾಹವಾಯಿತು. ಸಂಜೆಯವರೆಗೂ ತಡವಾದುದರ ಕಾರಣ ನನಗೆ ಗೊತ್ತಿರಲಿಲ್ಲ. ಸಂಜೆಯ ಹೊತ್ತಿಗೆ ಗಾಂಧೀಜಿ ನಗು ನಗುತ್ತ ನಿಧಾನವಾಗಿ ಈ ವಿಚಾರ ತಿಳಿಸಿದರು.

ಮುಂದೇನು ಮಾಡಬೇಕೆಂದು ಮಧ್ಯಾಹ್ನ ಕೂತು ಚರ್ಚಿ ಸಿದೆವು. ಹುಡುಗರು ಶಾಲೆಗೆ ಹೋಗುತ್ತಿರಲಿಲ್ಲ. ಅವರ ತಂದೆಯೇ ಬೆಳಿಗ್ಗೆ ಹೊರಗೆ ಹೋಗುವಾಗ ಆ ದಿನದ ಪಾಠ ಇಂಥದೆಂದು ಹೇಳಿ ಹೋಗಿ, ಸಂಜೆಗೆ ಮನೆಗೆ ಹಿಂದಿರುಗಿದಾಗ ಹುಡುಗರು ಬರೆದುದನ್ನು ತಿದ್ದುತ್ತಿದ್ದರು ಹೀಗಾಗಿ ಗಾಳಿ ಬೀಸಿದ ಹಾಗೆ ನಡೆದಿತ್ತು ಅವರ ಓದು. ನಾನು ಪ್ರತಿದಿನ ಪ್ರಾತಃಕಾಲ ಮೂರು ಗಂಟೆಗಳ ಹೊತ್ತು ಇಂಗ್ಲಿಷು ಓದುವುದು, ಬರೆಯುವುದು, ಲೆಕ್ಕ, ವಾಕ್ಯರಚನೆ, ಪ್ರಾಥಮಿಕ ವ್ಯಾಕರಣದ ಪಾಠ ಹೇಳುವುದಕ್ಕೆ ಒಪ್ಪಿದೆ. ನಾನೂ

ನನ್ನ ಗಂಡನೂ, ಸದ್ಯಕ್ಕಾದರೂ ಅವರ ಸಂಸಾರದೊಂದಿಗೇ ಒಂದಾಗಿ ಅವರ ಮನೆಯಲ್ಲೇ ಇರಬೇಕೆಂದು ತೀರ್ಮಾನವಾಯಿತು.

ಗಾಂಧೀಜಿಯ ಹೆಂಡತಿಗೆ ಇಂಗ್ಲಿಷ್ ಮಾತನಾಡುವುದು ಹೆಚ್ಚಾಗಿ ಬರುತ್ತಿರಲಿಲ್ಲ. ಆದ್ದರಿಂದ ನಮ್ಮ ಚರ್ಚೆಗಳಲ್ಲಾಕೆ ಭಾಗ ವಹಿಸಲಿಲ್ಲ. ಮೊದಲ ದಿನ ನಾನಾಕೆಯನ್ನು ಹೆಚ್ಚು ನೋಡಲೂ ಇಲ್ಲ. ಇದಾದ ಕೂಡಲೇ ನಾವಿಬ್ಬರೇ ಒಂದಾಗಬೇಕಾಯಿತು. ಗಾಂಧೀಜೀ, ನನ್ನ ಗಂಡ ಇಬ್ಬರೂ ಕಚೇರಿಗೆ ಹೋಗುತ್ತಿದ್ದರು. ಮನೆಯಲ್ಲಿ ನಾವಿಬ್ಬರೇ. ಹೀಗಾಗಿ ನಾವಿಬ್ಬರೂ ಮಾತುಕತೆ ಯಾಡಲು ಆರಂಭಿಸಿದೆವು. ಸ್ವಲ್ಪ ದಿನದಲ್ಲೇ ಅವರ ಇಂಗ್ಲೀಷೂ ಉತ್ತಮವಾಯಿತು ಮುಂದೆ ಆಕೆಯೂ ನಾನೂ ಹೆಚ್ಚು ಗೆಳತಿಯ ರಾದ ಮೇಲೆ ಇಬ್ಬರೂ ಕೂಡಿ ನಮ್ಮ ಐರೋಪ್ಯ ಸ್ನೇಹಿತರು ಕೆಲವರ ಮನೆಗೆ ಹೋಗುತ್ತಿದ್ದೆವು. ಆಗ ಮಾತುಕತೆಯಲ್ಲಿ ಆಕೆಯೂ ಭಾಗ ವಹಿಸುತ್ತಿದ್ದರು.

ಗಾಂಧೀಜಿಗೆ ಉದಾರವಾದ ಅತಿಥಿಪ್ರೇಮ ಹುಟ್ಟುಗುಣ. ತಮ್ಮ ಐರೋಪ್ಯ ಗೆಳೆಯರಿಗೆ, ಭಾರತೀಯ ಮುಖಂಡರಿಗೆ ನನ್ನ ಪರಿಚಯ ಮಾಡಿಕೊಡುವ ಆಸೆ ಅವರಿಗೆ. ಭಾರತೀಯ ಮುಖಂಡ ರಿಗೆ ನನ್ನ ಗಂಡನಲ್ಲೂ ಸ್ವಲ್ಪ ಗೌರವವಿತ್ತು. ಮರು ಶನಿವಾರ ಪರಿಚಯಕ್ಕಾಗಿ ಒಂದು ಔತಣ ಏರ್ಪಡಿಸಲು ನಿಶ್ಚಯವಾಯಿತು. ಎರಡು ದಿವಾನಖಾನೆಗಳಿಗೆ ಕೆಲವು ಹೊಸ ಕುರ್ಚಿ, ಮೇಜು ಕೊಂಡು ತರಲು ಸುಮಾರು ಐವತ್ತು ಜನ ಅತಿಥಿಗಳ ಊಟ ಉಪಚಾರಕ್ಕೆ ಬೇಕಾದ ಏರ್ಪಾಟು ಮಾಡಲು ನನ್ನನ್ನೇ ಬಿಟ್ಟಿದ್ದರು ಮನೆಯ ಲ್ಲಿದ್ದವನು ಒಬ್ಬನೇ ಆಳು-ಗಲಾಲ್; ಸುಸ್ವಭಾವಿ ಹಿಂದೂ ಹುಡುಗ- ಔತಣಕ್ಕೆ ಅಣಿ ಮಾಡಲು ಉತ್ಸಾಹದಿಂದ ನೆರವಾದ ಹಿಂದಿನ ಗುರುವಾರ ರಾತ್ರಿ ಅವನಿಗೇನೋ ಸ್ಫೂರ್ತಿ ಬಂತು. ಗುಜರಾತಿಯಲ್ಲಿ ಗಾಂಧೀಜಿಯನ್ನೇನೋ ಕೇಳಿದ ಅವರೂ ಆಗಲೆಂದರು. ಶನಿವಾರದ ಔತಣದ ಹೊತ್ತಿಗೆ ಊಟದ ಮನೆಗೆ ಸುಣ್ಣ ಬಳಿದು ಬೆಳ್ಳಗೆ ಮಾಡ ಬೇಕೆಂದಿದ್ದ ತನ್ನ ಕೆಲಸವನ್ನು ಶುಕ್ರವಾರದ ದಿನ ಗಲಾಲ್

ಆರಂಭಿಸಿದ. ನಮಗಾಗಿ ಕೋಣೆಯನ್ನು ಅಂದಗೊಳಿಸಬೇಕೆಂದು ನನ್ನ ಗಂಡ ಮಾಡುತ್ತಿದ್ದ ಅಪರಿಮಿತ ಪ್ರಯತ್ನದಿಂದ ಸುಣ್ಣ ಬಕೀಟು ಬ್ರಷ್ಷು ಎಲ್ಲಾ ಮನೆಯಲ್ಲೇ ಇದ್ದವು ಇದರಿಂದ ಗಲಾಲನ ಬುದ್ಧಿ ಚಿಗುರಿ, ಉತ್ಸಾಹ ತುಂಬಿ, ಎಂದೂ ಮಾಡದ ಹೊಸ ಕೆಲಸಕ್ಕೆ ಕೈ ಹಾಕಿಸಿದವು. ಆದರೆ ಪಾಪ! ಉತ್ಸಾಹವಿದ್ದಷ್ಟು ಕಾರ್ಯಚತುರತೆ ಇರಲಿಲ್ಲ ಅಂತೇ ಈ ಪ್ರಯತ್ನದಿಂದ ಅನಾಹುತವೇ ಆಯಿತು. ಒಳ್ಳೆಯ ಉದ್ದೇಶದಿಂದಲೇ ಮಾಡಿದ ಈ ಕೆಲಸದ ಪರಿಣಾಮ ಬೇರೆ ಆಯಿತು. ಛಾವಣಿಗೆ ಬಳಿದಷ್ಟೇ ಸುಣ್ಣ ಚೆನ್ನಾಗಿದ್ದ ಗೋಡೆಯ ಕಾಗದದ ಮೇಲೂ ಬಿದ್ದು ಅದು ಅಂದಗೆಟ್ಟಿತು.

ಸಾಯಂಕಾಲ ಮನೆಗೆ ಬಂದಾಗ ಕೋಣೆಗಾದ ಅವಸ್ಥೆ ನೋಡಿ ಗಾಂಧೀಜೀ ಗಾಬರಿಯಾಗಿ ಹೋದರು. ಅವರು ಗಲಾಲನ ಸಲಹೆಯನ್ನು ಪೂರಾ ಅರ್ಥ ಮಾಡಿಕೊಂಡಿರಲಿಲ್ಲವೆಂಬುದು ಸ್ಪಷ್ಟವಾಗಿತ್ತು. ಒಬ್ಬ ವೇದಾಂತಿಯ ಹಾಗೆ ಕೈ ಆಡಿಸಿ ಗಾಂಧೀಜೀ ಮನೆಯಲ್ಲಿದ್ದ ಹುಡುಗನನ್ನು ಮನೆತಟ್ಟುವ, ಅಲಂಕರಿಸುವ ಕೆಲಸ ಮಾಡುತ್ತಿದ್ದ ತಮ್ಮ ಹಿಂದಿನ ಕಾರ್ಯದರ್ಶಿಯ ಗಂಡನ ಬಳಿಗೆ ಓಡಿಸಿ, ಆತನನ್ನು ಕರೆಸಿಕೊಂಡು ಮರುದಿನ ಉಪಾಹಾರದ ವೇಳೆಗೆ ಕೋಣೆಯ ಗೋಡೆಗಳಿಗೆಲ್ಲಾ ಮತ್ತೆ ಕಾಗದ ಹಚ್ಚಲು ಏರ್ಪಾಟು ಮಾಡಿದರು. ಆದರೂ ಕುರ್ಚಿ ಮೇಜು ಸರಿಯಾಗಿಡುವ ಹೊತ್ತಿಗಾಗಲೇ ಒಂದಿಬ್ಬರು ಅಥಿತಿಗಳು ಬಂದುಬಿಟ್ಟಿದ್ದರು. ನಾನು ಫಲಾಹಾರ ಇಡುತ್ತಿದ್ದಾಗ ನಾನಲ್ಲಿ ಇಲ್ಲದುದಕ್ಕೆ ಕಾರಣವನ್ನು ಗಾಂಧೀಜೀ ತಮ್ಮ ಗೆಳೆಯರಿಗೆ ವಿವರಿಸಿದರು. ಅವರಿಗೂ ಈ ದುರದೃಷ್ಟಕರ ಸಂಗತಿ ತಮಾಷೆಯಾಗಿತ್ತು.

ಕೆಲವು ದಿನಗಳಲ್ಲೇ ನಾವೆಲ್ಲಾ ಈ ಕೈತುಂಬಾ ಕೆಲಸದ ಹೊಸ ಜೀವನಕ್ಕೆ ಒಗ್ಗಿಹೋದೆವು. ಮನೆಯಲ್ಲೇ ರೊಟ್ಟಿ ಮಾಡುತ್ತಿದ್ದುದರಿಂದ - ಬೆಳಗ್ಗೆ ೬-೭ ಗಂಟೆಗೇ ಮನೆಯ ಗಂಡಸರೆಲ್ಲಾ ಗೋಧಿ ಬೀಸಲು ನೇರುತ್ತಿದ್ದರು ಇದಕ್ಕಾಗಿ ಉಗ್ರಾಣದಲ್ಲೊಂದು ದೊಡ್ಡ ಬೀಸುವ ಕಲ್ಲನ್ನಿಟ್ಟಿತ್ತು. ಬೆಳಗ್ಗೆ ಅರ್ಧ ಗಂಟೆಯವರೆಗೆ

ಇದೇ ಕೆಲಸ. ಸ್ವಲ್ಪ ಕಷ್ಟವಾದರೂ ಬೆಳಗಿನ ವ್ಯಾಯಾಮ, ಜೊತೆಗೆ ಉಪಯೋಗವೂ ಆಯಿತು ಎಂದುಕೊಂಡು ಎಲ್ಲರೂ ಸಂತೋಷ ವಾಗಿ ಈ ಕೆಲಸ ಮಾಡುತ್ತಿದ್ದರು ಬೀಸುವ ಕಲ್ಲಿನ ಸದ್ದಿನೊಡನೆ ಮಾತೂ ನಗುವೂ ಬೆರೆಯುತ್ತಿತ್ತು; ಆ ಕಾಲಕ್ಕೆ ಮನೆಯವರೆಲ್ಲರಿಗೂ ನಗುವುದೇ ವಾಡಿಕೆಯಾಗಿತ್ತು ಮತ್ತೊಂದು ವ್ಯಾಯಾಮ ಸ್ಕಿಪಿಂಗ್ (ನೆಗೆತ) ಇದರಲ್ಲಿ ಗಾಂಧೀಜೀ ಪ್ರವೀಣರಾಗಿದ್ದರು.

ನಾನು ದಕ್ಷಿಣ ಆಫ್ರಿಕಾದಲ್ಲಿದ್ದು ಒಂದೆರಡು ತಿಂಗಳಿಂದ ಮೇಲೆ ಒಂದು ದಿನ ಸಂಜೆ ನನ್ನ ಗಂಡ ಏಕೋ ಮುಖ ಗಂಟು ಹಾಕಿ ಕೊಂಡು ಸಿಡಿಮಿಡಿಗುಟ್ಟುತ್ತಾ ಬಂದ. ನನಗೇನೂ ತೋಚಲಿಲ್ಲ. ಇದಕ್ಕೆ ನಾನೇನಾದರೂ ಕಾರಣವೇನೋ ಎಂತ ಮಾಡಿದ್ದು, ಮಾಡ ದಿದ್ದು ಎಲ್ಲಾ ಕೆಲಸಗಳನ್ನೂ ಮನಸ್ಸಿನಲ್ಲೇ ತಿರುವಿಹಾಕಿದೆ. ಆಮೇಲೆ ಆತ ಗಾಂಧೀಜಿಯ ಹತ್ತಿರಲೂ ಮಾತಾಡದಿದ್ದುದನ್ನು ನೋಡಿ, ತಪ್ಪು ನನ್ನದಲ್ಲವೆಂದು ಮನಸ್ಸಿಗೆ ನೆಮ್ಮದಿಯಾಯಿತು. ಯಾವಾಗಲೂ ಸಂತೋಷದಿಂದ ವಿನೋದಪೂರ್ಣವಾಗಿರುತ್ತಿದ್ದ ಊಟದ ಹೊತ್ತು ಆ ದಿನ ಮೋಡ ಕಟ್ಟಿದಂತೆ ಮಂಕಾಗಿತ್ತು. ಹೊರಗಿನವರೂ ಯಾರೂ ಬರದ್ದರಿಂದ ಆ ಕವಿದ ಮಂಕು ತೊಲಗಿ ಬೆಳಕಾಗಲೇ ಇಲ್ಲ. ಊಟ ಮುಗಿದ ಕೂಡಲೇ ನನ್ನ ಗಂಡ ನಮ್ಮ ಕೋಣೆಗೆ ಹೋದ ನಾನೂ ಆಶ್ಚರ್ಯ ಪಡುತ್ತ ಆತನ ಹಿಂದೆಯೇ ಹೋದೆ

'ಏನಾಯಿತು ?' ನಾ ಕೇಳಿದೆ. 'ಸಿಟ್ಟಾಗುವಂಥದೇನಾದರೂ ಆಯಿತೇನು ಇವೊತ್ತು ?' ಆತ ಹೇಳಿದ. ದಕ್ಷಿಣ ಆಫ್ರಿಕದ ಪ್ರಸಿದ್ಧ ಪತ್ರಿಕೋದ್ಯೋಗಿಯೊಬ್ಬ ಹೆಚ್ಚು ಪ್ರಚಾರವಿರುವ ಇಂಗ್ಲಿಷ್ ಮಾಸ ಪತ್ರಿಕೆಯೊಂದರಲ್ಲಿ ಟ್ರಾನ್ಸ್ವಾಲಿನ ಭಾರತೀಯರ ವಲಸೆ, ವ್ಯಾಪಾರದ ಬಗ್ಗೆ ಅಸಂಬದ್ಧವಾದ, ಅಪಾಯಕರವಾದ ಲೇಖನ ವೊಂದನ್ನು ಪ್ರಕಟ ಮಾಡಿದ್ದ. ಗಾಂಧೀಜೀ ಅದರ ಬಗ್ಗೆ ಏನೂ ಕಾರ್ಯಕ್ರಮ ಕೈಗೊಳ್ಳಲಿಲ್ಲ. ಅಷ್ಟೇ ಅಲ್ಲ, ಆದರಲ್ಲಿದ್ದ ತಪ್ಪು ಹೇಳಿಕೆಗಳನ್ನು ಖಂಡಿಸಿ ಬರೆಯಲು ಕೂಡ ಒಪ್ಪಲಿಲ್ಲ. 'ಗಾಂಧೀಜಿಗೆ

ಚೆನ್ನಾಗಿ ಗೊತ್ತಿದೆ ಇಂಥ ಬರೆಹದಿಂದ ಇಂಗ್ಲೆಂಡಿನಲ್ಲಿ ಎಂಥ ಅಪಾಯಕರ ಪರಿಣಾಮವಾಗುತ್ತವೆ ಎಂತ. ಆದರೂ ಸುಮ್ಮನಿದಾರೆ.'

ನನ್ನ ಗಂಡನಲ್ಲಿ ನನಗೆ ಸಹಾನುಭೂತಿ ಇತ್ತು. ಆದರೂ ಆತ ಆ ವಿಷಯಕ್ಕೆ ಸಲ್ಲದ ಪ್ರಾಮುಖ್ಯತೆ ಕೊಟ್ಟಿದಾನೆ ಎನಿಸಿತು. ಗಾಂಧೀಜಿಗೇ ಆ ಲೇಖನ ತಲೆ ಕೆಡಿಸಿಕೊಳ್ಳುವಷ್ಟು ಮುಖ್ಯವಾದದ್ದಲ್ಲ ಅನಿಸಿರುವಾಗ ಈತನೇಕೆ ಇಷ್ಟು ಹಚ್ಚಿಕೊಳ್ಳಬೇಕು? ಅಲ್ಲಿಯ ರಾಜಕೀಯ ಜೀವನಕ್ಕೆ, ಅವರ ಅಡ್ಡ ದಾರಿಗಳಿಗೆ ನಾನು ತುಂಬ ಹೊಸಬಳು ವರ್ಣಸಮಸ್ಯೆಯ ರಾಜಕೀಯವಂತೂ ಇದ್ದದ್ದೂ ಹೊಸದು ಅಂತೇ ನನ್ನ ಗಂಡ ಏಕೆಷ್ಟು ಗಲಾಟೆ ಮಾಡುತ್ತಿದಾನೆ ಎಂತ ನನಗೆ ಅರ್ಥವಾಗಲಿಲ್ಲ

ಹೀಗೆ ಇನ್ನೂ ನಾಲ್ಕು ದಿನ ಕಳೆಯಿತು. ನನ್ನ ಗಂಡ ಗಾಂಧೀಜಿಯೊಂದಿಗೆ ದಿನಗೆಲಸದ ವಿಷಯ, ಮರ್ಯಾದೆಗೆ ಅಗತ್ಯವಾಗಿ ಆಡಲೇ ಬೇಕಾದ ಒಂದೆರಡು ಮಾತು ಬಿಟ್ಟು ಹೆಚ್ಚಿಗೆ ಒಂದೂ ಮಾತಾಡಲಿಲ್ಲ ಆ ನಾಲ್ಕು ದಿನ. ಸಾಯಂಕಾಲ ನಾವಿಬ್ಬರೇ ನಮ್ಮ ಕೋಣೆಯಲ್ಲಿ ಕೂತಿರುತ್ತಿದ್ದೆವು. ಇಲ್ಲವೇ ಎದುರಿನ ವೆಲ್ಟ್-ಹುಲ್ಲುಗಾವಲು-ನಲ್ಲಿ ತಿರುಗಾಡಲು ಹೋಗುತ್ತಿದ್ದೆವು. ಎಲ್ಲರಿಗೂ ಈ ಪರಿಸ್ಥಿತಿ ಬೇಸರವಾಗಿತ್ತು. ಕಡೆಗೊಂದು ದಿನ ಕಸ್ತೂರಿ ಬಾ 'ಪೋಲಕ್‌ಗೆ ಏನಾಗಿದೆ? ಆತ ಯಾಕೆ ಸಿಟ್ಟಾಗಿದಾನೆ?' ಎಂತ ನನ್ನನ್ನು ಬಂದೂ ಬಾರದ ಇಂಗ್ಲಿಷಿನಲ್ಲಿ ಕೇಳಿದರು.

"ಆತನಿಗೆ ಬಾಪೂ ಮೇಲೆ ಸಿಟ್ಟು ಬಂದಿದೆ"

ಗುಜರಾತಿ ಭಾಷೆಯಲ್ಲಿ 'ಬಾಪೂ' ಎಂದರೆ ತಂದೆ. ಮನೆಯಲ್ಲಿ ಎಲ್ಲರೂ ಅವರನ್ನು ಕರೆಯುತ್ತಿದ್ದುದು ಹಾಗೆ. ಸಹೋದ್ಯೋಗಿಗಳಿಗೆ ಮಾತ್ರ ಗಾಂಧೀಜೀ ಭಾಯಿ; ನನ್ನ ಗಂಡ ಛೋಟಾಭಾಯಿ.

"ಬಾಪೂ ಮೇಲೇಕೆ ಸಿಟ್ಟು? ಬಾಪು ಏನು ಮಾಡಿದರು?"

"ಅವರು ಏನೂ ಮಾಡಿಲ್ಲ. ಅದಕ್ಕೇ ಹೆನ್ರಿಗೆ ಅವರ ಮೇಲೆ ಅಷ್ಟು ಕೋಪ."

ಆಮೇಲೆ ನಾನು ಅವರಿಗೆ ಆ ವಿಷಯವನ್ನು ವಿವರಿಸಿದೆ ಆ ನಾಲ್ಕು ದಿನದಲ್ಲಿ ಆ ವಿಷಯದ ಬಗ್ಗೆ ನಾನು ಎಷ್ಟು ಕೇಳಿದ್ದೆ ಎಂದರೆ, ಅದರ ಬಗ್ಗೆ ನನ್ನ ಗಂಡನ ಅಭಿಪ್ರಾಯವೇನೆಂಬುದು ಕೂಡ ನನಗೆ ಗೊತ್ತಿರಲಿಲ್ಲ; ಅಷ್ಟು ಮಟ್ಟಿಗೆ ನನ್ನ ಪಾಂಡಿತ್ಯ.

ನನ್ನ ಮಾತು ಮುಗಿದ ಮೇಲೆ ಯಾರ ಬಗ್ಗೆಯೂ ಏನೂ ಹೇಳದೆ ಆಕೆ ಸುಮ್ಮನೆ "ಓ, ಹಾಗೋ" ಎಂದು ಬಿಟ್ಟರು ಅಂತೂ ಬಾಪೂ ಮೇಲೆ ಪೋಲಕ್ ಸಿಟ್ಟಾದ್ದು ಆಕೆಗೇನೂ ಕೆಡಕೆನಿಸಲಿಲ್ಲವೆಂತಲೇ ನನಗೆ ಅನುಮಾನ. ಆಕೆ ಕೂಡ ಎಷ್ಟೋ ಸಾರಿ ಗಾಂಧೀಜಿಯ ಮೇಲೆ ಸಿಟ್ಟಾಗುತ್ತಿದ್ದರು. ಅಂತೇ ಗಾಂಧೀಜಿಯ ಮೇಲೆ ತಮ್ಮಷ್ಟೇ ಅಭಿಮಾನವಿದ್ದ ಮತ್ತೊಬ್ಬ ವ್ಯಕ್ತಿ ಅವರ ಮೇಲೆ ಮುನಿಸಿಕೊಂಡಿದ್ದರಿಂದ ತಾವೂ ಸಿಟ್ಟಾಗುತ್ತಿದ್ದುದೂ ಸರಿಯೇ ಎನಿಸಿರಬೇಕು ಆಕೆಗೆ. ಕಡೆಗಿದು ಗಾಂಧೀಜಿಗೂ ಬೇಸರವಾಯಿತು. ನಾವೆಲ್ಲ ಊಟ ಮುಗಿಸಿ ಊಟದ ಮನೆಯನ್ನು ಬಿಡುವಾಗ ನನ್ನ ಗಂಡನನ್ನು ಕರೆದರು.

"ನಿನ್ನ ಹತ್ತಿರ ಮಾತನಾಡಬೇಕಾಗಿತ್ತು. ಸ್ವಲ್ಪ ಇರು" ಎಂದರು. ಉಳಿದವರೆಲ್ಲರೂ ಕೋಣೆ ಬಿಟ್ಟು ಹೋದ ಮೇಲೆ ನನ್ನ ಗಂಡನನ್ನು ತರಾಟೆಗೆ ತೆಗೆದುಕೊಂಡರು: "ಏನಾಗಿದೆ ನಿನಗೆ? ಹೀಗೇಕೆ ಸಿಡಿಮಿಡಿಗುಟ್ಟುತ್ತಾ ಇದ್ದೀ? ಎಂತ ಕೇಳಿದರು.

"ಏಕೋ ನಿಮಗೇ ಚೆನ್ನಾಗಿ ಗೊತ್ತಿದೆ" ನನ್ನ ಗಂಡ ಉತ್ತರ ಕೊಟ್ಟ.

"ಹೇಗಾದರೂ ಇರಲಿ. ನನ್ನ ಮೇಲೆ ನಿನಗೇಕೆ ಸಿಟ್ಟು ಹೇಳು."

"—ರಿವ್ಯೂನಲ್ಲಿ ನ—ಬರೆದ ಲೇಖನ ನೋಡಿಯೂ ನೀವು ಸುಮ್ಮನಿದ್ದುದಕ್ಕೆ."

“ ಅದಕ್ಕೆ ನೀನಿಷ್ಟು ಯೋಚನೆ ಹಚ್ಚಿಕೊಳ್ಳಬೇಕೆ ? ಎಂದರು ಗಾಂಧೀಜೀ ಸಮಾಧಾನ ಮಾಡುವಂತೆ.

“ ಅದರ ತುಂಬ ಬರೀ ಅಸಂಬದ್ಧವೇ. ನಿಮಗೂ ಗೊತ್ತಿದೆ.”

“ ನಿಜವೆ. ಸುಳ್ಳೆಂದು ಗೊತ್ತಿದ್ದ ಮಾತ್ರಕ್ಕೇ ಏನಾದ ಹಾಗಾಯಿತು ?”

“ ಎಲ್ಲಾ ಆಗುತ್ತೆ.” ನನ್ನ ಗಂಡ ಸಿಟ್ಟಾಗಿ ಸಿಡಿದ. “ ಬೇಕಾದಷ್ಟು ಆಗುತ್ತೆ ; ಅಂಥ ಲೇಖನವನ್ನು ಸುಮ್ಮನೆ ಬಿಡಲು ನಿಮಗೇನು ಅಧಿಕಾರ? ಉಳಿದವರಿಗೆ (ಇಂಗ್ಲೆಂಡಿನವರಿಗೆ) ಅದು ಸುಳ್ಳೆಂದು ಗೊತ್ತಿಲ್ಲ. ನೀವು ಅವರಿಗೆ ತಿಳಿಸಿ ಹೇಳದಿದ್ದರೆ ಅವರಿಗೆ ಗೊತ್ತಾಗುವುದಾದರೂ ಹೇಗೆ? ಇಂಥ ಲೇಖನಗಳಿಂದಲೇ ತೊಡಕು ಹೆಚ್ಚಿ, ಭಾರತೀಯರ ಸ್ಥಿತಿ ಇಷ್ಟು ಅಸಾಧ್ಯಕ್ಕಿಟ್ಟುಕೊಂಡಿರುವುದು. ಭಾರತೀಯರ ಹಿತದ ದೃಷ್ಟಿಯಿಂದಲಾದರೂ ಅವರಿಗೆ ಸತ್ಯ ಗೊತ್ತಾಗಬೇಕಾದ್ದು ಅತ್ಯಗತ್ಯ ”

“ ಸರಿ. ಅದಕ್ಕೆ ನಾನೇನು ಮಾಡಲಿ ಹೇಳು ?” ಗಾಂಧೀಜೀ ತಗ್ಗಿದವರಂತೆ ಉತ್ತರ ಕೊಟ್ಟರು.

“ ಮಾಡುವುದೇನು ? ಅಂಕೆ, ಅಂಶ ಆಧಾರವಾಗಿಟ್ಟುಕೊಂಡು ಅದೆಲ್ಲ ಸುಳ್ಳೆಂದು ಬರೆಯಬೇಕು. ನಿಮಗೆ ಉಳಿದೆಲ್ಲರಿಗಿಂತ ಅದು ಚೆನ್ನಾಗಿ ಗೊತ್ತಿದೆ. ನಿಮ್ಮ ನಾಲಿಗೆ ತುದಿಯಲ್ಲೇ ಇದೆ. ಯಾರೇನು ಹೇಳಿದರೂ ಇದು ನಿಮ್ಮ ಸಮಸ್ಯೆ.”

“ ನಿನಗೂ ಅದೆಲ್ಲ ಗೊತ್ತಿದೆ” ಎಂದರು ಗಾಂಧೀಜೀ.

“ ಗೊತ್ತಿದೆ. ಕಷ್ಟಪಟ್ಟು ಹುಡುಕಿದರೆ ಯಾರಿಗೂ ಗೊತ್ತಾಗುತ್ತದೆ. ಅದಕ್ಕೇ ಬರೆದಿದ್ದು ಸುಳ್ಳೆಂದು ಸಾಧಿಸುವುದು ತುಂಬ ಸುಲಭ ಎಂದದ್ದು ನಾನು.”

ವಾದವಿವಾದ ಒಂದು ಗಳಿಗೆ ನಿಂತಿತು. ಆಮೇಲೆ ಈ ಕಠಿನ ಸಮಸ್ಯೆಗೆ ಸುಖವಾದ ಪರಿಹಾರ ತೋಚಿದಂತೆ ಹರ್ಷದಿಂದ ಗೆಲುವಾದ ದನಿಯಲ್ಲಿ ಗಾಂಧೀಜೀ ಹೇಳಿದರು.

"ನಿನಗೆ ಆ ಲೇಖನದಿಂದ ಅಷ್ಟು ಅಸಮಾಧಾನವಾಗಿದ್ದರೆ ನೀನೇ ಒಂದು ಲೇಖನ ಬರೆಯಬಾರದೇಕೆ ?"

ಕವಿದ ಕಾರ್ಮುಗಿಲು ಹಾರಿ ಹೋಗಿ ಆಕಾಶ ಶುಭ್ರವಾಯ್ತು. ಲೇಖನ ಬರೆದದ್ದೂ ಆಯಿತು; ಅಚ್ಚೂ ಆಯಿತು. ಮುಂದೆ ಕೆಲವು ತಿಂಗಳವರೆಗೆ ಆ ವಿಷಯದ ಮೇಲೆ ಅದರಂಥ ಲೇಖನವೇ ಇನ್ನು ಬರಲಿಲ್ಲ. ಭಾರತದಲ್ಲಿ ಅನೇಕ ಪತ್ರಿಕೆಗಳು ಅದನ್ನು ಪುನರ್ಮುದ್ರಣ ಮಾಡಿದವು. ಆ ಲೇಖನವೇ ನನ್ನ ಗಂಡನ ಪಾಲಿಗೆ ಭಾರತದ ಸಾರ್ವಜನಿಕ ಜೀವನಕ್ಕೆ ಪ್ರವೇಶ ಪತ್ರಿಕೆಯಾಯಿತು

* * *

ಈ ವಿಷಯ ನೆನೆದಾಗ ನಾನು ದಕ್ಷಿಣ ಆಫ್ರಿಕಾಕ್ಕೆ ಬರಲಿಕ್ಕಿಂತ ಮುಂಚೆ ನಡೆದ ಇನ್ನೊಂದು ಪತ್ರಿಕೋದ್ಯೋಗದ ಪ್ರಸಂಗ ಜ್ಞಾಪಕಕ್ಕೆ ಬರುತ್ತದೆ. ಹಗಲೆಲ್ಲ ಈ ವಿಷಯ ಮಾತಾಡುತ್ತಿದ್ದರು. ಅದರಿಂದ ಆ ಕಥೆ ಸಂಪೂರ್ಣವಾಗಿ ಗೊತ್ತಾಯಿತು. ನನ್ನ ಗಂಡ ಇದನ್ನು ಹೇಳಿ ಗಾಂಧೀಜಿಯನ್ನು ಛೇಡಿಸಿ ಸಂತೋಷಪಡುತ್ತಿದ್ದ. ಆ ಹಾಸ್ಯ ತಮ್ಮ ಮೇಲೇ ಆದರೂ ಗಾಂಧೀಜೀ ಕೇಳಿ ಸಂತೋಷ ಪಡುತ್ತಿದ್ದರು. ಇದಾದದ್ದು ನನ್ನ ಗಂಡ ಗಾಂಧೀಜಿಯ ಜೊತೆ ಸೇರಿ 'ಇಂಡಿಯನ್ ಒಪಿನಿಯನ್'ಗಾಗಿ ಕೆಲಸ ಮಾಡುತ್ತಿದ್ದಾಗ. ಅಧ್ಯಕ್ಷ ಕ್ರೂಗರ್‌ನ ಚರಮಯಾತ್ರೆಯನ್ನು ನೋಡಿ ಪತ್ರಿಕೆಗೆ ವಿಶೇಷ ವರದಿ ಮಾಡಲೆಂದು ನನ್ನ ಗಂಡನನ್ನು ಪ್ರಿಟೋರಿಯಾಕ್ಕೆ ಕಳಿಸಿದ್ದರು ಸ್ಮಶಾನ ಯಾತ್ರೆಯನ್ನು ನೋಡಿ ಮನೆಗೆ ಬಂದು ನನ್ನ ಗಂಡ ವರದಿ ಬರೆದ. ಆ ವರದಿ ತುಂಬಾ ಪರಿಣಾಮಕಾರಿಯಾಗಿದೆ, ಚಿತ್ರಮಯವಾಗಿದೆ; ಅದರಲ್ಲಿ ಸಾಹಿತ್ಯದ ಸವಿಯಿದೆಯೆಂದು ಈತನ ನಂಬಿಕೆ ಮರುದಿನ "ಇಂಡಿಯನ್ ಒಪಿನಿಯನ್" ನಲ್ಲಿ ಈತನ ಲೇಖನ ಅಚ್ಚಾಗಿತ್ತು ಅದನ್ನು ತೆಗೆದು ಓದುತ್ತಿದ್ದ ಹಾಗೆ ಈತನ ಹೆಮ್ಮೆ ಪಾತಾಳಕ್ಕಿಳಿಯಿತು. ಈತ ತನ್ನ ವರದಿಯನ್ನು ಹೀಗೆ ಆರಂಭಿಸಿದ್ದ. "ಆತ ಸತ್ತ; ಹೂಳಿದ್ದೂ (Burried) ಆಯಿತು" ಆದರೆ ಅಚ್ಚಾಗಿದ್ದು "ಹೀಗೆ ಆತ ಸತ್ತ; ಸುಟ್ಟಿದ್ದೂ

(Burned) ಆಯಿತು.”  ಇದನ್ನೋದಿ ನನ್ನ ಗಂಡ ಗಾಬರಿಯಾಗಿ ಹೋದ. ಅಚ್ಚಿನ ತಪ್ಪು ಹಾಗಿರಲಿ, ನನ್ನ ಗಂಡನ ಪತ್ರಿಕೆ ಕ್ರೂಗರನ್ನು ಇಷ್ಟು ಅಲಕ್ಷ್ಯದಿಂದ ಕಂಡದ್ದು ಕ್ರೂಗರರ ಸ್ಮೃತಿಗೇ ಅವಮಾನವಾದಂತೆ ತೋರಿತು. ನನ್ನ ಗಂಡನಿಗೆ ಮುದ್ರಾರಾಕ್ಷಸನ ಪ್ರಭಾವ ಗೊತ್ತಿತ್ತು. ಅದಕ್ಕೇ ಆಗ ಡರ್ಬಾನ್‌ನಲ್ಲಿದ್ದ ಗಾಂಧೀಜಿಯಿಂದ ಈ ಲೇಖನದ ಕರಡು ಅವರೇ ತಿದ್ದಬೇಕೆಂದು ವಾಗ್ದಾನ ತೆಗೆದುಕೊಂಡಿದ್ದ. ಅಂತೇ, ಇಂಥ ತಪ್ಪಾಗದಂತೆ ನೋಡಿಕೊಳ್ಳುತ್ತೇನೆಂದು ಮಾತುಕೊಟ್ಟು, ಈ ತಪ್ಪನ್ನೇಕೆ ನೋಡಲಿಲ್ಲ ನೀವು ಎಂತ ಗಾಂಧೀಜಿಯನ್ನು ದೂರಿ, ಸಿಟ್ಟಿನಿಂದ ಕಾಗದ ಬರೆದ.

“ಈ ಬೋಯರರ ಸಂಕುಚಿತ ಧಾರ್ಮಿಕ ನಂಬಿಕೆಗಳು ನಿಮಗೆ ಗೊತ್ತಿದೆ. ಅವರ ಅಧ್ಯಕ್ಷನನ್ನು ‘ಸುಡಲಾಯಿತು’ ಎಂದು ಹೇಳಿ ಸುಮ್ಮನೆ ಅವರ ಮನಸ್ಸು ನೋಯಿಸಿದಿರಿ  ಅವರ ಪಾಲಿಗೆ ಸುಟ್ಟರು ಎನ್ನುವುದೂ ಒಂದೆ, ನರಕಕ್ಕೆ ಹೋದ ಎನ್ನುವುದೂ ಒಂದೆ. ನಾ ನಿಮಗೆ ಅದಕ್ಕೇನೇ ನೀವೇ ಅಚ್ಚು ಕರಡು ನೋಡಿ ಎಂತ ಒತ್ತಿ ಹೇಳಿದ್ದು. ನೀವು ಹೀಗೆ ಮಾಡಿಟ್ಟಿರಿ” ಎಂದು ಬರೆದ

ಗಾಂಧೀಜಿಗೆ ತುಂಬಾ ಪಶ್ಚಾತ್ತಾಪವಾಯಿತು. ಈ ತಪ್ಪಾಯಿತಲ್ಲ ಎಂದು. ಹಾಗೆಂದು ಹೇಳಿದರು.

“ಆದರೆ ನಮ್ಮ ಜನಕ್ಕೆ ಹೂಳುವುದಕ್ಕಿಂತ ಸುಡುವುದೇ ಹೆಚ್ಚು ಅಭ್ಯಾಸ. ಕಂಪೋಸಿಟರ್-ಆತ ಹಿಂದೂ-ತನ್ನ ಕಾರ್ಯವೇ ಸರಿ ಎಂದುಕೊಂಡಿರಬೇಕು. ಅಚ್ಚು ಮಾಡುವವನೂ ಅಷ್ಟೆ. ನಾನು ಲೇಖನವನ್ನು ನೋಡಿದರೂ ಅದನ್ನು ಗಮನಿಸಲಿಲ್ಲ. ಏಕೆಂದರೆ ಹೆಣ ಸುಡುವುದು ನನ್ನ ಮನಸಿಗೂ ಸರಿ ಎಂದೇ ತೋರಿರಬೇಕು. ಮರುಪ್ರತಿಯಲ್ಲೇ ತಿದ್ದುಪಡಿ ಪ್ರಕಟಿಸುತ್ತೇನೆ” ಎಂದು ಗಾಂಧೀಜೀ ವಿವರಣೆ ಕೊಟ್ಟರು. ಹಾಗೆ ಮಾಡಿಯೂ ಮಾಡಿದರು  ನನ್ನ ಗಂಡ ಅಷ್ಟಕ್ಕೇ ತೃಪ್ತಿಪಟ್ಟುಕೊಳ್ಳಬೇಕಾಯಿತು. ಮುಂದೆಂದೂ ಆತ ತನ್ನ ವಿಶೇಷ ಲೇಖನಗಳ ಅಚ್ಚು ಕರಡು ತಿದ್ದುವ ಜವಾಬ್ದಾರಿಯನ್ನು ಬೇರೆಯವರಿಗೆ ವಹಿಸಿಕೊಡಲಿಲ್ಲ

೨

ಎಲ್ಲಾ ತಾಯಂದಿರಂತೆ ಕಸ್ತೂರಬಾಗೂ ತನ್ನ ಮಕ್ಕಳೆಂದರೆ ತುಂಬಾ ಹೆಮ್ಮೆ, ಅಭಿಮಾನ; ನೂರು ಆಸೆ. ಆದರಲ್ಲಿ ಅವರು ಒಳ್ಳೆ ಬಟ್ಟೆ ಹಾಕಿಕೊಳ್ಳಬೇಕೆಂಬುದೂ ಒಂದು ಮನೆಯಲ್ಲಿ ಆಕೆಯನ್ನು ಬಿಟ್ಟು ಉಳಿದವರೆಲ್ಲರೂ ಐರೋಪ್ಯ ಉಡುಪನ್ನೇ ಧರಿಸುತ್ತಿದ್ದರು. ಹುಡುಗರಿಗೆ ಹೊಸ ಬೂಡ್ಸಾಗಲಿ ಸೂಟಾಗಲಿ ಬೇಕಾಗಿದ್ದೂ, ಗಾಂಧೀಜೀ ಅದನ್ನು ಲೆಕ್ಕಿಸದಿದ್ದರೆ, ಬಾಪೂಗೆ ನೀನಾದರೂ ಹೇಳು ಎಂತ ಆಕೆ ನನಗೆ ಹೇಳುತ್ತಿದ್ದರು. ನಾನು ಬಾಪೂಗೆ ಹೇಳುತ್ತಿದ್ದೆ.

ಇಂಥ ಬೇಡಿಕೆಗಳ ಸಂದರ್ಭದಲ್ಲಿ ನನಗೂ ಗಾಂಧೀಜಿಗೂ ಎಷ್ಟೋಸಾರಿ ವಾದವಿವಾದವಾಗುತ್ತಿತ್ತು. ನಾನು ಕೇಳಿದ್ದು ಅಗತ್ಯವೇ ಅಲ್ಲವೇ; ಹುಡುಗರು ಪಾಶ್ಚಾತ್ಯ ರೀತಿಯ ಸೂಟು, ಬೂಡ್ಸು ಧರಿಸುವುದು ಸರಿಯೋ ತಪ್ಪೋ? ಹುಡುಗರು ಕಾಲ ದೇಶಕ್ಕೆ ತಕ್ಕಂತಿರಬೇಕೆಂದು ನಾನು ವಾದಿಸಿದರೆ, ಗಾಂಧೀಜೀ ಅಷ್ಟು ಅಗತ್ಯವೇ ಎಂದು ಸಂದೇಹ ತೋರುತ್ತಿದ್ದರು. ಹುಡುಗರಿಗೆ ತಮ್ಮದೆನ್ನುವುದಿರಬಾರದು, ಆತ್ಮದ ಅಗತ್ಯಗಳ ಸರಳದರ್ಶನಕ್ಕೆ ಅಡ್ಡಿಯಾಗಬಹುದಾದ ಇಂಥ ವಸ್ತುಗಳು ಬೇಕೆಂಬುದನ್ನು ಅವರಿಗೆ ಕಲಿಸಬಾರದು ಎನ್ನುತ್ತಿದ್ದರು.

ಹುಡುಗರ ವಿದ್ಯಾಭ್ಯಾಸದ ಬಗ್ಗೆಯೂ ಬೇಕಾದಷ್ಟು ಚರ್ಚೆಯಾಗುತ್ತಿತ್ತು. ಹಿರಿಯ ಮಗನಿಗೆ ಎಲ್ಲರಂತೆ ತಾನೂ ಹುಡುಗರ ಶಾಲೆಗೆ ಹೋಗಬೇಕೆಂಬ ಆಸೆ. ನಾನಿದರ ವಿಚಾರವಾಗಿ ಗಾಂಧೀಜಿಯ ಹತ್ತಿರ ಮಾತನಾಡಿದೆ. ಅವರಿಗೆ ನಮ್ಮ ವಿದ್ಯಾಭ್ಯಾಸ ಪದ್ಧತಿಯ ಪ್ರಯೋಜನದಲ್ಲಿ ನಂಬಿಕೆ ತೀರಾ ಕಡಿಮೆ. ಪುಸ್ತಕಜ್ಞಾನವು ಅಂತರ್ದರ್ಶನ ಶಕ್ತಿಯನ್ನು ತೀರಾ ಹಾಳುಮಾಡದಿದ್ದರೂ, ಮಂಕುಗೊಳಿಸುತ್ತದೆಂದೇ ಅವರು ತಿಳಿದಿದ್ದಹಾಗಿತ್ತು. ಆದರೆ ನನ್ನದು ವಿರುದ್ಧವಾದ. ನಮ್ಮಲ್ಲಿರುವ ಶಕ್ತಿಗಳನ್ನು ಬೆಳೆಸಿಕೊಂಡರೆ ಪ್ರಾಪಂಚಿಕ ವಸ್ತುಗಳನ್ನು ಚನ್ನಾಗಿ ಅರಿತುಕೊಳ್ಳಲು ಅನುಕೂಲವಾಗುತ್ತದೆಯೇ ವಿನಾ ತೊಂದರೆ ಮಾಡದು; ಇದು ನನ್ನ ವಾದ.

ಒಂದು ಸಲ ನನ್ನ ವಾದಕ್ಕೆ ಉತ್ತರ ಕೊಡುತ್ತಾ ಗಾಂಧೀಜೀ ಹೇಳಿದರು : ' ಮಿದುಳಿನ ಮಾತು, ಎದೆಯ ಭಾವ-ಎರಡನ್ನೂ ಕಲಬೆರಿಕೆ ಮಾಡಬೇಡ. ಹೊರಗಿನ ವಿಚಾರ ವಸ್ತುಗಳಿಂದ ಆತ್ಮವನ್ನು ಮರೆ ಮಾಡುವುದೇಕೆ ? "

" ಆತ್ಮವನ್ನು ಮರೆಮಾಡಬೇಕೆಂದಲ್ಲ, ಚೆನ್ನಾಗಿ ಅರಿತುಕೊಳ್ಳಬೇಕೆಂಬುದು ನನ್ನ ಆಶೆ ' ನಾನು ಉತ್ತರಕೊಟ್ಟೆ.

"ನಿಜವಾದ ದರ್ಶನದ ದಾರಿಯಲ್ಲಿ ಅಡ್ಡ ಬಂದ ನಿನ್ನ ಪಾಶ್ಚಾತ್ಯ ಮನೋಭಾವ ಅದು ನಿನಗೆ ಪೌರ್ವಾತ್ಯರ ಹೃದಯವಿದೆ; ಮನಸ್ಸು ಮಾತ್ರ ಪಶ್ಚಿಮದ್ದು-ಅದೇ ನನಗೆ ಹೆದರಿಕೆ. ಅಂತೇ ಅವೆರಡಕ್ಕೂ ಘರ್ಷಣ. ಆತ್ಮವನ್ನು ಕಾಣಲು ಪುಸ್ತಕಗಳಿಗೆ ಹೋಗಬೇಕಾಗಿಲ್ಲ; ನಿನ್ನಲ್ಲೇ ಆತ್ಮವನ್ನು ಕಂಡುಕೊಳ್ಳಬಹುದು"

* * * *

ನಾ ಮೊದಲೇ ಹೇಳಿದೆ. ಸದಾ ಕೆಲಸ ಮಾಡುತ್ತಿದ್ದ ಈ ಮನೆಯಲ್ಲಿ ಊಟದ ವೇಳೆ ಮಾತ್ರ ತುಂಬಾ ಸಂತೋಷವಾಗುತ್ತಿತ್ತು ಮನೆಯವರೆಲ್ಲಾ ಒಟ್ಟಿಗೆ ಸೇರುತ್ತಿದ್ದುದು ಆಗಲೇ. ಅಲ್ಲದೆ ಯಾರಾದರೂ ಅತಿಥಿಗಳಂತೂ ಇರುತ್ತಲೇ ಇದ್ದರು. ದಿನಾ ಸಂಜೆ ಊಟಕ್ಕೆ ಹತ್ತು ಹದಿನಾಲ್ಕು ಜನ ಒಟ್ಟಿಗೆ ಕೂಡುತ್ತಿದ್ದರು.

ಊಟದಲ್ಲಿ ಬಡಿಸುತ್ತಿದ್ದುದು ಎರಡು ಸಾರಿ. ಸರಳವಾದ ಊಟ ಪರಿಚಾರಕರಾರೂ ಇರಲಿಲ್ಲ. ಮೊದಲ ಸಲಕ್ಕೆ ನಾಲ್ಕಾರು ಬಗೆ ತರಕಾರಿ, ಲೆಂಟಿಲ್ ಸೂಪ್ಪಿನ ಪಲ್ಯ, ಗೋಧಿ ರೊಟ್ಟಿ, ಹಣ್ಣಿನ ರಸಾಯನ, ಒಂದೆರಡು ಚಟ್ನಿ ಇಟ್ಟಿರುತ್ತಿತ್ತು. ಎರಡನೇ ಸಲಕ್ಕೆ ಹಾಲು ಹಣ್ಣು. ಇದಾದ ಮೇಲೆ ಸೆರಿಯಲ್ ಕಾಫಿ ಅಥವಾ ಕಾಲಕ್ಕೆ ತಕ್ಕಂತೆ ತಣ್ಣಗೋ ಕಾಸಿದ್ದೋ ಪಾನಕ; ಇಷ್ಟಾದರೆ ಮುಗಿಯುತ್ತಿತ್ತು. ಊಟ ಮಾಡುವಾಗ ಎಷ್ಟೋ ಸಲ ವಿನೋದವಾಗಿ ಮಾತುಕತೆಯಾಗುತ್ತಿತ್ತು. ಅವರಲ್ಲಿ ತಮಾಷೆ, ಕುಚೋದ್ಯವೇ ಹೆಚ್ಚು. ಗಾಂಧೀಜೀ ಆಗ ಒಳ್ಳೇ ರಸಿಕರಾಗಿದ್ದರು ತಮಾಷೆಯಾದ ಕಥೆ ಕೇಳಿ ಹೊಟ್ಟೆತುಂಬಾ ನಗುತ್ತಿದ್ದರು.

ಒಂದುಸಲ ಕೆಲಜನ ಯುರೋಪ್ಯ ಅಭ್ಯಾಗತರು ಊಟಕ್ಕೆ ಬಂದರು. ಗಾಂಧೀಜಿಗೆ ಅವರ ಪರಿಚಯ ಹೆಚ್ಚಾಗಿರಲಿಲ್ಲ. ಕಸ್ತೂರಿಬಾಗಂತೂ ಇಲ್ಲವೇ ಇಲ್ಲ. ಬಂದವರು ನಿರ್ಭಿಡೆಯಾಗಿ ಒರಟೊರಟಾಗಿ ಮನೆಯ ವಿಚಾರವೆಲ್ಲಾ ಕೇಳಲಾರಂಭಿಸಿದರು. ಕೇಳಿದ ರೀತಿ ಕೂಡ ಏನೋ ಒಂದು ರೇಂಕಾರವಾಗಿ. ಮರ್ಯಾದೆಯಿಂದ ಗಾಂಧೀಜೀ ಅವಕ್ಕೆಲ್ಲಾ ಉತ್ತರ ಕೊಟ್ಟರು. ಮೊದಲಿನಿಂದಲೂ ಬಾ ಅವರ ಮೇಲೆ ಸಿಟ್ಟಾಗಿದ್ದರು. ನಾವು ಊಟಕ್ಕೆ ಕೂಡುವ ಮುಂಚೆ ಆಕೆ ಎತ್ತಲೋ ಮಾಯವಾಗಿ ಬಿಟ್ಟಿದ್ದರು. ಗಾಂಧೀಜೀ ಹೇಳಿಕಳಿಸಿದರೂ ಆಕೆ ಬರಲಿಲ್ಲ. ಕಡೆಗೆ ಗಾಂಧೀಜಿಯೇ ಹೆಂಡತಿಯನ್ನು ಹುಡುಕಿಕೊಂಡು ಹೊರಟರು. ಬಾ ತಮ್ಮ ಕೋಣೆಯಲ್ಲಿದ್ದರು; ಏನು ಮಾಡಿದರೂ ಕೆಳಗಿಳಿದು ಬರಲಿಲ್ಲ. ಗಾಂಧೀಜೀ ಆಕೆ ಇಲ್ಲದ್ದಕ್ಕೆ ಏನೋ ಒಂದು ಕಾರಣ ಹೇಳಿದರು. ಸರಿ ಊಟ ಮುಗಿಯಿತು. ಮರು ದಿನ ನಾನವರನ್ನು ನೋಡಿದಾಗ ಬಾ ಹೇಳಿದರು: 'ಬರೀ ಕುರುಡು ಕುತೂಹಲಕ್ಕಾಗಿ ಮನೆಗೆ ಬಂದು ನಮ್ಮನ್ನೂ ನಮ್ಮ ಮನೆಯನ್ನೂ ಹಾಸ್ಯಮಾಡುವುದು ನನಗೆ ಸ್ವಲ್ಪವೂ ಸೇರುವುದಿಲ್ಲ. ಅಂಥವರು ಬಂದರೆ ನಾನವರನ್ನು ನೋಡುವುದೇ ಇಲ್ಲ. ಬಾಪೂ ಬೇಕಾದರೆ ನೋಡಿ ಮಾತಾಡಿಸಲಿ' ಎಂದರು. ಗಾಂಧೀಜೀ ಆಕೆಯುನ್ನು ಸಮಾಧಾನಮಾಡಲು ಏನೇನೋ ಹೇಳಿದರೂ ಆಕೆ ಮಾತ್ರ ಯಾವುದಕ್ಕೂ ಜಗ್ಗಿ ತಮ್ಮ ಪಟ್ಟು ಸಡಲಿಸಲಿಲ್ಲ.

ಮತ್ತೊಂದು ದಿನ ಸಾಯಂಕಾಲ ಇಂಥದೇ ಇನ್ನೊಂದು ಸಣ್ಣ ತಮಾಷೆ ನಡೆಯಿತು. ಅದರಿಂದ ನನ್ನ ಮೇಲೆಲ್ಲಾ ತುಂಬಾ ಪರಿಣಾಮವಾಯಿತು. ಅಷ್ಟೇ ಅಲ್ಲ; ಅದರಿಂದ ಗಾಂಧೀಜೀ ಹುಡುಗರನ್ನು ದಾರಿಗೆ ತರುವ ವಿಧಾನ, ಅವರಿಗೆ ಆತ್ಮಸಂಯಮ ಕಲಿಸುವ ರೀತಿ ಗೊತ್ತಾಯಿತು.

ಗಾಂಧೀಜಿಯ ಮಕ್ಕಳ ಪೈಕಿ ಒಬ್ಬ, ಎಲ್ಲಾ ಚಿಕ್ಕ ಮಕ್ಕಳಂತೆ ಸ್ವಲ್ಪ ತಿಂಡಿಪೋತ. ಚೆನ್ನಾಗಿದೆ ಎನಿಸಿದರೆ ಸರಿ, ಅದನ್ನೇ ಮೇಲಿಂದ ಮೇಲೆ ಹಾಕಿಕೊಳ್ಳುತ್ತಿದ್ದ. ಬೇಡವೆಂದರೆ ರಂಪೋರಾದ್ಧಾಂತ

ಮಾಡುತ್ತಿದ್ದ. ಗಾಂಧೀಜೀ ಅವನಿಗೆಷ್ಟೇ ಹೇಳಿದರೂ ಹುಡುಗನ ಹೊಟ್ಟೆ ಕೇಳಲಿಲ್ಲ. ಕಡೆಗೊಂದು ದಿನ ಸಂಜೆ 'ಅವನು ಕೇಳಿದಷ್ಟು ಹಾಕಿ, ಬೇಕಾದಷ್ಟು ತಿನ್ನಲಿ, ಯಾರೂ ತಡೆಯಬೇಡಿ, ಅಡ್ಡಿ ಮಾಡಬೇಡಿ' ಎಂದರು ಬಾಪು ಊಟ ಸಾಗಿತು; ಯಥಾಪ್ರಕಾರ ಹುಡುಗ ಬೇಕಾದಷ್ಟು ತಿಂದು ಮೇಜಿನಮೇಲೆ ತಲೆಯಿಟ್ಟು ಮಲಗಿದ. ನಾವೆಲ್ಲ ಊಟ ಮುಗಿಸಿದೆವು ತಟ್ಟೆ ಬಟ್ಟಲು ತೆಗೆದಿರಲಿಲ್ಲ ಅಷ್ಟು ಹೊತ್ತಿಗೆ ಹುಡುಗ ಎದ್ದ. 'ಇನ್ನೂ ಏನಾದರೂ ಬೇಕೆ' ಎಂದು ಕೇಳಿದರು ಗಾಂಧೀಜೀ. ಅವನು ಮತ್ತೆ ತಿನ್ನಲಾರಂಭಿಸಿದ ನಾವೂ ಅವನನ್ನು ಅವಸರಪಡಿಸದೆ ಸಿಧಾನವಾಗಿ ಯಾವುಯಾವುದೋ ವಿಚಾರ ಮಾಡುತ್ತಾ ಕುಳಿತುಕೊಂಡೆವು. ಕಡೆಗೆ ಅವನು ಇನ್ನೊಂದು ತುತ್ತೂ ತಿನ್ನಲಾರದಷ್ಟು ತಿಂದ; ಹೊಟ್ಟೆ ನೋಯುವಷ್ಟು ತಿಂದು ಅಳಲಾರಂಭಿಸಿದ. ಗಾಂಧೀಜೀ ಅದನ್ನು ಲೆಕ್ಕಿಸಲೇ ಇಲ್ಲ. ಕಸ್ತೂರಿಬಾ ವಿಚಾರಿಸಲಿಕ್ಕೆ ಹೋದರೂ ತಡೆದುಬಿಟ್ಟರು ಮಗು ಸ್ವಲ್ಪ ಹೊತ್ತು ಸುಮ್ಮನೆ ಅತ್ತು ಮತ್ತೆ ಮಲಗಲೆತ್ನಿಸಿತು. ನಿದ್ದೆ ಬಾರದೆ ಹೊಟ್ಟೆ ನೋವು ಹೆಚ್ಚಾಗಿ, ಕಡೆಗೆ ಕೋಣೆಯಿಂದ ಎತ್ತಿಕೊಂಡು ಹೋಗಬೇಕಾಯಿತು. ಗಾಂಧೀಜೀ ಮೆಲ್ಲನೆ ಹೂವಿನಂತೆ ಅವನನ್ನು ಎತ್ತಿಕೊಂಡು ಹೋಗಿ ಮಲಗಿಸಿದರು. ಆಮೇಲೆ ಬಾ ನೋಡಿಕೊಂಡರು. ರಾತ್ರಿ ಬಹಳ ಹೊತ್ತು ನೋವು ನಿಲ್ಲಲೇ ಇಲ್ಲ ಅವನೂ ಕಲಿತ ಪಾಠ ಮರೆಯಲಿಲ್ಲ. ಮತ್ತೆ ಆ ಹುಡುಗ ಎಂದೂ ಬೇಡವೆಂದದ್ದನ್ನು ಕೊಡು ಎಂದು ಹಟಮಾಡಲೇ ಇಲ್ಲ.

ಊಟ ಮುಗಿದ ಮೇಲೆ ಹೊಸಬರಾರೂ ಇಲ್ಲದೆ ಇದ್ದರೆ ಆಗ ಗಾಂಧೀಜಿಯಾಗಲಿ ಅವರ ಮನೆಯಲ್ಲಿದ್ದ ಹುಡುಗರ ಪೈಕಿ ಯಾರಾದರೊಬ್ಬರಾಗಲಿ ಭಗವದ್ಗೀತೆಯಿಂದ ಒಂದೆರಡು ಶ್ಲೋಕ ಹಾಡುತ್ತಿದ್ದರು. ನನ್ನ ಗಂಡನೂ ಇಂಗ್ಲೀಷ್ ಗೀತಾನುವಾದ ಓದುತ್ತಿದ್ದ. ಇದಾದ ಮೇಲೆ ಕಷ್ಟವಾದ ಭಾಗಕ್ಕೆ ಗಾಂಧೀಜೀ ನಮಗೆ ಅರ್ಥ ಹೇಳುತ್ತಿದ್ದರು. ಆಮೇಲೆ ಏನಾದರೊಂದಿಷ್ಟು ಚರ್ಚೆ. ಕೆಲವು ಸಲ ನನಗೂ ನನ್ನ ಗಂಡನಿಗೂ ಗಾಂಧೀಜೀ ಗುಜರಾತಿ ಹೇಳಿಕೊಡು

ತ್ತಿದ್ದರು. ಅತಿಥಿಗಳಾರಾದರೂ ಇದ್ದಾಗ ಬೇರೆ ಬೇರೆ ದೇಶಗಳ ದರ್ಶನಗಳ ಹೋಲಿಕೆ, ಆನುಭಾವಿಕ ಅನುಭವಗಳ ಮೇಲೆ ಚರ್ಚೆ ಯಾಗುತ್ತಿತ್ತು. ಯಾವಾಗಲೂ ಚರ್ಚೆಯಾಗುತ್ತಿದ್ದ ವಿಷಯ- ಪೂರ್ವ ಪಶ್ಚಿಮದ ಭಿನ್ನ ರೀತಿ ರೂಢಿಗಳ ವಿಚಾರ, ಜಗತ್ತಿನ ಬೇರೆ ಬೇರೆ ಜನಾಂಗಗಳ ಜೀವನದೃಷ್ಟಿಯ ವಿಷಯ ಅಂಥ ಚರ್ಚೆಗಳಲ್ಲಿ ಇದ್ದವರೆಲ್ಲಾ ಮಾತಾಡುತ್ತಿದ್ದರು ; ಎಲ್ಲಾ ಕೇಳುವವರೇ !

ಹೇಳಬಹುದಾದಂಥ ಮತ್ತೊಂದು ಘಟನೆ ಇದೇ ಸುಮಾರಿಗೆ ನಡೆಯಿತು. ಗಾಂಧೀಜಿಯ ಫೀನಿಕ್ಸ್ ಯೋಜನೆಗೆ (ಮುಂದೆ ಇದರ ವಿಚಾರ ವಿವರವಾಗಿ ಹೇಳುತ್ತೇನೆ) ಸೇರಿದ್ದ ಆಂಗ್ಲೇಯನೊಬ್ಬ, ಫೀನಿಕ್ಸ್ ಆಶ್ರಮಬಿಟ್ಟು ಜೊಹಾನೆಸ್‌ಬರ್ಗಿಗೆ ಹಿಂದಿರುಗಿದ್ದ. ಅಲ್ಲಿ ಆತನಿಗೆ ನಡೆದ ಉಪಚಾರದ ವಿಷಯವಾಗಿ ಕಟುವಾಗಿ ತಕರಾರು ಹೂಡಿದ. ಮುಂದೆ ಯಾವಾಗಲಾದರೂ ನಾನೂ ಫಿನಿಕ್ಸ್ ಆಶ್ರಮಕ್ಕೆ ಹೋಗಬೇಕಾಗಿಬಂದೀತೆಂದು ವಿಚಾರ ನನಗೂ ತಿಳಿದಿರಲೆಂದು ಗಾಂಧೀಜೀ ತಮ್ಮೊಡನಿರಹೇಳಿದರು. ಗಾಂಧೀಜಿಯನ್ನೂ ಅವರ ದೇಶದವರನ್ನು ಬ— ಏನೇನೂ ಉಳಿಸದೆ ಬಯ್ದ. ಬಯ್ಯುವಾಗ ಕೋಣೆಯಲ್ಲಿ ಮೇಜಿನ ಒಂದು ಪಕ್ಕದಲ್ಲಿ ಅಲ್ಲಿಂದಿಲ್ಲಿಗೆ ಇಲ್ಲಿಂದಲ್ಲಿಗೆ ಓಡಾಡುತ್ತಿದ್ದ; ಮೇಜಿನ ಮತ್ತೊಂದು ಪಕ್ಕದಲ್ಲಿದ್ದ ಗಾಂಧೀಜಿಯೂ ಹಾಗೇ ಮಾಡುತ್ತಿದ್ದರು. ಬ— ಹೇಳಿದ್ದರಲ್ಲಿ ಅರ್ಧದಷ್ಟು ಕೂಡಾ ನಿಜವೆಂದು ನಾ ನಂಬಲಿಲ್ಲ; ಅಷ್ಟು ಅಮಾನುಷವಾಗಿತ್ತು, ದಿಗಿಲು ಬರಿಸುವ ಹಾಗಿತ್ತು ಆತ ಹೇಳಿದ್ದು. ಆತ 'ನನಗೆ ಜ್ವರಬಂದಾಗ ಆಶ್ರಮದಲ್ಲಿದ್ದವರು ನನ್ನನ್ನು ಸ್ವಲ್ಪವಾದರೂ ನೋಡಿಕೊಳ್ಳಲಿಲ್ಲ. ನೀರು ಕೊಡಲು ಕೂಡಾ ಒಬ್ಬನಾದರೂ ಹತ್ತಿರವಿರಲಿಲ್ಲ' ಎಂದಾಗ ಗಾಂಧೀಜೀ "ಇದು ನಿಜವೆಂತ ನನಗನಿಸುವುದಿಲ್ಲ: ಅಲ್ಲೇ ರ....,ಸಿ...., ಇಬ್ಬರೂ ಇದ್ದರು. ನಿಜವಾಗಿಯೂ ನಿನಗವರು ಸಹಾಯಮಾಡಿರ ಬೇಕು. ಇಲ್ಲದೆ ವ—ದಿನಕ್ಕೆರಡು ಮೂರುಸಾರಿ ಬಂದು ನಿನ್ನನ್ನು ನೋಡುತ್ತಿದ್ದರು." "ಇಲ್ಲ" ಬ—ಗಟ್ಟಿಯಾಗಿ ಹೇಳಿದ. ಯಾರೂ ಬರಲಿಲ್ಲ. ತನ್ನೊಬ್ಬನನ್ನೇ ಬಿಟ್ಟುಬಿಟ್ಟದ್ದರು. ಎಷ್ಟೋ ದಿನ

ಒಬ್ಬನಾದರೂ ತನ್ನ ಬಳಿ ಸುಳಿಯಲಿಲ್ಲ. ಆದರೂ ಆ ಆಶ್ರಮ ಎಲ್ಲಾ ತನಗೆ ಸಾಕಾಗಿಹೋಗಿದೆ. ತಾನಿನ್ನು ಅಲ್ಲಿರುವುದಿಲ್ಲ ಎಂದ.

"ನಿನಗೆ ಕೆಲವು ದಿನ ಮೈಮೇಲೆ ಎಚ್ಚರಿಕೆಯೇ ಇರಲಿಲ್ಲ, ಆವರೆಲ್ಲಾ ನಿನಗೆ ಉಪಚಾರ ಮಾಡಿದರು. ಇದು ನಿಜವೆಂತ ನನಗೆ ಆಮೇಲೆ ಗೊತ್ತಾಯಿತು.—ನಿನ್ನ ದೇಹಸ್ಥಿತಿ ಇನ್ನೂ ಚೆನ್ನಾಗಿಲ್ಲ. ಅದಕ್ಕೆ ಅವರ ಮೇಲೆ ಕೆಟ್ಟ ಅಭಿಪ್ರಾಯವಿಟ್ಟುಕೊಂಡಿದ್ದೀಯೆ. ಆರೋಗ್ಯ ಚೆನ್ನಾದ ಮೇಲೆ ನಿನ್ನ ಅಭಿಪ್ರಾಯ ನೀನೇ ಬದಲಿಸುತ್ತೀ". ಏನು ಹೇಳಿದರೂ ಆತ ಗಾಂಧೀಜಿಯ ಮಾತಿಗೆ ಒಪ್ಪಲಿಲ್ಲ. ಒಬ್ಬರ ಹೃದಯದಲ್ಲಿ ಸಿಟ್ಟು ಉರಿಯುತ್ತಿದ್ದರೆ, ಇನ್ನೊಬ್ಬರ ಎದೆಯಲ್ಲಿ ಸಹೋದ್ಯೋಗಿಯೊಬ್ಬ ಕೈಬಿಟ್ಟನಲ್ಲಾ, ತನ್ನ ಮನಸ್ಸಿನಲ್ಲಿ ಆಶ್ರಮದ ಬಗ್ಗೆ ದುರಭಿಪ್ರಾಯವಿಟ್ಟುಕೊಂಡು ಹೋದನಲ್ಲಾ ಎಂಬ ನೋವಿತ್ತು.

ಬ—ಹೋದಮೇಲೆ ಗಾಂಧೀಜಿಗೆ .ತುಂಬಾ ಆಯಾಸವಾದ ಹಾಗಿತ್ತು. ಏನೋ ಯೋಚನೆ ಮಾಡುತ್ತಿದ್ದವರು ನನ್ನ ಕಡೆ ತಿರುಗಿ, 'ನಮ್ಮ ಬಗ್ಗೆ, ಫೀನಿಕ್ಸ್ ಆಶ್ರಮದ ಬಗ್ಗೆ ಬ—ಹೇಳಿದನ್ನು ಕೇಳಿದೆಯಾ' ಎಂದರು.

'ಆತ ಹೇಳಿದಷ್ಟು ಆಶ್ರಮ ಕೆಟ್ಟಿರಲು ಸಾಧ್ಯವೇ ಇಲ್ಲ. ಈತ ರೋಗದಿಂದ ಹಾಸಿಗೆ ಹಿಡಿದಿದ್ದಾಗ ಒಬ್ಬರೂ ಹೋಗಿ ನೋಡಲಿಲ್ಲ ವೆಂದರೆ ನಾ ನಂಬಲಾರೆ. ಬ—ಹೇಳಿದಷ್ಟು ಪಶುತನದಿಂದ ಯಾರಾದರೂ ನಡೆದರೆಂದು ನಾನು ನಂಬಲಾರೆ' ನಾ ಉತ್ತರಕೊಟ್ಟೆ.

ಗಾಂಧೀಜೀ ಹೇಳಿದರು: "ಆತನಿಗಿನ್ನೂ ಖಾಯಿಲೆ. ರೋಗ ಬಂದವರಿಗೆ ಅವರಾಡುವ ಮಾತು ಅವರಿಗೇ ಗೊತ್ತಿರುವುದಿಲ್ಲ."

"ಆದರೆ ಮೂರುಗಂಟೆಹೊತ್ತು ಅಂಥ ಅಪಾದನೆ, ಕಟು ಮಾತು ಕೇಳಬೇಕೆಂದರೆ ನಿಮಗೆಷ್ಟು ನೋವಾಗಿರಬೇಕು. ಆತನ ಮಾತಂತೂ ತುಂಬಾ ಕಹಿಯಾಗಿತ್ತು" ನಾನಂದೆ.

ಆ ಘಟನೆ ನನ್ನ ಮೇಲೆ ಎಷ್ಟು ಗಾಢ ಪರಿಣಾಮಮಾಡಿತೆಂದು ಆಗ ನಾನರಿಯಲಾರದೆಹೋದೆ ಮುಂದೆ ನಾನು ಫೀನಿಕ್ಸ್ ಆಶ್ರಮಕ್ಕೆ ಹೋಗಿ ಇರಲಾರಂಭಿಸಿದಾಗ ನನ್ನಲ್ಲಿ ಏನೋ ಹೆದರಿಕೆ ಇತ್ತು. ಬಹುಶಃ ಈ ಹೆದರಿಕೆಯಿಂದಲೇ, ನಾನು ಇರಬಹುದಾದಷ್ಟು ಸುಖವಾಗಿ ಸಂತೋಷವಾಗಿ ಅಲ್ಲಿರಲಿಲ್ಲ; ಆ ಹೆದರಿಕೆ ಹೃದಯದಲ್ಲಿ ಕೊರೆಯುತ್ತಿತ್ತು.

೩

"ಗಾಂಧೀಜೀ ಕ್ರಿಸ್ತಾನರೇ?" ಜೊಹಾನೆಸ್ ಬರ್ಗಿನಲ್ಲಿ ನಾವು ಮನೆ ಮಾಡಿದಾಗ ನೋಡಲೆಂದು ಬಂದ ಒಬ್ಬಾಕೆ ಕೇಳಿದಳು.

ಅಂದರೆ ಕ್ರಿಸ್ತಧರ್ಮ ಸ್ವೀಕರಿಸಿದವರೆಂತಲೋ, ಕ್ರಿಸ್ತನ ಬೋಧನೆ ನಂಬುವವರೆಂತಲೋ ನಿಮ್ಮ ಅರ್ಥ? ನಾ ಕೇಳಿದೆ.

'ಕ್ರಿಸ್ತಾನ ಮತ ಸ್ವೀಕರಿಸಿದವರೇ! ಗಾಂಧೀಜೀ ಹುಟ್ಟು ಕ್ರಿಸ್ತಾನರಂತೆ; ಎಷ್ಟೋ ಜನ ಹಾಗಂದುದನ್ನು ನಾ ಕೇಳಿದೇನೆ. ನನಗೂ ಹಾಗೇ ಅನಿಸುತ್ತದೆ. ಅಲ್ಲವೆ' ಎಂದರು ಆಕೆ.

'ಅಲ್ಲ. ಗಾಂಧೀಜೀ ಹುಟ್ಟು ಕ್ರಿಸ್ತಾನರಲ್ಲ, ಆ ಮತಕ್ಕೆ ಅವರು ಸೇರಿಯೂ ಇಲ್ಲ. ಅದಿರಲಿ, ಈ ಪ್ರಶ್ನೆ ಏಕೆ?' ನಾನು ಖಂಡಿತವಾಗಿ ಉತ್ತರ ಕೊಟ್ಟು ಕೇಳಿದೆ.

ಆಕೆ ಹೋದ ಮೇಲೆ ನಾನು ಆಕೆ ಹೇಳಿದ ಮಾತನ್ನು ಯೋಚಿಸಿದೆ. ನಿಜ; ಗಾಂಧೀಜೀ ಕ್ರಿಸ್ತನ ಬೋಧೆ, ಮಾತುಗಳನ್ನು ತುಂಬಾ ಬಳಸುತ್ತಿದ್ದರು ಗಿರಿಸಂದೇಶವಂತೂ ಅವರ ಮನಸ್ಸಿನಲ್ಲಿ ಯಾವಾಗಲೂ ಇರುತ್ತಿದ್ದಹಾಗಿತ್ತು. ಅಷ್ಟೇ ಅಲ್ಲ, ಅದೇ ಅವರಿಗೆ ದಾರಿ ತೋರುವ ದೀವಿಗೆ, ಸ್ಫೂರ್ತಿಶಕ್ತಿಯಾಗಿರಬೇಕು ಎನಿಸುತ್ತಿತ್ತು. ನನಗೇನೂ ಇದು ವಿಚಿತ್ರವಾಗಿ ತೋರಲಿಲ್ಲ. ಮನೆಯಲ್ಲಿ ಮಾತಾಡುವಾಗ ಬೈಬಲ್ಲನ್ನು ಬಳಸುವುದು ನಿತ್ಯದ ರೂಢಿಯಾದ್ದರಿಂದ ನನಗದರಲ್ಲಿ ಹೆಚ್ಚೇನೂ ಕಾಣಲಿಲ್ಲ. ಹಿಂದೂ ಬಾಯಲ್ಲಿ ಬೈಬಲ್ ಬರುವುದು ವಿಚಿತ್ರವಾದ್ದೆಂದು ಅಲ್ಲಿಯವರೆಗೂ ನನಗೆ ಗೊತ್ತಾ

ಗಿರಲಿಲ್ಲ· ಮನಸ್ಸಿನಲ್ಲೇ ಎಷ್ಟೋ ವಿಚಾರ ತಿರುಗಿಹಾಕಿದೆ. ಅವರ ಮೇಜಿನ ಎದುರು ಗೋಡೆಗೆ ತಗಲು ಹಾಕಿದ್ದ ಕ್ರಿಸ್ತದೇವನ ಸುಂದರ ಪ್ರತಿಮೆ ಜ್ಞಾಪಕಬಂತು ನಾನದನ್ನು ಮೊದಲಸಾರಿಗೆ ನೋಡಿದಾಗ ಎಷ್ಟು ಚೆನ್ನಾಗಿದೆ ಇದು ಎಂದಿದ್ದೆ.

'ನಿಜ. ಅದು ಅಲ್ಲಿರುವುದು ನನಗೆ ತುಂಬಾ ಇಷ್ಟ. ತಲೆ ಎತ್ತಿದಾಗೆಲ್ಲ ಕಣ್ಣಿಗೆ ಬೀಳುತ್ತದೆ. ನಿಜವಾಗಿಯೂ ತುಂಬಾ ಸುಂದರವಾಗಿದೆ' ಎಂದಿದ್ದರು ಗಾಂಧೀಜೀ

ಹಾಗೇ ಅಲ್ಲಿ ಬುದ್ಧದೇವನದಾಗಲಿ ಶ್ರೀಕೃಷ್ಣನದಾಗಲಿ ಚಿತ್ರ ವಿಲ್ಲದ್ದೂ ನೆನಪಾಯಿತು. ಗೋಡೆಯ ಮೇಲೆ ಇದನ್ನು ಬಿಟ್ಟರೆ ಇನ್ನು ಮೂರೇ ಚಿತ್ರ. ಒಂದು ನ್ಯಾಯಮೂರ್ತಿ ಸಮಾಜ ಸುಧಾರಕ ರಾನಡೆಯವರದು; ಇನ್ನೊಂದು ದಲಿತ ರಕ್ಷಣೆಗೆ, ಅನ್ಯಾಯ ಖಂಡನೆಗೆ ಕಂಕಣ ಕಟ್ಟಿದ ಶ್ರೀಮತಿ ಬೆಸೆಂಟರದು; ಮೂರನೆಯದು ದಕ್ಷಿಣ ಆಫ್ರಿಕಕ್ಕೆ ಭಾರತೀಯರನ್ನು ತಂದ ಕರಾರು ಕೂಲಿ ಪದ್ಧತಿ ಯನ್ನು 'ಅರೆ ಗುಲಾಮಗಿರಿ' ಎಂದು 'ಟೈಮ್ಸ್' ಪತ್ರಿಕೆಯಲ್ಲಿ ಖಂಡಿಸಿದ "ಇಂಪೀರಿಯಲ್ ಗೆಜೆಟಿಯರ್ ಆಫ್ ಇಂಡಿಯಾ"ದ ಸಂಪಾದಕರಾದ ಸರ್ ವಿಲಿಯಂ ವಿಲ್ಸನ್ ಹಂಟರ್‌ದು. ಅವರ ಮನೆಯಲ್ಲಿ ಭಾರತ ವೃದ್ಧಪಿತಾಮಹರೆಂದು ಪ್ರಖ್ಯಾತರಾದ ದಾದಾ ಭಾಯಿ ನವರೋಜಿಯವರದೊಂದು ದೊಡ್ಡ ಚಿತ್ರವಿತ್ತು. ನಾಲ್ಕಾರು ಜನ ಆಂಗ್ಲ, ಭಾರತೀಯ ಮಿತ್ರರ ನೆರವಿನಿಂದ ಭಾರತ ರಾಷ್ಟ್ರೀಯ ಕಾಂಗ್ರೆಸ್ಸನ್ನು ಸ್ಥಾಪಿಸಿದವರು. ನವರೋಜಿಯವರೇ. ನಾನು ಅವರ ನ್ನೊಮ್ಮೆ ಲಂಡನ್‌ನಲ್ಲಿ ನೋಡಿದ್ದೆ. ಅವರಾಗ ಮುದುಕರಾಗಿದ್ದರು ಮತ್ತೊಂದು ಸಲ ವರ್ಸೋವಾದಲ್ಲಿ ಅವರ ಶಾಂತಿನಿಲಯವಾದ್ದ ಭಾರತೀಯ ಗೃಹದಲ್ಲಿ ಭೇಟಿ ಮಾಡಿದ್ದೆ. ಅವರು ·ಪುರೋಗಾಮಿ ಯಾದ ದೂರದೃಷ್ಟಿಯುಳ್ಳ ದೇಶಭಕ್ತರಾದರೂ, ಅವರೂ ಕೂಡ ಕಾಂಗ್ರೆಸ್ಸು ಭಾರತದ ಭಾಗ್ಯನಿರ್ಣಯದಲ್ಲಿಷ್ಟು ಪ್ರಬಲ ಸಂಸ್ಥೆಯಾದೀ ತೆಂದು ಊಹಿಸಿರಲಿಕ್ಕಿಲ್ಲ; ಈವೊತ್ತು ನನಗೆ ಹಾಗನಿಸುತ್ತದೆ. ಕಾಂಗ್ರೆಸ್ಸಿನ ಸದಸ್ಯರ ಸಂಖ್ಯೆ ಲಕ್ಷಕ್ಕೆ ಮೀರಿದಾಗ ತಾವದರ

ನಾಯಕರಾಗಬಹುದೆಂಬುದನ್ನು ಗಾಂಧೀಜೀ ಮಸಕು ಮಸಕಾಗಿ ಕೂಡ ಕಂಡಿರಲಿಲ್ಲ; ಖಂಡಿತವಾಗಿ ನಾನಿದನ್ನು ಹೇಳುತ್ತೇನೆ: ದಾದಾಭಾಯಿ ನವರೋಜಿಯವರು ಕಟ್ಟಿದ ಆಶ್ರಮಕ್ಕೆ ಗಾಂಧೀಜೀ ಕುಲಪತಿಯಾಗಬಹುದೆಂದು ಯಾರು ತಾನೆ ಕನಸು ಕಂಡಿದ್ದರು? ಕಾಣಲು ಸಾಧ್ಯವಾದರೂ ಇತ್ತೆ? ಗಾಂಧೀಜಿಯ ಮನೆ, ಕಾರ್ಯಾಲಯದಲ್ಲಿದ್ದ ಚಿತ್ರಗಳೆಲ್ಲವೂ ದಲಿತರ ಬಿಡುಗಡೆಗಾಗಿ ಹೋರಾಡಿದ ಯೋಧರದು ಅಂತೇ ಅವು ಗಾಂಧೀಜಿಗೆ ತುಂಬಾ ಪ್ರಿಯ; ಆದರೆ ಅವರ ಕೋಣೆಯ ಮಧ್ಯದಲ್ಲಿ ಎದ್ದು ಕಾಣಿಸುತ್ತ, ಅವರು ಕೆಲಸ ಮಾಡುತ್ತ ಕುಳಿತಾಗ ಅವರನ್ನು ಶಾಂತ ದೃಷ್ಟಿಯಿಂದ ನೋಡುತ್ತಿದ್ದುದು ಕ್ರಿಸ್ತದೇವನ ದಿವ್ಯ ಪದಸಾರವಿಂದ.

ಆ ದಿನ ಸಂಜೆಗೆ ಗಾಂಧೀಜೀ ಮನೆಗೆ ಬಂದ ಮೇಲೆ ಮನೆ ನೋಡಲು ಬಂದಾಕೆ, ಆಕೆಯೊಡನಾದ ಮಾತುಕಥೆ ಎಲ್ಲಾ ವಿಷಯವನ್ನೂ ತಿಳಿಸಿದೆ.

ಗಾಂಧೀಜೀ ನಕ್ಕರು. "ನಾನೂ ಒಂದು ಸಲ ಕ್ರೈಸ್ತ ಮತಕ್ಕೆ ಸೇರಬೇಕೆಂತಲೇ ಯೋಚಿಸಿದ್ದೆ. ಕ್ರಿಸ್ತದೇವನ ಸುಂದರ ದೇಹ, ಆ ಸಹನೆ, ಕರುಣೆ, ಪ್ರೇಮ; ಯಾರಾದರೂ ಬೈದಾಗ ಹೊಡೆದಾಗ, ತಿರುಗಿಬೈಯದೆ ಹೊಡೆಯದೆ ಹೊಡೆಸಿಕೊಳ್ಳಲು ಮತ್ತೊಂದು ಕೆನ್ನೆ ತೋರಿಸು ಎಂದು ಹೇಳಿದ ಆ ತುಂಬು ಕ್ಷಮೆ–ನಾನಂತೂ ಕ್ರಿಸ್ತದೇವ ಪರಿಪೂರ್ಣ ಮಾನವ ಎಂದುಕೊಳ್ಳುತ್ತಿದ್ದೆ."

'ಆದರೂ ನೀವು ಕ್ರಿಸ್ತಾನರಾಗಲಿಲ್ಲ–ಅಲ್ಲವೇ?'

'ಇಲ್ಲ' ಯೋಚಿಸಿ ಉತ್ತರ ಕೊಟ್ಟರು ಗಾಂಧೀಜೀ. 'ನಾನೂ ಬೈಬಲನ್ನು ಸ್ವಲ್ಪ ಕಾಲ ಅಭ್ಯಾಸಮಾಡಿದೆ. ಅದರ ಬಗ್ಗೆ ಉತ್ಸಾಹದಿಂದ ಚಿಂತಿಸಿದೆ; ಕ್ರಿಸ್ತಧರ್ಮಕ್ಕೆ ಮಾರುಹೋದೆ, ಆದರೆ ಆಮೇಲೆ ನಮ್ಮ ವೇದ ಉಪನಿಷತ್ತುಗಳಲ್ಲಿ ಇಲ್ಲದ್ದೇನೂ ಬೈಬಲ್ಲಿನಲ್ಲಿಲ್ಲ. ಒಳ್ಳೆ ಹಿಂದುವಾದರೆ ನಾನು ಒಳ್ಳೆ ಕ್ರಿಸ್ತಾನನೂ ಆಗಬಲ್ಲೆ ಎಂದುಕೊಂಡು ಆ ಯೋಚನೆ ಬಿಟ್ಟುಬಿಟ್ಟೆ. ಯೇಸುವಿನ ಬೋಧನೆಯ ಸೌಂದ

ರ್ಯವನ್ನು ನಂಬಲು ಆತನ ದಾರಿಯನ್ನು ಅನುಸರಿಸಲು ನಾನು ನಿಮ್ಮ ಜಾತಿಗೆ ಸೇರಬೇಕಾದ ಅಗತ್ಯವೇನೂ ಕಾಣಲಿಲ್ಲ."

ಗಾಂಧೀಜೀ ಎಷ್ಟು ಹೃತ್ಪೂರ್ವಕವಾಗಿ ಯೇಸುವಿನ ಆದರ್ಶವನ್ನು ಅನುಸರಿಸುತ್ತಿದಾರೆ ಎನಿಸಿತು ನನಗೆ. ಅವರು ಹೇಳಿದ್ದೂ ಸತ್ಯ; ನನಗೂ ಅದು ಗೊತ್ತಿತ್ತು.

'ಮನುಷ್ಯ ಯಾವ ಜಾತಿಯವನೆಂದು ಕರೆದುಕೊಂಡರೇನು, ಅವನು ಎಂಥವನೆಂಬುದೇ ಮುಖ್ಯವಾದ್ದು. ಈ ಮತಪರಿವರ್ತನೆಯಲ್ಲಿ ನಿಮಗೆ ನಂಬಿಕೆ ಇದೆಯೇ ?' ನಾನು ಕೇಳಿದೆ

'ನಿನಗೆ ಹೇಗನಿಸುತ್ತದೆ'

'ಏಕೋ ನನಗಂತೂ ಅದು ಸರಿತೋರುವುದಿಲ್ಲ ನಾನಂತೂ ಹಾಗೆ ಮಾಡಲಾರೆ'. ನಾನು ಉತ್ತರ ಕೊಟ್ಟೆ.

'ನೀ ಹೇಳಿದ್ದೇ ಸರಿ. ತನ್ನ ಧರ್ಮದ ಹೃದಯ ಕಂಡುಕೊಂಡವನು ಉಳಿದ ಧರ್ಮಗಳ ಅಂತರಾಳವನ್ನು ಅರಿತುಕೊಂಡಹಾಗೆಯೆ. ಇರುವ ದೇವರು ಒಬ್ಬನೇ; ಆತನ ಬಳಿ ಸಾರಲು ಹಾದಿ ಮಾತ್ರ ಹಲವಾರು.'

'ಕರ್ಮ, ಪುನರ್ಜನ್ಮ ಸತ್ಯ ಎನ್ನುವುದಾದರೆ, ನಮ್ಮ ಬೆಳವಣಿಗೆಗೆ ಅನುಕೂಲವಾದ ಧರ್ಮದಲ್ಲೇ ನಾವು ಹುಟ್ಟುತ್ತೇವೆ. ಅಂತೇ ಅದನ್ನು ಬದಲಾಯಿಸಬಾರದು" ಎಂದೆ ನಾನು

"ಯೇಸುವಿನ ಬೋಧೆಯಲ್ಲಿ ಮಾನವನಿಗೆ ಯಾವುದು ತುಂಬಾ ಮುಖ್ಯವೆಂದು ನಿನಗೆ ತೋರುತ್ತದೆ ?"

"ಎರಡು ಮೂರಿವೆ ಅಂಥವು ಅಂತೂ ಈ ಗಳಿಗೆಗೇನೋ - ತಂದೆಯೊಬ್ಬನೆ ಯೇಸು ನೀವೆಲ್ಲಾ ಅಣ್ಣತಮ್ಮಂದಿರು - ಎಂಬ ಮಾತಿನಲ್ಲಡಗಿರುವ ಪ್ರೇಮವೇ ಮುಖ್ಯವಾದದ್ದು ಎನಿಸುತ್ತದೆ."

"ಸರಿ" ಗಾಂಧೀಜೀ ಪ್ರತ್ಯುತ್ತರ ಹೇಳಿದರು. "ಹಿಂದೂ ಧರ್ಮ ಕಲಿಸುವುದೂ ಈ ಹಿರಿಸತ್ಯವನ್ನೇ. ಮಹಮದೀಯ ಧರ್ಮ

ಪಾರ್ಸೀ ಧರ್ಮಗಳು ಕೂಡಾ ಇದನ್ನೇ ಕಲಿಸುವುದು.''

ಭಾರತದ ಜಾತಿಪದ್ಧತಿಯ ವಿಚಾರವಾಗಿ ನಾನೆಷ್ಟೋ ಕಥೆ ಕೇಳಿದ್ದೆ. ಅದಕ್ಕೇ ಹಿಂದೂಧರ್ಮ ಭ್ರಾತೃಭಾವ ಕಲಿಸುತ್ತದೆ ಎಂದಾಗ ಅನುಮಾನವಾಯಿತು ಸ್ವಲ್ಪಹೊತ್ತು ಸುಮ್ಮನಿದ್ದು ಕೇಳಿದೆ: "ಕ್ರೈಸ್ತಧರ್ಮದ ಹಾಗೇ ಹಿಂದೂಧರ್ಮ ಎಲ್ಲ ಮಾನವ ನವರೂ ಅಣ್ಣತಮ್ಮಂದಿರು ಎನ್ನುವುದನ್ನೇ ಕಲಿಸುತ್ತದೆಯೆ ?"

ಯಾವ ಹಿರಿಧರ್ಮದ ನಿಜವಾದ ತತ್ವಕ್ಕೂ ದೋಷಪೂರ್ಣ ವಾದ, ಅರ್ಥವನ್ನು ಪರಿಗ್ರಹಿಸಬಾರದು. ನಿನ್ನ ಮಾತಿನ ಅರ್ಥ ಕ್ರಿಸ್ತಾನ ದೇಶಗಳು ಅಣ್ಣತಮ್ಮಂದಿರಂತೆ ಜೀವಿಸುತ್ತಿವೆ ಎಂದೇನು ? ಅಲ್ಲಿನಡೆಯುವ ಯುದ್ಧ ಅಲ್ಲಿಯ ದ್ವೇಷ, ಬಡತನ, ಅಪರಾಧಗಳನ್ನು ಜ್ಞಾಪಿಸಿಕೋ ! ಈಗಲೂ ಅವು ಅಣ್ಣತಮ್ಮಂದಿರಂತೆ ಇವೆ ಎಂದೇ ಎನಿಸುತ್ತದೇನು ನಿನಗೆ ?"

"ಅದೇನೋ ನಿಜ. ಮಾನವನ ಆದರ್ಶ ಯಾವಾಗಲೂ ಅವನಿ ಗಿಂತ ನೂರು ಹೆಜ್ಜೆ ಮುಂದೆ ಅಲ್ಲದೆ ಜಗತ್ತಿನ ಯಾವ ಭಾಗ ದಲ್ಲಿದ್ದರೂ ಮನುಷ್ಯರು ಯಾವಾಗಲೂ ಒಂದೆ.'

"ಆದರ್ಶಗಳನ್ನು ನಾವು ಸಾಧಿಸಿದಮೇಲೆ ಅವು ಆದರ್ಶವೆನಿ ಸಿಕೊಳ್ಳುವುದೇ ಇಲ್ಲ. ಆಮೇಲೆ ಸಾಧಿಸಲು ಏನೂ ಇಲ್ಲದ ಹಾಗಾಗುತ್ತೆ." ಎಂದು ಆ ಮಾತು ಮುಗಿಸಿದರು ಗಾಂಧೀಜೀ.

§ § § §

ನನ್ನ ಕಣ್ಣೆದುರಿಗೊಂದು ಚಿತ್ರ ಕಾಣುತ್ತಿದೆ. ನಾನೂ ನನ್ನ ಗಂಡ, ಇಬ್ಬರೂ ಗಾಂಧೀಜಿಯನ್ನು ಕಳಿಸಿಕೊಡಲು ಜೊಹಾನೆಸ್ ಬರ್ಗಿನ ರೈಲ್ವೆ ನಿಲ್ದಾಣಕ್ಕೆ ಬಂದಿದ್ದವು. ಬಹುಶಃ ಗಾಂಧೀಜೀ ಯಾವುದೋ ಒಂದು ಮುಖ್ಯ ವಿಚಾರಕ್ಕಾಗಿ ಜನರಲ್ ಸ್ಮಟ್ಸ್‌ರನ್ನು ಭೇಟಿಮಾಡಲು ಹೋಗುತ್ತಿದ್ದರೆಂದು ಕಾಣುತ್ತದೆ. ಹೋಗುವ ಮುನ್ನ ಬಾಕಿ ಇದ್ದ ಕೆಲವು ಮುಖ್ಯ ಕೆಲಸಗಳ ವಿಚಾರವಾಗಿ ಏನೋ

ಸೂಚನೆ ಕೊಡುತ್ತಿದ್ದರು. ತೀರಾ ಇನ್ನೇನು ರೈಲು ಹೊರಟಿತು. ಎನ್ನುವಾಗ ನಾನು ಮಾಡಬೇಕಾದ್ದೇನಾದರೂ ಇದೆಯೆ ಎಂದು ಕೇಳಿದೆ. ಗಾಂಧೀಜೀ ತುಂಬಿದ ಎದೆಯಿಂದ ಹೇಳಿದರು ಇದೆ; ನನಗಾಗಿ ಪ್ರಾರ್ಥನೆಮಾಡು ಭಕ್ತಿಪೂರ್ಣವಾದ ಪ್ರಾರ್ಥನೆಯ ಸಾರ್ಥಕತೆಯಲ್ಲಿ ಗಾಂಧೀಜೀಗೆ ಯಾವಾಗಲೂ ತುಂಬಾ ನಂಬಿಕೆ ಇತ್ತು. ಹೆಣ್ಣಿನ ಪ್ರಾರ್ಥನೆ ತುಂಬಾ ನಿಸ್ವಾರ್ಥವಾದದ್ದು ಎಂದು ಎಷ್ಟೋ ಸಾರಿ ಅಂದಿದ್ದರು.

§ § § §

ಗಾಂಧೀಜೀ ಹಿಂದೂ ಜೀವನದ ಆಶ್ರಮಪದ್ಧತಿಯ ಬಗ್ಗೆ ಆಗಾಗ ಹೇಳುತ್ತಿದ್ದರು ಬ್ರಹ್ಮಚರ್ಯಾಶ್ರಮ-ಬಾಳಿನ ಹಿತವಾದ ಬಿಸಿಲಿನಲ್ಲಿ, ತಂದೆತಾಯಿಗಳ ನಲುಮೆಯ ಕಣ್ಣಾ ಕಾವಲಿನಲ್ಲಿ ಬೆಳೆದು ಯಾವುದನ್ನೂ ಹಚ್ಚಿಕೊಳ್ಳದೆ ಆಟವಾಡುವ ಕಾಲ. ಇದು ಕಳೆದ ಮೇಲೆ ವಿದ್ಯಾರ್ಥಿ ದಸೆ ಮನಸ್ಸು ಮೈಯನ್ನು ಮೀರಿ ಬೆಳೆಯುವ ಕಾಲ. ಇದಾದ ಮೇಲೆ ಗೃಹಸ್ಥಾಶ್ರಮ, ಸಂಸಾರದ ಹೊರೆಯನ್ನು ನಿರ್ವಹಿಸಲು, ಹೆಂಡತಿ ಮಕ್ಕಳನ್ನು ಕಾಪಾಡಲು ತನ್ನ ಪ್ರೌಢ ಶಕ್ತಿಯನ್ನು ಉಪಯೋಗಿಸುವ ಕಾಲ ಇದಾದಮೇಲೆ ಸಂಸಾರದ ಭಾರವನ್ನು ನಿರ್ವಹಿಸಿ ಜಗತ್ತಿನ ಕೋಟಲೆಗಳು, ಕಷ್ಟಗಳು, ಜವಾಬ್ದಾರಿಗಳನ್ನು ಮುಗಿಸಿ ತನ್ನ ಆತ್ಮವನ್ನು, ಜೀವನದ ಅಂತ ರಾತ್ಮವನ್ನು ಕಂಡುಕೊಳ್ಳಲು ಏಕಾಂತದಲ್ಲಿ ಧ್ಯಾನಕ್ಕೆ ಕೂಡುವ ಕಾಲ-ವಾನಪ್ರಸ್ಥಾಶ್ರಮ. ಜೀವನದ ಈ ವಿಭಜನೆ ಅಮೂಲ್ಯವಾದ ದ್ದೆಂದೇ ಗಾಂಧೀಜಿಯ ಅಭಿಪ್ರಾಯ ಒಂದು ಸಲ ಇದರ ಮೇಲೆ ಗಾಂಧೀಜೀ·ಮಾತಾಡಿ ಮುಗಿಸಿದಾಗ ನಾ ಕೇಳಿದೆ. "ಇದೇನೋ ಸರೀ ತುಂಬಾ ಸೊಗಸಾಗಿದೆ ಎಂತ ನಾನೂ ಒಪ್ಪುತ್ತೇನೆ ಆದರೆ ಹೆಣ್ಣಿನ ಗತಿ ಏನು? ಕಟ್ಟಕಡೆಯ ಆಶ್ರಮದಲ್ಲಿ ಆಕೆಗೆ ಸ್ಥಾನವೆಲ್ಲಿದೆ? ಹೊರಗಿನದೆಲ್ಲವನ್ನು ತ್ಯಜಿಸಿ ಆಧ್ಯಾತ್ಮಿಕ ಜೀವನವನ್ನವಲಂಬಿಸುವ ಮುಂದಿನ ಬಾಳಿಗೆ ತನ್ನಾತ್ಮವನ್ನು ಅನುಗೊಳಿಸುವ ಮಟ್ಟಕ್ಕೆ ಹಿಂದೂಭಾವನೆಯಲ್ಲಿ ಹೆಣ್ಣು ಏರುವುದೇ ಇಲ್ಲವಲ್ಲಾ"

'ಓ'; ಗಾಂಧೀಜೀ ಕೈ ಎತ್ತಿ ನನ್ನ ಕಡೆ ಬೆರಳುಮಾಡಿ - ಆಗ ಇದವರಿಗೆ ತುಂಬಾ ಅಭ್ಯಾಸವಾಗಿಹೋಗಿತ್ತು-"ನೀನದರ ನಿಜವಾದ ಸೊಗಸನ್ನೇ ಅರ್ಥ ಮಾಡಿಕೊಳ್ಳಲಿಲ್ಲ. ದೇವರ ಧ್ಯಾನ ಮಾಡಲು ಹೆಣ್ಣು ಸಂಸಾರವನ್ನು ಬಿಟ್ಟು ಕಾಡಿಗೆ ಹೋಗಬೇಕಾದ ಅಗತ್ಯವೇ ಇಲ್ಲ. ಆಕೆಗೆ 'ಆತ' ಯಾವಾಗಲೂ ಕಾಣುತ್ತಿರುತ್ತಾನೆ. ಆಕೆ ಸ್ವರ್ಗಕ್ಕೆ ಸಿದ್ಧಳಾಗಲು ಯಾವ ಶಾಲೆಗೂ ಹೋಗಬೇಕಾಗಿಲ್ಲ. ಸಂಸಾರವೇ ಆಕೆಯ ಅನುಭವ ಮಂಟಪ. ಮದುವೆಗಾಗಿ ಮಕ್ಕಳನ್ನು ಪೋಷಿಸುವುದೇ ಆಕೆಯ ತಪಸ್ಸು" ಎಂದರು.

'ನಿಜ'-ನಾನು ಮಧ್ಯೆ ಮಾತಾಡಿದೆ. 'ಗಂಡು ಏಕಾಂತದಲ್ಲಿ ಕುಳಿತು ದೈವ ಚಿಂತನೆಯಲ್ಲಿರುವಾಗ, ಆತ್ಮದೊಂದಿಗೆ ಬೆರೆಯುತ್ತಿರುವಾಗ, ಆಕೆ ಈ ಗೃಹಭಾರವನ್ನು ಹೊತ್ತುಕೊಳ್ಳಲು ಒಪ್ಪಿಕೊಳ್ಳದೆ ಇದ್ದಿರಬಹುದು. ವಾನಪ್ರಸ್ಥಾಶ್ರಮದ ಹಾಗೆ ಆಕೆಗೂ ಒಂದು ಕಾಲನಿಯಮವಿರಬಾರದೇಕೆ? ಈ ನಿಯಮಗಳನ್ನೆಲ್ಲ ನಿರ್ಮಿಸಿದವನು ಪುರುಷ. ಅದರಲ್ಲಿ ಹೆಣ್ಣನ್ನೇಕೆ ಬಿಟ್ಟುಬಿಟ್ಟ?'

'ಆಕೆಗೆ ಅಂಥ ಆಶ್ರಮದ ಅಗತ್ಯವಿರಲಿಲ್ಲವೆಂತ' ಎಂದರು ಗಾಂಧೀಜೀ ನಗುತ್ತ. ನಾನೂ ಅವರ ಮಾತಿಗೆ ತಲೆಹಾಕಿದೆ. ಆದರೆ ಮನಸ್ಸಿಗೆ ಮಾತ್ರ ನಂಬಿಕೆಯಾಗಲಿಲ್ಲ.

ಇನ್ನೊಂದು ಸಲ ಹೆಂಗಸರ ಸ್ಥಾನಮಾನದ ವಿಷಯ ಚರ್ಚೆಯಾಗುತ್ತಾ ಇತ್ತು. ಹೆಣ್ಣಿಗೆ ಪಾಶ್ಚಾತ್ಯ ದೇಶದಲ್ಲಿ ದೊರಕಿರುವುದಕ್ಕಿಂತ ಉನ್ನತ ಸ್ಥಾನ ಪ್ರಾಚ್ಯದೇಶದಲ್ಲಿ ಕೊಡಲಾಗಿದೆ ಎಂದು ಗಾಂಧೀಜೀ ಹೇಳಿದ್ದರು.

'ನನಗೇನೂ ಹಾಗನಿಸುವುದಿಲ್ಲ. ಪೂರ್ವ ದೇಶದಲ್ಲಿ ಆಕೆ ಗಂಡಿನ ಗುಲಾಮಳಾಗಿದಾಳೆ, ಆಕೆಗೇನೂ ವೈಯಕ್ತಿಕ ಜೀವನವೆ ಇದ್ದಹಾಗೇ ಕಾಣುವುದಿಲ್ಲ" ಎಂದೆ ನಾನು.

"ನೀನು ತಪ್ಪು ತಿಳಿದುಕೊಂಡಿದ್ದೀ." ಗಾಂಧೀಜೀ ಉತ್ತರ ಕೊಟ್ಟರು. "ಪೂರ್ವದೇಶದಲ್ಲಿ ಹೆಣ್ಣು ಪೂಜಾಮೂರ್ತಿ. ಸಾವಿತ್ರಿ

ಸತ್ಯವಾನರ ಕಥೆ ನಿನಗೆ ಗೊತ್ತಿದೆಯೇನು? ಸತ್ಯವಾನ ಮೃತನಾದಾಗ ಸಾವಿತ್ರಿ ತನ್ನ ನಲ್ಲನ ಜೀವನಕ್ಕಾಗಿ ಯಮನೊಂದಿಗೆಹೋರಾಡಿದಳು. ಮೃತ್ಯುವಿನ ಮುಷ್ಟಿಯಿಂದ ಪ್ರಿಯನ ಜೀವನ ಗೆದ್ದುಕೊಳ್ಳುವಾಗ ಆಕೆ ತೋರಿದ ಧೈರ್ಯ, ಎದೆಗಾರಿಕೆ, ಪ್ರೇಮ, ಜಾಣ್ಮೆ ಎಲ್ಲಾ ಅದ್ಭುತ ವಾದ್ದು. ಬಂದ ಕಷ್ಟವನ್ನೆಲ್ಲಾ ಇದುರಿಸಿ ಸಾವನ್ನು ಗೆದ್ದಳು ಸಾವಿತ್ರಿ."

"ನಾನು ಹೇಳಿದ್ದೂ ಅದೇ" ನಾನು ಒತ್ತಿ ಹೇಳಿದೆ. "ನಿಮ್ಮ ಪುರಾಣಗಳಲ್ಲಿ ಹೆಣ್ಣು ಗಂಡಿನ ಸೇವೆ ಮಾಡುವುದೇ ಅಲ್ಲ, ಅವನಿಗಾಗಿ ಮೃತ್ಯುವಿನೊಂದಿಗೆ ಹೋರಾಡುವಂತೆ ಕೂಡಾ ಮಾಡಿದೀರಿ. ಅದೇ ನಮ್ಮಲ್ಲಿ, ಅಂದರೆ ನಮ್ಮ ಪ್ರಾಚೀನ ಕಾವ್ಯಗಳಲ್ಲಿ-ಹೆಣ್ಣಿನ ಯೂರಿಡಿಸಿಯ ಜೀವಕ್ಕಾಗಿ ಸಾವನ್ನು ಜಯಿಸಿದವನು-ಗಂಡು ಆರ್‌ಫ್ಯೂಸ್. ಆಕೆಯ ಸೇವೆಮಾಡಿ ಕಾಪಾಡಿದವನು ಅವನು ಅಂದಿನಿಂದಲೂ ಅದೇ ನಮ್ಮ ಆದರ್ಶ. ಆ ಕಥೆಯಲ್ಲಿ ಹೀಗೆ ಹೇಳಿರಲಿಕ್ಕಿಲ್ಲವಾದರೂ ಇದೇ ಪಾಶ್ಚಿಮಾತ್ಯ ಆದರ್ಶ."

"ಅಂದರೆ, ಹೆಣ್ಣು ಮಹಾ ವಿಜಯಶಾಲಿ, ಬಾಳನ್ನುಳಿಸುವ ದೇವತೆ ಎಂದು ಪೂಜಿಸಿದರೆ, ಆಕೆಯನ್ನು ಕೀಳುಮಟ್ಟಕ್ಕೆ ಇಳಿಸಿದ ಹಾಗಾಯಿತೇನು?" ಗಾಂಧೀಜೀ ಪ್ರಶ್ನೆ ಹಾಕಿದರು.

"ಮಾತಿನಲ್ಲಿ ಹೇಳುವುದಕ್ಕೇನೋ ತುಂಬಾ ಚೆನ್ನಾಗಿದೆ. ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ಗಂಡು ಆಕೆಯನ್ನು ಪೂಜೆ ಮಾಡುವುದನ್ನು ಮಾತ್ರ ನಾನು ಎಲ್ಲೂ ನೋಡಲಿಲ್ಲ. ಯಾವಾಗಲೂ ಆಕೆ ಗಂಡಿನ ಸುಖಕ್ಕಾಗಿ ದಾಸಿಯಂತೆ ಕಾದಿರುತ್ತಾಳೆ" ನಾನು ಉತ್ತರಕೊಟ್ಟೆ.

ಗಾಂಧೀಜೀ ಉತ್ತರ ಕೊಟ್ಟರು. "ನೀನಿನ್ನೂ ಚೆನ್ನಾಗಿ ಅರ್ಥ ಮಾಡಿಕೊಂಡಿಲ್ಲ. ಅದಕ್ಕೆ ಹಾಗನಿಸುತ್ತಿದೆ. ಜೀವನದ ಉಚ್ಚವಿಚಾರಗಳಲ್ಲಿ ಗಂಡಿಗೆ ಹೆಣ್ಣು ಸಮಾನ-ಯಾಕೆ, ಅವನಿಗಿಂತ ಉತ್ತಮ. ಅಲ್ಪ ವಿಚಾರಗಳಲ್ಲಿ ಆಕೆ ಗಂಡಿನ ಸೇವೆಮಾಡು

ತ್ತಿರಬಹುದು. ನಿಜ. ಆದರೆ ದೊಡ್ಡವರ ಪಾಲಿಗೆ ಅಲ್ಪರ ಸೇವೆ ಮಾಡುವುದೂ ಒಂದು ಭಾಗ್ಯವೇ ಅಲ್ಲವೆ ? ”

“ಎಲ್ಲಾ ಗಂಡಸರೂ ಹಾಗೆಲ್ಲಿ ಯೋಚಿಸುತ್ತಾರೆ. ಅದು ಹೋಗಲಿ,ಅವನು ಕುಳಿತು ಉಣ್ಣುವಾಗ ಆಕೆ ಕೈಕಟ್ಟಿ ನಿಂತಿರ ಬೇಕಾದ್ದೇ ಆಚಾರವಾಗಿರುವಾಗ, ಅವನು ಆಕೆಯನ್ನು ತನ್ನ ಸಮ ಎಂದು ಎಂದಾದರೂ, ನಿಜವಾಗಿಯೂ ಅಂದುಕೊಳ್ಳುತ್ತಾನೆಯೇ?” ಎಂತ ನಾಕೇಳಿದೆ.

‘ ಕಣ್ಣಿಗೆ ಕಂಡದ್ದೇ ಸತ್ಯವೆಂತ ಮೋಸ ಹೋಗಬೇಡ. ಗಂಡ ಸರು ಇನ್ನೂ ಆ ಧ್ಯೇಯ ಮುಟ್ಟಿಲ್ಲವಾದರೂ, ಎಲ್ಲರ ಎದೆಯಲ್ಲೂ ಅದು ಮಿಡಿಯುತ್ತಿದೆ ’ ಎಂದರು ಗಾಂಧೀಜೀ ನಗುತ್ತ.

೪

ಈ ಸಣ್ಣ ಸಂಸಾರದ ಗೃಹಶಾಂತಿ ಬಹುದಿನ ಬಾಳಲಿಲ್ಲ. ಜೊಹಾನೆಸ್ ಬರ್ಗಿಗೆ ನಾ ಬಂದು ಸುಮಾರು ನಾಲ್ಕು ತಿಂಗಳಾ ದಾಗ ದೊಡ್ಡ ಮನೆ ಬಿಟ್ಟು ಸಂಸಾರವನ್ನು ಮತ್ತಷ್ಟು ಸರಳವಾಗಿ ನಡೆಸಲು ಗಾಂಧೀಜಿ ನಿಶ್ಚಯಿಸಿದರು. ಫೀನಿಕ್ಸ್‌ಗೆ ಹೋಗಿ ಅಲ್ಲಿನ ಆಶ್ರಮವನ್ನು ಬೆಳೆಸಬೇಕೆಂಬ ಆಶೆ ಮೊಳೆತದ್ದೂ ಆಗಲೇ. ಮನೆ ಬಿಟ್ಟರು, ಇದ್ದ ಮೇಜು ಕುರ್ಚಿಗಳಲ್ಲಿ ಕೆಲವನ್ನು ಮಾರಿದರು, ಸ್ವಲ್ಪ ದರ್ಬಾನ್ ಮನೆಗೆ ಹೋಯಿತು; ಉಳಿದದ್ದು ಸಮಯಕ್ಕಿರಲೆಂದು ಉಗ್ರಾಣ ಸೇರಿತು. ಮನೆ ಬಾಡಿಗೆಯ ಅವಧಿ ಮುಗಿಯಲು ಇನ್ನೂ ಒಂದು ವಾರ ಇತ್ತು. ನನ್ನ ಗಂಡ ಆ ವಾರ ಅಲ್ಲಿದ್ದು ಆಮೇಲೆ ದರ್ಬಾನಿಗೆ ಬರಬೇಕೆಂದು ಗೊತ್ತಾಯಿತು. ಮನೆಯವರೆಲ್ಲರ ಜೊತೆಗೆ ನಾನು ದರ್ಬಾನಿಗೆ ಹೋದೆ.

ನಾನು ದಕ್ಷಿಣ ಆಫ್ರಿಕಾಕ್ಕೆ ಬರುವುದಕ್ಕಿಂತ ಒಂದು ವರ್ಷ ಮುಂಚೆ ಫೀನಿಕ್ಸ್ ಗಾಂಧೀಜಿಯ ಕೈಗೆ ಬಂದಿತ್ತು. ಅಲ್ಲಿಗೂ ದರ್ಬಾ ನಿಗೂ ಸುಮಾರು ಹದಿನಾಲ್ಕು ಮೈಲಿ. ನೇಟಾಲಿನ ಉತ್ತರ ತೀರ ದಲ್ಲಿತ್ತು. ಫಲವತ್ತಾದ ಸುಮಾರು ನೂರು ಎಕರೆ ಪ್ರದೇಶ. ಸುತ್ತ

ಮುತ್ತು ಕಬ್ಬಿನ ತೋಟ. ಇಲ್ಲಿ ಟಾಲ್‌ಸ್ಟಾಯ್ ತತ್ವಗಳಿಗನುಸಾರ ವಾಗಿ ಒಂದು ವಸತಿ ಆರಂಭವಾಗಿತ್ತು. ಗಾಂಧೀಜಿಯ ಪ್ರೇರಣೆಯಂತೆ ತಮ್ಮ ಧ್ಯೇಯಗಳನ್ನು ಕಾರ್ಯರೂಪಕ್ಕೆ ತರಲು ಒಟ್ಟಾಗಿ ಕೆಲಸ ಮಾಡಲು ನಿಶ್ಚಯಿಸಿದ ಹತ್ತಾರು ಜನ ಆಂಗ್ಲ ಭಾರತೀಯ ಆದರ್ಶ ವಾದಿಗಳು ಈ ವಸತಿಯ ಮೂಲ ನಿವಾಸಿಗಳು. 'ಇಂಡಿಯನ್ ಒಪಿನಿಯನ್' ಅಚ್ಚಾಗುತ್ತಿದ್ದ ಮುದ್ರಣಾಲಯ ಇಲ್ಲೇ ಇತ್ತು. ಇಲ್ಲೇ ಅಚ್ಚಾಗಿ ಪ್ರಕಟವಾಗಿ ದಕ್ಷಿಣ ಆಫ್ರಿಕದ ಬೇರೆ ಬೇರೆ ಭಾಗಕ್ಕೆ, ಕಡಲಾಚೆಯ ನಾಡುಗಳಿಗೆ ರವಾನೆಯಾಗುತ್ತಿತ್ತು. ಇಲ್ಲೇ ಒಂದು ಮುದ್ರಣಾಲಯ ಮತ್ತು ಪ್ರಕಟನಾ ಸಂಸ್ಥೆಯನ್ನು ನಡೆಸಬಹು ದೆಂಬ ಆಶೆಯೂ ಇತ್ತು. ಆದಷ್ಟು ಮಟ್ಟಿಗೆ ಈ ವಸತಿ ಸ್ವಾವಲಂಬಿ ಯಾಗಿರಬೇಕು, ಜೀವನಕ್ಕೆ ಬೇಕಾದ ಐಹಿಕ ವಸ್ತುಗಳನ್ನು ಆದಷ್ಟು ಕಡಿಮೆ ಮಾಡಬೇಕೆಂದು ಇಲ್ಲಿಯ ನಿಯಮ. ಇಲ್ಲಿದ್ದ ಪ್ರತಿಯೊಬ್ಬ ನಿಗೂ ಪ್ರತಿಯೊಂದು ಸಂಸಾರಕ್ಕೂ ಉಳುಮೆಗಾಗಿ ಎರಡು ಎಕರೆ ಜಮೀನು ಇರಲು ಒಂದು ಸಾಧಾರಣ ಮನೆ ಕೊಟ್ಟಿದ್ದರು. ಯಾರಾ ದರೂ ಹೊಲವನ್ನಾಗಲೀ ಮನೆಯನ್ನಾಗಲೀ ಬಿಟ್ಟರೆ ಅದನ್ನು ಮಾರುವ ಹಾಗಿರಲಿಲ್ಲ; ಮತ್ತೊಬ್ಬ ಸದಸ್ಯನಿಗೆ ಹೋಗುತ್ತಿತ್ತು.

ಹುಡುಗರಿಗೆ, ಪ್ರಾಥಮಿಕ ವಿಷಯಗಳನ್ನು ಕಲಿಸಲು ಅದಕ್ಕಿಂತ ಹೆಚ್ಚಾಗಿ ಅವರ ನಡತೆಯನ್ನು ರೂಪುಗೊಳಿಸಲು, ಸುತ್ತಣ ಪ್ರಕೃತಿ ಸೌಂದರ್ಯದಲ್ಲಿ ತಮ್ಮ ಅಂತರಂಗದಲ್ಲಿ ದೇವರನ್ನು ಕಾಣುವುದನ್ನು ಕಲಿಸಲು ಒಂದು ಚಿಕ್ಕ ಶಾಲೆಯನ್ನು ತೆಗೆಯಬೇಕೆಂಬ ವಿಚಾರವೂ ಇತ್ತು. ಅಲ್ಲಿ ಅಂತಿಮ ಸಿದ್ಧಾಂತವೆಂದು ಯಾವುದನ್ನೂ ಕಲಿಸ ಬಾರದು; ಕೆಲವು ಗೊತ್ತಾದ ವಿಷಯಗಳ ಬೋಧನೆಯೂ ಸಂಪೂರ್ಣ ವೈಯಕ್ತಿಕ ಸ್ವಾತಂತ್ರ್ಯಕ್ಕೆ ಅನುಕೂಲವಾಗುವಷ್ಟು ಅಳಕವಾಗಿರ ಬೇಕು, ಎಂದೂ ನಿಶ್ಚಯವಾಗಿತ್ತು.

ಹಾಗೇ ನಿಸರ್ಗ ಸಾಧನಗಳಿಂದ ರೋಗವನ್ನು ಗುಣಪಡಿಸುವ 'ಚಿಕಿತ್ಸಾಲಯ'ವೊಂದನ್ನು ಸ್ಥಾಪಿಸಬೇಕೆಂದಿದ್ದರು. ವಿಶ್ರಾಂತಿ,

ಶುದ್ಧವಾದ ಗಾಳಿ, ಉಪವಾಸಗಳು, ಅಂತರವಯುವಗಳ ಶುದ್ಧಿಗೆ ಜಲ ಚಿಕಿತ್ಸೆ, ಹಬೆಸ್ನಾನ, ಸೂರ್ಯರಶ್ಮಿ ಚಿಕಿತ್ಸೆ, ಕೆಸರಿನ ಪಟ್ಟು. ಎಲ್ಲ ಕ್ಕಿಂತ ಮುಖ್ಯವಾಗಿ ಗೊಂದಲ ಬೇಸರದಿಂದ ದೂರವಾಗಿ ಶಾಂತಿ ಸೌಂದರ್ಯಧ್ಯಾನ—ಇವೇ ಮೈ ಮನಸ್ಸು ಆತ್ಮ ಮೂರನ್ನೂ ಗುಣ ಪಡಿಸುವ ವಿಧಾನ.

ವಸತಿಯ ಆಚೆಗೆ ನಾಲ್ಕಾರು ಜೂಲೂ ಜನರ ಗುಡಿಸಲು, ಎರಡು ಮೈಲಿಯಾಚೆ ಜೂಲೂಗಳೇ ನಡೆಸುತ್ತಿದ್ದ ನೇಟಿವ್ ಮಿಷನ್ ಕಾಲೇಜು ಬಿಟ್ಟರೆ ಆಶ್ರಮದ ಸುತ್ತಲೂ ಯಾವ ಮನೆಗಳೂ ಇರಲಿಲ್ಲ. ವಸತಿಗೂ ರೈಲ್ವೆ ನಿಲುಮನೆಗೂ ನಡುವೆ ಉದ್ದಕ್ಕೂ ಸಾವಿರಾರು ಎಕರೆ ಕಬ್ಬಿನತೋಟ. ಮುಂದೆ ಇಲ್ಲಿ ಕಬ್ಬಿನಬದಲು ವ್ಯಾಟಲ್-ಜಾಲಿ ಗಿಡದಂಥ ಮರ—ಬೆಳೆದಾಗ, ಬೇಸಿಗೆಯ ಬಿಸಿಲು ದಿನದಲ್ಲಿ ರೈಲ್ವೆ ನಿಲುಮನೆಯಿಂದ, ವಸತಿಗೆ ಬರುವ ಪ್ರಯಾಣಿಕರಿಗೆ ಹಾದಿಯುದ್ದಕ್ಕೂ ಸೊಗಸಾದ ನೆರಳಿನ ಆಸರಾಗುತ್ತಿತ್ತು. ನಿಲುಮನೆಯ ಸಮೀಪದಲ್ಲಿದ್ದ ಕೆಲಸಕ್ಕೆ ಬಾರದ ಚಿಲ್ಲರೆ ಅಂಗಡಿ ಒಂದು ಬಿಟ್ಟರೆ ವಸತಿಯ ಬಳಿ ಅಂಗಡಿಯ ಅನುಕೂಲವಿರಲೇ ಇಲ್ಲ. ಏನು ಬೇಕೆಂದರೂ ದರ್ಬಾನಿನಿಂದ ತರಬೇಕು. ಹೀಗಾಗಿ ಮೊದಮೊದಲು ಅಲ್ಲಿ ನೆಲೆಸಿದವರು ಅಲ್ಲಿಗೆ ಬಂದ ಮೇಲೆ ಹೊಸ ಅಡಿಗೆ ಪದಾರ್ಥ ಕಂಡೇ ಇರಲಿಲ್ಲವೆಂದರೂ ತಪ್ಪೇನಲ್ಲ. ಬೆಣ್ಣೆಯನ್ನು ಕೂಡಾ ಡಬ್ಬಿಯಲ್ಲಿ ತರಬೇಕಾಗಿತ್ತು' ಎಷ್ಟೋ ಸಲ ಹಾಗೆ ತಂದಬೆಣ್ಣೆ ಫೀನಿಕ್ಸ್ ಮುಟ್ಟುವುದರೊಳಗೇ ಕರಗಿಹೋಗುತ್ತಿತ್ತು.

ವಸತಿಯಲ್ಲಿ ಸುಮಾರು ಏಳೆಂಟು ಬಂಗಲೆಯಂಥ ಮನೆ. ಒರಟಾದ ಮರದ ಗೂಟಗಳಿಗೆ ಬಿಗಿದ (ಜಿಂಕ್‌ಷೀಟ್) ತಗಡಿನ ಗೋಡೆ. ಒಳಗಡೆ ಸುಣ್ಣ ಸಾರಿಗೆ ಇಲ್ಲವೇ ಇಲ್ಲ. ಗಾಂಧೀಜಿಯ ಬಂಗಲೆಯೂ ಇಂಥಾದ್ದೇ; ಸ್ವಲ್ಪ ದೊಡ್ಡದು. ಊಟಕ್ಕೂ, ಕೂತು ಮಾತಾಡಲೂ ಎಲ್ಲಕ್ಕೂ ಮಧ್ಯದಲ್ಲೊಂದು ದೊಡ್ಡ ಕೋಣೆ; ಎರಡು ಸಣ್ಣ ಮಲಗುವ ಕೋಣೆ; ಒಂದು ಚಿಕ್ಕ ಅಡಿಗೆ ಕೋಣೆ; ಗರಿ ಚಪ್ಪರದ

ಬಚ್ಚಲುಮನೆ; ಇಷ್ಟೇ ಗಾಂಧೀಜಿಯ ಬಂಗಲೆ. ಬಚ್ಚಲಮನೆಯಲ್ಲಿದ್ದು ದೆಲ್ಲಾ ತೀರಾ ಪುರಾತನ ರೀತಿ. ಆದರೂ ತುಂಬಾ ಚಮತ್ಕಾರವಾದವು. ತಗಡಿನ ಛಾವಣಿಯಲ್ಲಿ ದೊಡ್ಡದೊಂದು ತೂತು ಮಾಡಿ ಅಲ್ಲಿಗೊಂದು ಮರದ ತುಂಡುಕಟ್ಟಿ, ಅದಕ್ಕೊಂದು ತೋಟಿಕ್ಕೆ ನೀರುಹಾಕುವ ತಗ ಡಿನ ಪಾತ್ರೆಯನ್ನು ದಾರಕಟ್ಟಿ ತೂಗುಹಾಕಿದ್ದರು. ಡಬ್ಬಾವನ್ನು ನೀರಿನಿಂದ ತುಂಬಿದ ಮೇಲೆ ರಂಧ್ರದ ಕೆಳಗೆ ನಿಂತು ದಾರ ಎಳೆದರೆ ಡಬ್ಬದಲ್ಲಿನ ನೀರು ಜರಡಿಯಂಥ ನಳಿಗೆಯಿಂದ ಬಿದ್ದು ತುಷಾರ ಸ್ನಾನವಾದ ಹಾಗಾಗುತ್ತಿತ್ತು ಗಾಂಧೀಜಿಯ ಬಂಗಲೆಯ ಛಾವಣಿ ಚಪ್ಪಟೆಯಾಗಿದ್ದುದರಿಂದ ಛಾವಣಿಯ ಮೇಲೆ ಹಾಗೂ ಹೀಗೂ ತಿರುಗಿಸಬಹುದಾದ ಒಂದು ಗಾಳಿ ತೆರೆಯನ್ನಿಟ್ಟಿತ್ತು. ತಗಡಿನ ಮೇಲಿಟ್ಟ ದಿಮ್ಮಿಗಳು ಗಾಳಿಗೆ ಹಾರಿಹೋಗದಂತೆ ಅದು ಕಾಪಾಡು ತ್ತಿತ್ತು ಛಾವಣಿಗೆ ಏಣಿ ಹಾಕಿಕೊಂಡು ಹತ್ತುತ್ತಿದ್ದರು. ಗಾಂ ಧೀಜೀ ಯಾವಾಗಲೂ ಇಲ್ಲೇ ಮಲಗುತ್ತಿದ್ದುದು. ಹುಡುಗರು ಬೇಸಿಗೆಯಲ್ಲಿ ಮಾತ್ರ ಇಲ್ಲಿ ಮಲಗುತ್ತಿದ್ದರು.

ವಸತಿಯ ಚೊಕ್ಕಟದ ವ್ಯವಸ್ಥೆಯೂ ಓಬೀರಾಯನ ಕಾಲದ ರೀತಿಯದೇ. ಸ್ವಲ್ಪ ಮರೆಯಾದ ಜಾಗದಲ್ಲಿ ಸಣ್ಣ ಬಕೀಟು ಕಕ್ಕಸುಗಳು; ಮನೆಯವರೇ ಅದನ್ನು ಎತ್ತಿ ಗೊತ್ತಾದ ಜಾಗಕ್ಕೆ ತೆಗೆದುಕೊಂಡುಹೋಗಿ ಹಾಕಬೇಕು. ಗಾಂಧೀಜೀ ಕ್ರಮೇಣ ಈ ಪದ್ಧತಿಯನ್ನು ತುಂಬಾ ತೃಪ್ತಿಕರವಾಗಿ ಮಾಡಿ ಆ ಪದ್ಧತಿಯನ್ನೇ ಸಾಬರಮತಿ ಆಶ್ರಮದಲ್ಲಿ ಆಚರಣೆಗೆ ತಂದರು. ಅಂತೂ ಗಾಂಧೀಜೀ ಯಾವಾಗಲೂ ಬಯಸುತ್ತಿದ್ದುದು ಈ ಮಹಾ ಭಂಗಿಯ ಪಾತ್ರವನ್ನೇ.

ಫೀನಿಕ್ಸ್ ಆಶ್ರಮವನ್ನು ಮೊದಲು ಬಾರಿ ನೋಡಿದಾಗ ನನಗೆ ತುಂಬಾ ನಿರಾಶೆಯಾಯಿತು, ಮನಸ್ಸು ಕುಗ್ಗಿ ಹೋಯಿತು. ಕಸ್ತೂರಿ ಬಾಗೂ ಪಟ್ಟಣದ ಮನೆಯ ಅನುಕೂಲ ಬಿಟ್ಟು ಅನಾಗರಿಕ ಪ್ರದೇಶ ದಲ್ಲಿ ವಸತಿಯನ್ನು ನಾಟಿದ್ದು ರುಚಿಸಲಿಲ್ಲ. ಅಲ್ಲಿಗೆ ಬಂದ ದಿನ ರಾತ್ರಿ

ನಾನೂ ಬಾ ಇಬ್ಬರೂ ಒಂದೇ ಕೋಣೆಯಲ್ಲಿ ಮಲಗಿ ಗಂಟೆಗಟ್ಟಲೆ ಮಾತಾಡುತ್ತ ಗೊಣಗಿಕೊಳ್ಳುತ್ತಾ ಬಹಳ ಹೊತ್ತು ಜಾಗರಣೆ ಮಾಡಿದೆವು. ಪೂರಾ ಎರಡು ಹಗಲು ಒಂದು ರಾತ್ರಿ ಪ್ರಯಾಣ, ಅಲ್ಲಿಂದ ಮುಂದೆ ಹಳ್ಳಿಯ ತಗ್ಗುದಿಣ್ಣೆ ಕಲ್ಲುಮುಳ್ಳಿನ ದಾರಿಯಲ್ಲಿ ರಾತ್ರಿಹೊತ್ತು ೨ ಮೈಲಿ ಕಂದೀಲಿನ ಕುಣಿವ ಬೆಳಕಿನಲ್ಲಿ ನಡೆದದ್ದು ; ಹಾದಿಯುದ್ದಕ್ಕೂ ಹಾವಿನ ಹೆದರಿಕೆ. ಹಾದಿಯಲ್ಲಿ ತೀರಾ ಚಿಕ್ಕವನಿಗೆ ಆಯಾಸವಾಗಿ ಅಳಲಾರಂಭಿಸಿದ್ದ. ಉದ್ದಕ್ಕೂ ಅವನನ್ನು ಸುದಾರಿಸುವುದೇ ಒಂದು ಕೆಲಸ. ಕಡೆಗೆ ವಸತಿ ತಲಪಿದ ಮೇಲೆ ಹಾಸಿಗೆ ಹಾಸುವುದು ಮೊದಲಾದ ಸಿದ್ಧತೆ — ಇದೆಲ್ಲದರಿಂದ ನಮ್ಮ ಮೈ ಮೆದುಳು ಎಲ್ಲಾ ಬಳಲಿದ್ದವು.

ಬೆಳಗಿನ ಝಾವ ನಾಲ್ಕು ಗಂಟೆಗೆ ಇನ್ನೂ ಚುಮುಚುಮು ಬೆಳಕು ಹರಿಯುತ್ತಿದ್ದ ಹಾಗೆಯೆ ಗಾಂಧೀಜೀ ಕೆಳಗಿಳಿದು ಬಂದು ನಾವು ಮಲಗಿದ್ದ ಕೋಣೆಯ ಹೊರಗಡೆ ತಿರುಗಾಡಲಾರಂಭಿಸಿದರು. ನಾವು ಎಚ್ಚರವಾಗಿದ್ದರೂ ಸುಮ್ಮನೆ ಮಲಗಿದ್ದನ್ನು ಅರಿತು ಗಾಂಧೀಜಿ 'ನಿಮಗೇನು ಬೇಕಾಗಿತ್ತು' ಎಂದು ಕೇಳಿದರು. ಅವರ ಮಾತಿನಲ್ಲಿ ಚಿಂತೆಯ ಭಾರವಿತ್ತು. ಬಾ ಗುಜರಾತಿಯಲ್ಲೇನೋ ಹೇಳಿದರು. ಅವರಾಡಿದ ಮಾತುಕಥೆ ನನಗರ್ಥವಾಗಲಿಲ್ಲ. ಕಡೆಗೆ ಗಾಂಧೀಜೀ 'ಸ್ವಲ್ಪ ಸಹನೆಯಿಂದ ಇರುವುದರಲ್ಲೇ ಏನು ಆಗಬಹುದೋ ಅವಷ್ಟು ಮಾಡಿಕೊಳ್ಳಿ ; ಆಮೇಲೆ ಬೇಕಾದರೆ ತೀರಾ ಅಗತ್ಯವಾದ್ದನ್ನು ತರಿಸೋಣ' ಎಂದರು. ಅವರಾಡಿದ ಮಾತಿನ ರಸವೆಲ್ಲಾ ಆ ಅಗತ್ಯವೆಂಬ ಒಂದು ಮಾತಿನಲ್ಲಡಗಿತ್ತು. ನಮಗೆಷ್ಟೋ ಸಾಮಾನು ಬೇಕಾಗಿತ್ತು. ಆದರೆ ಅವು ಅಗತ್ಯವೆಂದು ತೋರಿಸುವುದು ಹೇಗೆ? ಹೀಗಾಗಿ ಫೀನಿಕ್ಸ್‌ನಲ್ಲಿ ನಮ್ಮ ಜೀವನ ತುಂಬಾ ಸರಳವಾಗಿತ್ತು. ಬಲು ಸಾದಾ ಬಾಳುವೆ.

ಒಂದುದಿನ ನಾನು, ಬಾ, ಗಾಂಧೀಜೀ, ನನ್ನ ಗಂಡ ನಾಲ್ಕೂ ಜನ ಕೂಡಿ ದರ್ಬಾನಿನ ಮಧ್ಯಮವರ್ಗದ ಮುಸಲ್ಮಾನ್ ಗೃಹಸ್ಥ

ನೊಬ್ಬನ ಮನೆಗೆ ಔತಣಕ್ಕೆ ಹೋಗಿದ್ದೆವು. ಆ ಗೃಹಸ್ಥನಿಗೆ ಇಬ್ಬರು ಹೆಂಡಿರು; ಇಬ್ಬರೂ ಗೋಷಾ ಹೆಂಗಸರು. ಇಂಗ್ಲಿಷರವಳಾದ್ದರಿಂದ ಗಂಡಸರ ಜೊತೆಗೇ ನನಗೆ ಊಟಕ್ಕೆ ವ್ಯವಸ್ಥೆ ಮಾಡಿದ್ದ ಆ ಗೃಹಸ್ಥ. ಆದರೆ ಗಾಂಧೀಜಿಯೂ ನನ್ನ ಗಂಡನೂ ಹೆಂಗಸರ ಹತ್ತಿರವೇ ನನ್ನ ಜಾಗವೆಂದು ಗೇಲಿ ಮಾಡಿದ್ದರಿಂದ ಅಲ್ಲಿಗೇ ಹೋದೆ. ಮೂರು ಗಂಟೆ ಮೇಲೆ ಆ ಮನೆ ಬಿಟ್ಟಾಗ ನನಗಂತೂ ಬೇಸರದಿಂದ ಸಿಡುಕುವ ಹಾಗಾಗಿತ್ತು. ಬಾನ್ನ ಬಿಟ್ಟರೆ ನನ್ನ ಜೊತೆಯಲ್ಲಿ ಕುಳಿತಿದ್ದವರಿಗೆ ಒಂದಕ್ಷರವಾದರೂ ಇಂಗ್ಲಿಷ್ ಬರುತ್ತಿರಲಿಲ್ಲ. ಇದ್ದಷ್ಟು ಹೊತ್ತು ಬಾಯಿ ಬಿಡದೆ ಕೂತಿದ್ದೆ. ಹೋಗುವಾಗ ಗಾಂಧೀಜೀ ಇದರ ಬಗ್ಗೆ ನನ್ನನ್ನು ಗೇಲಿ ಮಾಡಿ ಆ ಹೆಂಗಸರಿಗೆ ನನ್ನ ಭಾಷೆ ಬರದಿದ್ದರೂ ಅವರೊಡನೆ ಕೂತು, ಗಂಡಸರೊಡನೆ ಕುಳಿತಿದ್ದರೆ ಕಲಿಯುತ್ತಿದ್ದುದಕ್ಕಿಂತ ಹೆಚ್ಚಿಗೆ ಏನಾದರೂ ಕಲಿತೆಯೇನೋ ನೋಡು ಎಂದು ಹೇಳಿ ಬೆರಗು ಪಡಿಸಿದರು. ಆಮೇಲೆ ಹಾಗೇ ಯೋಚಿಸಿದಾಗ ಗಾಂಧೀಜೀ ಹೇಳಿದ್ದನ್ನು ಒಪ್ಪಬೇಕಾಯಿತು. ಇನ್ನೇನೂ ಇಲ್ಲವಾದರೂ ಸಾಧಾರಣ ಸ್ಥಿತಿಗತಿಯ ಸಂಸಾರವನ್ನು ನೋಡಿದೆ. ಹೆಚ್ಚು ಕಲಿಯದಿದ್ದರೂ ಬುದ್ಧಿವಂತರಾದ ವಯಸ್ಕರಾದ ಇಬ್ಬರು ಹೆಣ್ಣುಮಕ್ಕಳು ಒಬ್ಬನನ್ನೇ ಮದುವೆಯಾಗಿ ಸುಖವಾಗಿದ್ದುದನ್ನು ಕಂಡೆ. ಬಹುಪತ್ನೀತ್ವದ ಪರಿಣಾಮಕ್ಕೆ ಇದು ಮಾದರಿಯಾದರೆ ಅದೇನೂ ಅಷ್ಟು ಕೆಟ್ಟದಲ್ಲವೆಂದೇ ಅನಿಸಿತು.

ಇನ್ನೊಂದುಸಲ, ಎಲ್ಲೋ ಅಕಸ್ಮಾತ್ತಾಗಿ ನೋಡಿದ ಐರೋಪ್ಯ ಮಹಿಳೆಯೊಬ್ಬರ ಮನೆಗೆ ಟೀಗೆ ಬರಬೇಕೆಂತ ಕರೆದಿದ್ದರು. ಈ ಆಹ್ವಾನದ ಬಗ್ಗೆ ಗಾಂಧೀಜೀ ನನ್ನ ಗಂಡನ ಹತ್ತಿರ ವಿಪರೀತ ಚರ್ಚೆ ಮಾಡುತ್ತಿದ್ದರು. ಅದರ ಬಗ್ಗೆ ಇಷ್ಟೇಕೆ ಗದ್ದಲ ಮಾಡುತ್ತಾರೆಂದು ನನಗರ್ಥವಾಗಲಿಲ್ಲ; ಹಾಗೆಂದೇ ಕೇಳಿಬಿಟ್ಟೆ. ಕೆಲವು ತಿಂಗಳ ಮುಂಚೆ ಆಕೆ ತನ್ನ ಗಂಡನಿಂದ ವಿಚ್ಛೇದನ ಹೊಂದಿದ್ದಳು. ಗಾಂಧೀಜಿಗೆ ಈ ಸುದ್ದಿ ಹರಡಬೇಕೆಂಬ ಆಸೆ ಇಲ್ಲದಿದ್ದರೂ ಆಕೆಯ ಹಿಂದಿನ ಜೀವನ ತಿಳಿಯದೆ ನಾನು ಆ ಆಹ್ವಾನವನ್ನಂಗೀಕರಿಸ

ಬಾರದೆಂದು ಹೇಳಿದರು. ಆದರೂ ಆ ಅಪವಾದದ ಸುದ್ದಿ ಇನ್ನೂ ಪೂರ್ತಿಯಾಗಿ ಅಣಗದ್ದರಿಂದ ನಾನಾಕೆಯ ಮನೆಗೆ ಹೋದರೆ ನನಗೆ ಕೆಟ್ಟ ಹೆಸರು ಬರಬಹುದೆಂದೂ ಆದ್ದರಿಂದ ನಾನಲ್ಲಿಗೆ ಹೋಗುವುದು ತಮಗೆ ಇಷ್ಟವಿಲ್ಲವೆಂದೂ ಹೇಳಿದರು. ವಿವಾಹದ ವಿಷಯದಲ್ಲಿ ಗಾಂಧೀಜೀ ಸನಾತನಿ. ದಾಂಪತ್ಯವಿಚ್ಛೇದನವೆಂದರೆ ಅವರಿಗೆ ಹೇಸಿಗೆ. ಅಂತೇ ಆಕೆ ಎಲ್ಲಾದರೂ ಕಂಡರೆ ಮಾತಾಡಿಸಬೇಕೋ ಕೂಡದೋ ಎಂಬ ಸಂಶಯ ಅವರಿಗೆ. ಆದರೂ ಆಚರಣೆಯಲ್ಲಿ ಮಾತ್ರ ಮಧುರ ವಾದ ಮಾನವೀಯತೆಯೇ ಎಲ್ಲಕ್ಕೂ ಮೊದಲು ತಲೆಯೆತ್ತುತ್ತಿತ್ತು.

೦ ೦ ೦ ೦

'ಇಂಡಿಯನ್ ಒಪಿನಿಯನ್' ವಾರಪತ್ರಿಕೆ ಪ್ರಕಟವಾಗುವ ದಿನ ಇದ್ದವರೆಲ್ಲಾ ಆ ಕೆಲಸಕ್ಕೆ ಕೈಗೂಡಿಸುತ್ತಿದ್ದರು ಗಾಂಧೀಜೀ, ನನ್ನ ಗಂಡ ಇಬ್ಬರೂ ಏನಾದರೂ ಬರೆಯುತ್ತಲೋ ಕಡೆಯ ಗಳಿಗೆ ಯಲ್ಲಿ ಬಂದ ಲೇಖನಗಳನ್ನು ತಿದ್ದುತ್ತಲೋ ಇರುತ್ತಿದ್ದರು. ಅದೇ ಬೇಕಾದಷ್ಟು ಕೆಲಸವಾಗುತ್ತಿತ್ತು ಅಚ್ಚು ಮಾಡುವವರು ತಮ್ಮ ಕೆಲಸ ಮಾಡುತ್ತಿದ್ದರು ಯಾವ ವಿಶೇಷ ಕೆಲಸವೂ ಬಾರದ ನಾವು ಯಂತ್ರದಿಂದ ಬರುತ್ತಿದ್ದ ಹಾಗೇ ಪತ್ರಿಕೆಗಳನ್ನು ಮಡಚಿ ಮೇಲೆ ಕಾಗದ ಸುತ್ತಿ ಇಡುತ್ತಿದ್ದೆವು.

ಅಚ್ಚಿನ ಯಂತ್ರದ ಚಲನೆಗೆ ಇದ್ದ ಇಂಜಿನು ಮುರಿದು ಹೋಗಿದ್ದರಿಂದ ಯಾಂತ್ರಿಕ ವ್ಯವಸ್ಥೆಯೇನೂ ಇರಲಿಲ್ಲ ಅದಕ್ಕಾಗಿ ಮೊದಲು ಪಶುಬಲವನ್ನು ಉಪಯೋಗಿಸುತ್ತಿದ್ದೆವು; ಎರಡು ಕತ್ತೆಗಳು ಚಕ್ರ ಸುತ್ತುತ್ತಿದ್ದವು. ಮನುಷ್ಯ ತನ್ನ ಕೆಲಸ ತಾನೇ ಮಾಡಿಕೊಳ್ಳಬೇಕೆಂದು ನಂಬಿದವರು ಗಾಂಧೀಜೀ. ಅವರಿಗಿದು ಸರಿಬೀಳಲಿಲ್ಲ ಸರಿ, ಬದಲಾಯಿಸಿದರು. ಪತ್ರಿಕೆ ಅಚ್ಚಾಗುವ ದಿನ ಕೆಲವು ಗಂಟೆ ಕಾಲ ನಾಲ್ಕು ಜನ ಬಲಶಾಲಿಗಳಾದ ಜೂಲೂ ಹುಡುಗಿಯರು ಚಕ್ರ ತಿರುಗಿಸುತ್ತಿದ್ದರು; ಹೊತ್ತಿಗಿಬ್ಬರಂತೆ. ಇಬ್ಬರು ಕೆಲಸ ಮಾಡುತ್ತಿದ್ದಾಗ ಇನ್ನಿಬ್ಬರು ದಣಿವಾರಿಸಿಕೊಳ್ಳು

ತ್ತಿದ್ದರು. ಆದರೆ ವಸತಿಯಲ್ಲಿದ್ದ ಪ್ರತಿಯೊಬ್ಬ ಗಂಡಸೂ ಗಾಂಧೀಜೀ ಕೂಡ ಸ್ವಲ್ಪಸ್ವಲ್ಪ ಹೊತ್ತು ಚಕ್ರ ಸುತ್ತುತ್ತಿದ್ದರು. 'ಇಂಡಿಯನ್ ಒಪಿನಿಯನ್' ಅಚ್ಚುಮನೆ ಬಿಟ್ಟು ಬರುತ್ತಿದ್ದುದು ಹೀಗೆ

ಯಂತ್ರದ ಬಳಿ ದುಡಿಯುತ್ತಿದ್ದವರೆಲ್ಲಾ ನಗುನಗುತ್ತಾ ಕೆಲಸ ಮಾಡುತ್ತಿದ್ದರು. ಎಲ್ಲರಿಗೂ ಕಾಲಕ್ಕೆ ಸರಿಯಾಗಿ ಪತ್ರಿಕೆಯನ್ನು ಹೊರತರಬೇಕೆಂಬ ಉತ್ಸಾಹಪೂರ್ಣ ಆತುರ. ಎಷ್ಟುಹೊತ್ತು ಕೆಲಸ ಮಾಡಿದರೂ ಒಬ್ಬರೂ ಗೊಣಗುತ್ತಿರಲಿಲ್ಲ, ನೊಂದುಕೊಳ್ಳುತ್ತಿರಲಿಲ್ಲ. ಕಡೆಕಡೆಯ ಪತ್ರಿಕೆಗಳನ್ನು ಮುಗಿಸಿ ಮಡಿಸಬೇಕಾದರೆ ಎಷ್ಟೋಸಲ ನಡುರಾತ್ರಿಯಾಗುತ್ತಿತ್ತು; ಇನ್ನೂ ಹೊತ್ತಾಗುತ್ತಿದ್ದುದೂ ಉಂಟು. ಆಗ ನಾವೆಲ್ಲಾ ಒಟ್ಟಿಗೆ ಸೇರಿ ಕೆಲಸ ಮುಗಿಸಿ ಎದ್ದು, ಗಾಂಧೀಜಿಯನ್ನೂ ಕಸ್ತೂರಬಾನ್ನೂ ಅವರ ಮನೆ ಬಾಗಿಲ ವರೆಗೆ ಬಿಟ್ಟು ನಮಸ್ಕಾರ ಮಾಡಿ ನಮ್ಮ ನಮ್ಮ ಕೋಣೆಗೆ ಹೋಗುತ್ತಿದ್ದೆವು. ಆಗ ಮೈ ಪೂರಾ ಸೋತಿದ್ದರೂ ಮನಸ್ಸು ಮಾತ್ರ ತೃಪ್ತವಾಗಿರುತ್ತಿತ್ತು.

೫

ಪುಸ್ತಕದಲ್ಲಿ ಓದುವಾಗ ತುಂಬಾ ಚೆನ್ನಾಗಿವೆ, ನ್ಯಾಯ, ಸರಿ ಎನಿಸಿದ್ದ ಎಷ್ಟೋ ಆದರ್ಶಗಳನ್ನು ಫೀನಿಕ್ಸ್‌ನಲ್ಲಿ ಒರೆಹಚ್ಚಿ ನೋಡಲು ಅವಕಾಶವಿತ್ತು. ಜೀವನದ ಕಟುಸತ್ಯದ ನಿಕಷಕ್ಕೆ ತಿಕ್ಕಿದಾಗ ಇವು ಬಾಳಿನಲ್ಲಿ ಆಚರಣೆಗೆ ತರಲು ಸಾಧ್ಯವಿಲ್ಲ ಎಂಬುದು ಗೊತ್ತಾಯಿತು. ಊಹಿಸದ ಎಷ್ಟೋ ಸಮಸ್ಯೆ ನಮ್ಮೆದಿರು ಬಂದವು. ಕೆಲವಂತೂ ಅಗ್ನಿಪರಿಕ್ಷೆಯನ್ನೇ ಮಾಡಿದವು. ಆದರೂ ಇದರ ಫಲವಾಗಿ ಎಷ್ಟೋ ವಿನೋದಪ್ರಸಂಗ ನಡೆಯುತ್ತಿದ್ದವು.

ಫೀನಿಕ್ಸ್‌ನಲ್ಲಿ ಜಮೀನು ವ್ಯಕ್ತಿಯ ಯಾಜಮಾನ್ಯಕ್ಕೆ ಸೇರದೆ ಸಾಮೂಹಿಕ ಯಾಜಮಾನ್ಯಕ್ಕೆ ಸೇರಿದುದರಿಂದ ಯಾವ ಜಮೀನಿಗೂ ಬೇಲಿ ಹಾಕಿರಲಿಲ್ಲ. ಎಲ್ಲಕ್ಕಿಂತ ಮೊದಲು ಇದಿರಾದ ಸಮಸ್ಯೆ ಈ ಬೇಲಿಯದು. ಕಾಲುದಾರಿ ಕಿರುರಸ್ತೆಗಳೇ ಜಮೀನನ್ನು ಜಮೀನಿ

ನಿಂದ ಬೇರ್ಪಡಿಸುವ ಬಾಂದುಗಲ್ಲು. ಪ್ರತಿಯೊಬ್ಬರಿಗೂ ತಮ್ಮ ಜಮೀನಿನ ಅಂಚು ಎಲ್ಲಿದೆ ಎಂದು ಗೊತ್ತು. ಎಲ್ಲರೂ ತಮ್ಮ ಹೊಲ ತಾವೇ ಉತ್ತು ತಮಗೆ ಬೇಕಾದ್ದನ್ನು ಬಿತ್ತಿ ಬೆಳೆಯುತ್ತಿದ್ದರು. ಸುತ್ತಲಿದ್ದ ಜೂಲೂಗಳನ್ನು ನಂಬಬಹುದಾಗಿತ್ತು. ಅವರು ಪೈರನ್ನು ಕಳುವಾಗಲಿ, ಹಾಳಾಗಲಿ ಮಾಡುತ್ತಿರಲಿಲ್ಲ ತರಕಾರಿ ತೋಟವೂ ಚೆನ್ನಾಗೇ ಬೆಳೆದಿತ್ತು. ಆದರೆ ಅಲ್ಲಿದ್ದುದು ಮನುಷ್ಯರೊಬ್ಬರೇ ಅಲ್ಲ; ವಸತಿಯ ಪಕ್ಕದಲ್ಲಿದ್ದ ದೇಶೀ ರೈತರ ಹತ್ತಿರ ಕೆಲವು ಕತ್ತೆ ಹೇಸರು ಕತ್ತೆಗಳಿದ್ದವು. ಇವನ್ನು ರಾತ್ರಿ ಕಟ್ಟಿಹಾಕುತ್ತಿರಲಿಲ್ಲ. ಇವು ಇದ್ದ ಜಮೀನಿಗೂ ಬೇಲಿ ಇರಲಿಲ್ಲ ಅವು ಎತ್ತ ಹೋದರೂ ಯಾರೂ ಕೇಳುವರೇ ಇರಲಿಲ್ಲ. ಕಟ್ಟು ಕಡಿವಾಣವಿಲ್ಲದ ಈ ಚತುಷ್ಪಾದಿ ಗಳಿಗೆ ಚೆನ್ನಾಗಿ ಬೆಳೆದು ನಿಂತ ಫೀನಿಕ್ಸ್ ಪೈರು ರಾಜಭೋಜನ. ಗೆಜ್ಜರಿಗಡ್ಡೆ ಮೂಲಂಗಿಯಂಥ ತರಕಾರಿ ನೆಲದಮೇಲೆ ಕಾಣಿಸುವು ದಕ್ಕಿಲ್ಲ, ಈ ಕತ್ತೆಗಳ ಪಾಲಾಗಿ ಹೋಗುತ್ತಿತ್ತು. ತಿನ್ನದೆ ಬಿಟ್ಟದ್ದು ತುಳಿದು ಹಾಳು. ಬೆಳೆವ ಪೈರಿನ ಈ ವಿನಾಶಕಾರ್ಯ ತುಂಬಾ ಕಟು ವಾದ ಪರೀಕ್ಷೆಯಾಯಿತು. ಪ್ರತಿಯೊಬ್ಬರಿಗೂ ತಿಂಗಳಿಗಿಷ್ಟೆಂದು ತರಕಾರಿ ಕೊಡುತ್ತಿದ್ದರು. ಅದೂ ಅವರಿಗೆ ಬೇಕಾದ್ದನ್ನು ಅವರೇ ಬೆಳೆದುಕೊಂಡು ಹೆಚ್ಚಾಗಿಯೂ ಬೆಳೆದು ಆಶ್ರಮಕ್ಕೆಕೊಡಬೇಕಾಗಿತ್ತು. ಈ ಪಿಡುಗನ್ನು ತೊಲಗಿಸಲು ಯಾರಿಗೂ ಏನೂ ಉಪಾಯ ತೋಚ ಲಿಲ್ಲ. ಕೆಲವರು ಹೋಗಿ ಗಾಂಧೀಜಿಯ ಸಲಹೆ ಕೇಳಿದರು. ಮತ್ತೆ ಕೆಲವರು ಹೋಗಿ ತರಾಟೆಗೆ ತೆಗೆದುಕೊಂಡರು—ಕತ್ತೆಗಳನ್ನೆಲ್ಲ, ಅವುಗಳ ಮಾಲಿಕರನ್ನು ಇದರಿಂದ ಏನೂ ಉಪಯೋಗವಾಗಲಿಲ್ಲ. ಕಡೆಗೆ ಒಂದಿಬ್ಬರು ಆಶ್ರಮವಾಸಿಗಳು ತಮ್ಮ ತರಕಾರಿ ಮಡಿಗಳ ಸುತ್ತೂ ಕೋಲು ನೆಟ್ಟು ಹುಡುಗರನ್ನು ಕಾವಲಿಟ್ಟರು. ಯಾವ ಪ್ರಾಣಿಯಾದರೂ ಜಮೀನಿನಲ್ಲಿ ಬಂದರೆ ಹುಡುಗರು ಹೊಡೆದು ಅಟ್ಟುತ್ತಿದ್ದರು. ಇದರಿಂದ ಸ್ವಲ್ಪ ಕಾಲ ಕ್ಷೇಮವಾಗಿತ್ತು. ಆದರೂ ಇನ್ನೂ ಸರಿಯಾದ ಬೇಲಿ ಇರಲಿಲ್ಲ. ಇದರಿಂದ ಹೊಸದಾಗಿ ಉತ್ಸಾ ಹದಿಂದ ವ್ಯವಸಾಯಕ್ಕೆ ಕೈಹಾಕಿದವರಿಗೆ ತುಂಬಾ ನಿರಾಶೆಯಾಯಿತು,

ಉತ್ಸಾಹವಿಳಿಯಿತು. ಆಮೇಲೆ ವ್ಯವಸಾಯದಲ್ಲಿ ಸ್ವಲ್ಪ ಬದಲಾವಣೆ ಮಾಡಲಾಯಿತು. ಈ ಬದಲಾವಣೆಗೆ ಮುಂಚೆ ಎಷ್ಟೋ ಅನನು ಕೂಲ ಅನುಭವಿಸಬೇಕಾಯಿತು; ನೂರು ಕಹಿ ಪ್ರಸಂಗಗಳಾದವು.

ಇನ್ನೊಂದು ತೊಂದರೆ ನೀರಿನದು; ಅದರಲ್ಲೂ ಕುಡಿವ ನೀರಿನದು. ಮಳೆಗಾಲದಲ್ಲಿ ಛಾವಣಿಯಿಂದ ಸುರಿದ ನೀರನ್ನು ದೊಡ್ಡ ದೊಡ್ಡ ಮರದ ಪೀಪಾಯಿಗಳಲ್ಲಿ ಕೂಡಿಟ್ಟುಕೊಂಡು ಅದನ್ನು ಕುಡಿಯಲು ಉಪಯೋಗಿಸುತ್ತಿದ್ದೆವು. ಬಿಸಿಲುಕಾಲ—ವರ್ಷದಲ್ಲಿ ಹೆಚ್ಚು ತಿಂಗಳು ಇದೇ-ಬಲಿತಂತೆ ಕುಡಿಯುವ ನೀರನ್ನು ತುಂಬಾ ಹಿಡಿತದಿಂದ ಬಳಸಬೇಕಾಗುತ್ತಿತ್ತು. ಒಂದು ಹನಿ ಕೂಡಾ ವ್ಯರ್ಥವಾಗದ ಹಾಗೆ ನೋಡಿಕೊಳ್ಳುತ್ತಿದ್ದೆವು. ಮೇಲಿಂದ ಮೇಲೆ ಎಷ್ಟು ನೀರು ಉಳಿದಿದೆ ಎಂದು ಕಾತರದಿಂದ ಪರೀಕ್ಷಿಸುತ್ತಿದ್ದೆವು. ಹೊಸಬರಿಗೆ ಕೊಳಕು ನೀರೆಂದು ತೋರಿಬರುವುದನ್ನೇ ಜೂಲೂಗಳು ಕುಡಿಯುತ್ತಿದ್ದರು. ಇದರಿಂದ ಅವರ ದೇಹಾರೋಗ್ಯದ ಮೇಲೆ ಯಾವ ದುಷ್ಪರಿಣಾಮವೂ ಆಗುತ್ತಿರಲಿಲ್ಲ ಆದರೆ ಫೀನಿಕ್ಸ್‌ನಲ್ಲಿ ಕೂಡಿಸಿಟ್ಟ ಒಳ್ಳೇ ನೀರು ಅವರಿಗೂ ಸವಿಯಾಗಿತ್ತು. ಅದಕ್ಕೇ ಆ ದಾರಿಯಲ್ಲಿ ಹಾದು ಹೋಗುವಾಗ ಯಾರಾದರೊಬ್ಬರ ಮನೆಗೆ ಬಂದು ಒಂದು ಲೋಟಾ ನೀರು ಕೇಳುತ್ತಿದ್ದರು. ನೀರು ಇಲ್ಲವೆನ್ನುವುದು ತೀರಾ ಕ್ರೂರತನ. ಅಲ್ಲದೆ ನಾವು 'ದೇವರ ದೃಷ್ಟಿಯಲ್ಲಿ ನಾವೆಲ್ಲಾ/ಅಣ್ಣತಮ್ಮಂದಿರು; ಆತನಿತ್ತ ದಾನವನ್ನು ಎಲ್ಲರೂ ಸಮಾನವಾಗಿ ಹಂಚಿಕೊಳ್ಳಬೇಕು' ಎಂದು ನಂಬಿದ್ದವರು ಆದರೆ ಹಾಗೆಂದುಕೊಂಡು ದಿನಕ್ಕೆ ಎಂಟು ಹತ್ತು ಲೋಟಾ ನೀರನ್ನು ಹಾಗೆ ಕೊಟ್ಟುಬಿಟ್ಟರೆ ಮಳೆ ಬರುವ ಮುಂಚೆಯೆ ತೊಟ್ಟಿ ಬರಿದಾಗಿ, ಕುಡಿಯಲು ನೀರೇ ಇಲ್ಲದ ಹಾಗಾಗುತ್ತಿತ್ತು. ನೀರಿನ ತೊಂದರೆ ನೋಡಿ ಗಾಂಧೀಜೀ ಒಂದು ಭಾವಿ ಅಗೆಸಬೇಕೆಂದರು. ಆದರೆ ಅಗೆಸುವುದು ಮಾತ್ರ ಆಗಲೇ ಇಲ್ಲ. ಆಶ್ರಮದಲ್ಲಂತೂ ದುಡ್ಡಿನ ಕೊರತೆ ಇದ್ದದ್ದೇ; ಭಾವಿ ಅಗೆಸಲು ಬೇಕಾದಷ್ಟು ಹಣ ಕಡೆಗೂ ಜೋಡಿಸಲಾಗಲೇ ಇಲ್ಲ. ಹೀಗಾಗಿ ನೀರು ಬೇಡಿ ಬಂದ ಜೂಲೂ ಪಾಂಥನಿಗೆ ಒಂದು ಲೋಟಾ ನೀರನ್ನು ಇಲ್ಲೆನ್ನು

ವಾಗ ಮನಸ್ಸು ಕಹಿಯಾಗುತ್ತಿತ್ತು, ಕರುಳು ಕೊರೆಯುತ್ತಿತ್ತು; ಆದರೂ ನೀರೇ ಇಲ್ಲದ್ದರಿಂದ ಇಲ್ಲವೆನ್ನಬೇಕಾಗುತ್ತಿತ್ತು.

ಸದ್ಯ ಮನೆಗೆಲಸಕ್ಕೆ ಬೇಕಾಗುವ ನೀರಿಗೆ ಈ ತೊಂದರೆ ಇರಲಿಲ್ಲ. ಆಶ್ರಮದ ಅಂಚಿನಲ್ಲೇ ಒಂದು ಕಿರು ಝುರಿ ಹರಿಯುತ್ತಿತ್ತು. ಇಲ್ಲಿಂದ ಪ್ರತಿದಿನವೂ ಮನೆಗೆಲಸಕ್ಕೆ ಬೇಕಾಗುವಷ್ಟು ನೀರನ್ನು ಹೊತ್ತು ತರುತ್ತಿದ್ದೆವು. ಹುಡುಗರೂ ಕೆಲವರು ಗಂಡಸರೂ ಸ್ನಾನಕ್ಕೆ ನೆಟ್ಟಗೆ ಝುರಿಗೇ ಹೋಗುತ್ತಿದ್ದರು.

ಒಂದು ಸಲ ಈ ಹಳ್ಳದ ಹತ್ತಿರ ಒಂದು ಮುಖ್ಯವಾದ ಘಟನೆ ನಡೆಯಿತು. ನಾವು ದಿನಾ ನೀರು ತರಲು ಹಳ್ಳಕ್ಕಿಳಿಯುತ್ತಿದ್ದ ಕಡೆ ಒಂದು ಮರದ ಟೊಂಗೆ ನೀರಿಗೆ ತಗಲುವಷ್ಟು ಕೆಳಗೆ ಬಾಗಿತ್ತು. ಈ ಟೊಂಗೆಯಿಂದ ಒಂದು ದೊಡ್ಡ ಹಸಿರು ಮಾಂಬಾಹಾವು-ದಕ್ಷಿಣ ಆಫ್ರಿಕದಲ್ಲೆಲ್ಲಾ ಅತ್ಯಂತ ವಿಷಪ್ರಾಣಿ—ಜೋತು ಬಿದ್ದುದನ್ನು ಆಶ್ರಮವಾಸಿಯೊಬ್ಬ ನೋಡಿದ. ಏನು ಮಾಡಬೇಕೋ ಅವನಿಗೆ ತೋಚಲಿಲ್ಲ. ಯಾವುದನ್ನೂ ಕೊಲ್ಲಬಾರದೆನ್ನುವುದು ಫೀನಿಕ್ಸ್ ಆಶ್ರಮದ ಮೂಲತತ್ವ. ಅದನ್ನು ಹಾವಿಗೆ ಹೇಳುವುದು ಹೇಗೆ? ಅದರೊಡನೆ ವಾದಮಾಡಿ ತಿಳಿಹೇಳುವ ಬಗೆ ಯಾವುದು? ಹಾವಂತೂ ಅಲ್ಲಿಂದ ಕದಲುವುದಿಲ್ಲವೆಂಬ ಹಟ ಹಿಡಿದಿತ್ತು. ಅಲ್ಲದೆ ಹಾವುಗಳು ಎಂದೂ ಒಂಟಿಯಾಗಿರುವುದಿಲ್ಲ. ಹೀಗೇ ಬಿಟ್ಟರೆ ಇನ್ನೂ ಎಷ್ಟು ಬಂದು ಸೇರಿಕೊಳ್ಳುತ್ತವೆಯೋ ಏನೋ, ಹೇಗೆ ಹೇಳುವುದು. ಕಡೆಗೆ ಭಾರತೀಯ ಆಶ್ರಮವಾಸಿಯೊಬ್ಬ ಈ ಸಮಸ್ಯೆ ಬಗೆಹರಿಸಿದ. ಆತ ಸಸ್ಯಾಹಾರಿಯಲ್ಲ, ಹಳೇ ಶಿಕಾರಿ. ಗುಂಡಿನಿಂದ ಹೊಡೆದು ಹಾವನ್ನು ಮುಗಿಸಿಬಿಟ್ಟ. ಮುಂದೆ ಎರಡು ಮೂರು ದಿನ ಇನೂ ಯಾವಾದರೂ ಬಂದಾವೇನೋ ಎಂದು ಬಂದೂಕು ಹಿಡಿದು ಕಾವಲು ಕಾದ. ಆತ ಇಬ್ಬರು ಹೆಣ್ಣುಮಕ್ಕಳ ತಂದೆ, ತನ್ನ ಮಕ್ಕಳ ಜೀವ ಹಾವಿನದಕ್ಕಿಂತ ಹೆಚ್ಚೆಂದು ನಂಬಿದವನು. ಸ—ಮಾಡಿದ್ದಕ್ಕೆ ಗಾಂಧೀಜೀ ಏನೂ ಅಂದ ಹಾಗೆ ಕಾಣುವುದಿಲ್ಲ; ಉಳಿದವರೂ ಏನೂ

ಅನ್ನಲಿಲ್ಲ. ಆದರೆ ಎಲ್ಲರಿಗೂ ಅದರ ಯೋಚನೆ ಇತ್ತು. ನಾವು ಕೆಲವರು ಸ—ಮಾಡಿದ್ದು ಸರಿಯೆಂದೇ ಗುಟ್ಟಾಗಿ ಅಂದುಕೊಂಡೆವು; ಅವರನ್ನು ಅಭಿನಂದಿಸಬೇಕೆಂಬ ಆಶೆಯೂ ನನಗಿತ್ತು. ಆದರೆ ಈ ಘಟನೆಯನ್ನೇ ನೆಪವಾಗಿ ಮಾಡಿಕೊಂಡು ಕೊಲ್ಲುವ ಕೆಲಸಕ್ಕೆ ಯಾರನ್ನೂ ಬಿಡಲಿಲ್ಲ. ಎಲ್ಲ ಜೀವವೂ ಪವಿತ್ರವಾದ್ದೆಂಬ ಶಾಸನವನ್ನು ಪಾಲಿಸುತ್ತಿದ್ದರು.

ಇಂಥ ಸಂದರ್ಭದಲ್ಲಿ ಗಾಂಧೀಜೀ ಕಾಡಿನ ಹಿಂಸ್ರ ಪಶುಗಳ ನಡುವೆಇದ್ದೂ ಏನೂ ಅಪಾಯ ಬೀಳದ ಋಷಿಗಳ ಕಥೆ ಹೇಳುತಿದ್ದರು. ಹಿಂದುಸ್ಥಾನದ ಎಷ್ಟೋ ಮನೆಗಳಲ್ಲಿ ಮನೆಯಜಮಾನಿ ಹುಡುಗರಿಗೆ ಹಾವಿನ ಭಯವಿಲ್ಲದಿರಲೆಂದು. ಬಟ್ಟಿಯಲ್ಲಿ ಹಾಲು ಹಾಕಿ ಹಾವಿಗೆ ಇಡುವುದನ್ನು ಭಾರತೀಯ ಆಶ್ರಮವಾಸಿಯೊಬ್ಬನಿಗೆ ಜ್ಞಾಪಿಸಿದರು. ಇದರಿಂದ ಹಾವಿನ ಭಯ ಹುಡುಗರಿಗೆ ತಪ್ಪುತ್ತಿತ್ತು; ಹಾವಿಗೂ ಹುಡುಗರ ಭಯ ತಪ್ಪುತ್ತಿತ್ತು. ಇಬ್ಬರಿಗೂ ಕ್ಷೇಮವಾಗುತ್ತಿತ್ತು.

○ ○ ○ ○ ○

ಆಶ್ರಮಜೀವನದಲ್ಲಿ ನಡೆದ ಇನ್ನೊಂದು ಹಾವಿನ ಘಟನೆಯನ್ನು ಹೇಳಬೇಕು. ಇದರಿಂದ ಗಾಂಧೀಜಿಯ ಸಮೀಪಕ್ಕೆ ಬಂದವರ ಮೇಲೆ ಅವರ ಬೋಧನೆ ಎಷ್ಟು ಆಳವಾದ ಪ್ರಭಾವ ಬೀರುತ್ತಿತ್ತೋ ಗೊತ್ತಾಗುತ್ತದೆ. ಆಶ್ರಮಕ್ಕೆ ನಾನು ಮೊದಲ ಸಾರಿ ಬಂದು ಹೋದಮೇಲೆ ಇನ್ನೊಬ್ಬ ಐರೋಪ್ಯ ಆಶ್ರಮಕ್ಕೆ ಸೇರಿದ. ಆತ ಶಿಕಾರಿ, ಮೀನು ತಿನ್ನುವವನು. ಆಫ್ರಿಕದ ಕಾಡಿನಲ್ಲಿ ಒಂಟಿಯಾಗಿ ಇರುವಾಗ, ಪ್ರಯಾಣ ಮಾಡುವಾಗ, ಕೈಗಿಂತ ಬಂದೂಕು ಮೊದಲು ಎನ್ನುವುದನ್ನು ಕಲಿತವನು. ಸಿ—ಇದಾತನ ಹೆಸರು—ಗಾಂಧೀಜಿಯ ಬಳಿಗೆ ಬಂದಾಗ ಆತನಿಗೆ ಸುಮಾರು ನಲವತ್ತು ವರ್ಷ.

ಆಶ್ರಮಕ್ಕೆ ಬರುವ ಮುಂಚೆ ಈತ ಗಾಂಧೀಜಿಯ ಪ್ರಯೋಗದ ವಿಚಾರ ಕೇಳಿದ್ದನೋ ಏನೋ ಗೊತ್ತಿಲ್ಲ. ಅಂತೂ ಜೊಹಾನೆಸ್

ಬರ್ಗ್‌ನಲ್ಲಿ ಗಾಂಧೀಜಿಯನ್ನು ನೋಡಿದ ಮೇಲೆ ತನಗೆ ಒಗ್ಗಿದ ಬಾಳನ್ನು ಬಿಟ್ಟು ಆಶ್ರಮ ಬಂದು ಸೇರಿದ. ಆಶ್ರಮಕ್ಕೆ ಬಂದಮೇಲೆ ಉಳಿದವರ ಹಾಗೇ ಇದ್ದುಬಿಟ್ಟ. ಎಲ್ಲರಂತೆ ಈತನಿಗೂ ಒಂದು ಸಣ್ಣ ಬಂಗಲೆ ಇತ್ತು. ಈತನೂ ತನ್ನ ಮನೆಗೆಲಸ ತಾನೇ ಮಾಡಿ ಕೊಳ್ಳುತ್ತಿದ್ದ, ಆಶ್ರಮಕ್ಕೆ ತನ್ನಿಂದಾದ ಸಹಾಯ ಮಾಡುತ್ತಿದ್ದ; ಉಳಿದ ಹೊತ್ತು ಧ್ಯಾನ, ಅಭ್ಯಾಸ.

ಒಂದು ದಿನ ಈತ ತನ್ನ ಬೈಸಿಕಲ್ ತೆಗೆದುಕೊಳ್ಳಬೇಕೆಂತ ಗುಡಿಸಿಲಿಗೆ ಹೋದ. ಬೈಸಿಕಲ್ಲಿನ ಹತ್ತಿರ ಎರಡು ಹಸುರು ಮಾಂಬಾಹಾವು ಸಿಂಬಿ ಸುತ್ತಿಕೊಂಡು ಮಲಗಿದ್ದವು ಅವನ್ನು ನೋಡುವ ಮುಂಚೆ ಈತ ಸದ್ದು ಮಾಡಿದನೋ ಏನೋ, ಆಗಲೇ ಅವು ಹೆಡೆ ಯೆತ್ತಿ ಬುಸುಗುಟ್ಟುತ್ತಿದ್ದವು ಈತ ಸುಮ್ಮನೆ ನಿಂತುಕೊಂಡ. ಅವು ಸುರುಳಿ ಬಿಚ್ಚಿಕೊಂಡು ಹರಿಯಲಾರಂಭಿಸಿದವು. ಗುಡಿಸಲು ಸಣ್ಣದು. ತುಂಬಾ ಕಿರಿದು. ಅಲ್ಲೀ ಅದೂ ಇದೂ ಸಾಮಾನು ಬೇರೆ ತುಂಬಿದ್ದರಿಂದ ಹಾವಿನಿಂದ ತಪ್ಪಿಸಿಕೊಳ್ಳಲು ಅಕ್ಕಪಕ್ಕಕ್ಕೆ ಸರಿಯಲು ತಾವೇ ಇರಲಿಲ್ಲ; ಹೊರಗೆ ಹೋಗಲೂ ಅನುವಿರಲಿಲ್ಲ. ಹಾವನ್ನಲ್ಲಿಯೇ ಬಿಟ್ಟು ಹೊರಗೆ ಹೋದರೆ ಆತನ ಕಷ್ಟ ತೀರುವ ಹಾಗೂ ಇರಲಿಲ್ಲ. ಆಗಲೇ ಬೈಸಿಕಲ್ಲು ಬೇಕಾಗಿತ್ತು. ಸ್ವಲ್ಪ ಹೊತ್ತಿನಲ್ಲೆಲ್ಲಾ ಆತ ಹದಿನಾಲ್ಕು ಮೈಲಿ ದೂರವಿದ್ದ ಡರ್ಬಾನಿಗೆ ಹೋಗಲೇಬೇಕು. ಸಹಜವಾಗಿ ಮೊದಲು ಹಾವನ್ನು ಕೊಲ್ಲಲು ಹತ್ತಿರ ಏನಾದರೂ ಇದೆಯೇ ಎಂದು ನೋಡಿದ. ಆ ಕೆಲಸ ಮಾಡಬೇಕೆನ್ನುವಷ್ಟರಲ್ಲೇ ಆಶ್ರಮಧರ್ಮ ಜ್ಞಾಪಕಕ್ಕೆ ಬಂತು. ಈ ಪರೀಕ್ಷೆಯಲ್ಲೂ ಆಗಿ ಹೋಗಲೆಂದು ನಿರ್ಧಾರ ಮಾಡಿದ. 'ಪ್ರೇಮ ಎಲ್ಲವನ್ನೂ ಗೆಲ್ಲುತ್ತದೆ; ದೇವರು ಸೃಷ್ಟಿಸಿದ ಯಾವುದಕ್ಕೂ ಮನುಷ್ಯ ಹೆದರಬಾರದು.' ಎಂದು ತನಗೆ ತಾನೇ ಹೇಳಿಕೊಂಡ. ಹಾಗೇ ಮನಸ್ಸಿನಿಂದ ಹೆದರಿಕೆಯ ಅಸಹ್ಯ ಭಾವವನ್ನು ಒರೆಸಿ ಹಾಕಿ ಮನಸ್ಸನ್ನು ಸ್ಥಿರವಾಗಿರಿಸಲು, ಶಾಂತವಾಗಿಟ್ಟುಕೊಳ್ಳಲು ಪ್ರಯತ್ನಪಟ್ಟು ನಿಧಾನವಾಗಿ ಪದದ ಹತ್ತಿರ ಹೋಗಿ ಬಾಗಿಲಿಗೆ ಒರಗಿಕೊಂಡು ನಿಂತ. ತಾನೂ ಚಲಿಸಲಿಲ್ಲ, ಮನಸ್ಸನ್ನು

ಚಲಿಸಗೊಡಲಿಲ್ಲ. ಒಂದು ಹಾವು ಇವನ ಕಾಲಿನಹತ್ತಿರವೇ ಹರಿದು ಬಯಲಿಗೆ ಹೋಯಿತು. ಎರಡನೆ ಹಾವೂ ಮೊದಲನೆಯುದರ ಹಿಂದೆ ಎಡಬಲಕ್ಕೆ ಹೆಡೆಯಾಡಿಸಿ ನೋಡಿ, ತೀರ ಇವನ ಕಾಲಹತ್ತಿರಕ್ಕೇ ಬಂದು ತೆರೆದ ಬಾಗಿಲಿನಿಂದ ಹೊರಗೆ ಹೋಯಿತು. ಸಿ—ಗೆ ಏನೂ ಅಪಾಯವಾಗಲಿಲ್ಲ. ಬೇಗನೆ ನಮಗೆಲ್ಲಾ ಈ ಕಥೆ ಗೊತ್ತಾಯಿತು. ಎಲ್ಲರೂ ಕೇಳಿ ಸ್ತಂಭಿತರಾದೆವು. ಆದರೆ ಆಶ್ರಮದಲ್ಲಿ ಯಾತ್ತಾರೂ ಈ ಪ್ರಯೋಗವನ್ನು ತಾವೂ ಮಾಡಲು ಹೋಗಲಿಲ್ಲ ಕಡಿದರೆ ಸಾವೇ ತರುವಂಥ ಕೆಟ್ಟ ಹಾವೊಂದು ಗಾಂಧೀಜಿಯ ಕಾಲ ಮೇಲೆ ಹರಿದು ಹೋದರೂ ಅವರು ಸುಮ್ಮನಿದ್ದುಬಿಟ್ಟಿದ್ದರಂತೆ; ಇದು ಎಷ್ಟೋ ವರ್ಷಗಳಾದ ಮೇಲೆ ಗೊತ್ತಾಯಿತು.

ಮಾನವಜೀವ ಪಶುಜೀವಗಳಲ್ಲಿ ಯಾವುದು ಹೆಚ್ಚಿನದು ಎಂದು ಆಗಾಗ ಗಾಂಧೀಜಿಯೊಂದಿಗೆ ಚರ್ಚೆ ಮಾಡುತ್ತಿದ್ದೆ. ಭೂಮಿಯ ಮೇಲೆ ಅರಳಿದ ಜೀವಗಳಲ್ಲೆಲ್ಲಾ ಮಾನವಜೀವವೇ ಅತ್ಯುತ್ತಮವಾದ ದ್ದು; ಅದಕ್ಕಾಗಿ ಅದನ್ನು ಕಾಪಾಡಬೇಕು. ಪಶುಜೀವ ಮಾನವ ಜೀವಗಳಲ್ಲಿ ಯಾವುದಾದರೊಂದನ್ನು ಉಳಿಸಬೇಕಾಗಿ ಬಂದಾಗ ಪಶು ಜೀವವನ್ನು ಕೈಬಿಟ್ಟು ಮಾನವಜೀವವನ್ನು ಉಳಿಸಬೇಕು; ಇದು ನನ್ನ ವಾದದ ಧಾಟಿ.

ಒಂದು ಸಲ ಗಾಂಧೀಜೀ ತಿರುಗಿಸಿ ಪ್ರಶ್ನೆ ಹಾಕಿದರು: 'ದೇವ ನಿಗೆ ಪಶುಜೀವಕ್ಕಿಂತ ಮಾನವಜೀವ ಹೆಚ್ಚು ಬೇಕಾದ್ದು ಎಂತ ಅಂದುಕೊಳ್ಳಬೇಕೇಕೆ ?'

"ಏಕೆಂದರೆ ವಿಕಾಸದಲ್ಲಿ ಮಾನವಜೀವ ಪಶುಜೀವಕ್ಕಿಂತ ಮೇಲುಮಟ್ಟದ್ದು. ಮನುಷ್ಯ ದೇವರ ಬಗ್ಗೆ ಚಿಂತಿಸಬಲ್ಲ; ಪಶು ವಿಗಿದು ಸಾಧ್ಯವಿಲ್ಲ. ಆದಕ್ಕೇ ಮನುಷ್ಯನಿಗೆ ಪ್ರಾಮುಖ್ಯತೆ, ಹೆಚ್ಚಿನ ಸ್ಥಾನ ಕೊಡುವುದು."

"ಆದರೂ ಎಷ್ಟೋ ಜನ-ಮನುಷ್ಯರೇ-ಕಾಡಿನ ಪಶುವಿಗಿಂತ ಕೀಳಾಗಿ ನಡೆದುಕೊಳ್ಳುತ್ತಾರೆ. ಅವರಿಗೆ ಕ್ರೌರ್ಯದಲ್ಲೂ ರುಚಿ

ಯಿದೆ. ಅಂತೇ ಅವರ ಕ್ರೂರತನವೂ ಹೆಚ್ಚಿನದು. ಪಶು ಆಹಾರ ಕ್ಕಾಗಿ ಕೊಲ್ಲುತ್ತದೆ. ಆದರೆ ಮನುಷ್ಯ ಕೊಲ್ಲುವುದಷ್ಟೇ ಅಲ್ಲ, ಚಿತ್ರ ಹಿಂಸೆ ಮಾಡುತ್ತಾನೆ" ಎಂದು ಗಾಂಧೀಜೀ ಒತ್ತಿ ಹೇಳಿದರು.

"ಅದೆಲ್ಲಾ ನಾನೂ ಬಲ್ಲೆ. ಆದರೂ ಸೃಷ್ಟಿಕ್ರಮದಲ್ಲಿ ಪಶುವಿ ಗಿಂತ ಮಾನವ ಉತ್ತಮ ಜೀವ. ಅದಕ್ಕಾಗಿ ಪಶು ಉಳಿಯಲೆಂದು ಮನುಷ್ಯನನ್ನು ಹಾಳು ಮಾಡಬಾರದು" ಎಂದೆ ನಾನು.

"ಒಬ್ಬರು ಮತ್ತೊಂದನ್ನು ಹಾಳು ಮಾಡಬೇಕೆ? ಎರಡೂ ಜೊತೆಜೊತೆಯಾಗಿ ಜೀವಿಸುವಷ್ಟು ವಿಶಾಲವಾಗಿಲ್ಲವೇ ಭೂಮಿ?"

"ಎಷ್ಟೋ ಸಂದರ್ಭದಲ್ಲಿ ಇಲ್ಲವೆಂದೇ ಹೇಳಬೇಕು ಕೆಲವು ಪ್ರಾಣಿಗಳು ಬಹು ಬೇಗ ತಮ್ಮ ಸಂತಾನ ಬೆಳೆಸುತ್ತವೆ. ಅಂಥ ಸಂದರ್ಭದಲ್ಲಿ ಅವನ್ನು ಹಾಳುಮಾಡದೆ ಮಾನವ ಜಾತಿ ಉಳಿಯು ವುದು ಸಾಧ್ಯವೇ ಇಲ್ಲ. ಆಸ್ಟ್ರೇಲಿಯದಲ್ಲಿ ಮೊಲದ ಪ್ರಶ್ನೆ ನೋಡಿ, ಹಾಗಾದಾಗ ಹಾಳುಮಾಡಬೇಕು ತಾನೆ" ಎಂದು ನಾನು ಉತ್ತರ ಕೊಟ್ಟೆ.

ಗಾಂಧೀಜೀ ಇಂಥ ವಾದವನ್ನು ಎಂದೂ ಒಪ್ಪುತ್ತಿರಲಿಲ್ಲ. ಎಂಥ ಹಿಂಸ್ರಪಶುವಿನೊಡನಾದರೂ ಮನುಷ್ಯ ಭೀತಿಯಿಲ್ಲದೆ ಜೊತೆ ಯಾಗಿ ಬಾಳಬಲ್ಲ, ಬಾಳಿದ ಸಂದರ್ಭಗಳೂ ಉಂಟು ಎಂದು ಹೇಳಿ ತಮ್ಮ ಮಾತಿಗೆ ಆಧಾರವಾಗಿ ಅನೇಕ ಭಾರತೀಯ ಪುರಾಣ ಕಥೆಗಳ ಪ್ರಮಾಣ ಕೊಡುತ್ತಿದ್ದರು. ಇತ್ತೀಚಿಗೆ ತಮ್ಮ ಆಶ್ರಮದಲ್ಲಿ ಕೋತಿ ಗಳ ಕಾಟ ಹೆಚ್ಚಾದಾಗ, ಆಸ್ಟ್ರೇಲಿಯದಲ್ಲಾದ ಮೊಲದ ಕಾಟದಂಥ ಸಮಸ್ಯೆಯೇ ಇದಿರಾಗಿತ್ತು ಗಾಂಧೀಜಿಗೆ. ಈ ಸಮಸ್ಯೆಗೆ ಅವರಿನ್ನೂ ಪರಿಹಾರ ಹುಡುಕಿಲ್ಲ.

ಇನ್ನೊಂದು ಸಲ ಅಸಹಾಯಕ ಮನುಷ್ಯನೊಬ್ಬ ಹಸಿದ ಹಿಂಸ್ರ ಪ್ರಾಣಿಯ ಬಾಯಿಗೆ ತುತ್ತಾಗುವಂತಿದ್ದರೆ ನಾವೇನು ಮಾಡಬೇಕು ಎಂದು ನಾ ಕೇಳಿದೆ. 'ಅಂಥ ಸಂದರ್ಭ ಬಂದರೆ ಸಾವಿನ ಹೊಸಿಲ

ಮೇಲೆ ನಿಂತ ಮನುಷ್ಯ ಬುದ್ಧದೇವನಂತೆ ತಾನೇ ತನ್ನ ಜೀವ ಕೊಟ್ಟು ಆ ಹಸಿದ ಪ್ರಾಣಿಯನ್ನು ತೃಪ್ತಿಪಡಿಸಬಲ್ಲನಾದರೆ ಅದಕ್ಕಿಂತ ಉತ್ತಮವು ದಿವ್ಯತ್ಯಾಗ, ಬಲಿದಾನ ಮತ್ತೊಂದಿಲ್ಲ' ಎಂದು ಹೇಳಿದರು.

ಪ್ರಾಣಿಗಾಗಿ ತನ್ನ ಜೀವ ಕೊಡುವುದು ಆವನಿಗೆ ಇಷ್ಟವಿಲ್ಲದಿದ್ದರೆ ಆ ಪ್ರಾಣಿಯನ್ನು ಕೊಂದು ನಾವವನನ್ನು ಕಾಪಾಡಬಹುದಾದರೆ ಆಗ ಹೇಗೆ ಮಾಡಬೇಕು? ಬುದ್ಧದೇವನ ಕಥೆಯು ತತ ಎಷ್ಟೇ ಸುಂದರವಾದರೂ ನಾನು ಪ್ರೀತಿಸುವ ಇಲ್ಲವೆ ನಾನು ಹೊಣೆ ಹೊತ್ತ ಯಾರೊಬ್ಬರ ಜೀವಕ್ಕೆ ಪಶುವಿನಿಂದ ಅಪಾಯ ಬರುವ ಹಾಗಿದ್ದರೂ ಅದನ್ನು ಕೊಂದು, ನನ್ನ ಹೊಣೆ ಉಳಿಸಿಕೊಳ್ಳುವ ಶಕ್ತಿ ಬುದ್ಧಿವಂತಿಕೆ ಕೊಡೆಂದು ಭಗವಂತನನ್ನು ಪ್ರಾರ್ಥಿಸೇನು. ನಾನದಲ್ಲಿ ಗೆದ್ದರೆ ಗೆಲವಿಗೆ ಬೇಕಾದ ಶಕ್ತಿ ಸಾಧನವನ್ನೊದಗಿಸಿದ್ದಕ್ಕಾಗಿ ದೇವರಿಗೆ ವಂದಿಸೇನು - ನಾ ಹೇಳಿದೆ

ಗಾಂಧೀಜೀ ನಕ್ಕು ಹೇಳಿದರು. "ನಿಜ, ನೀನು ಹಾಗೇ ಮಾಡುತ್ತೀ, ನನಗೂ ನಂಬಿಕೆಯಿದೆ ಪ್ರತಿಯೊಬ್ಬರಿಗೂ ಅವರವರ ಕರ್ತವ್ಯವಿದೆ; ಅದು ಕರ್ತವ್ಯ ಎಂದು ನಿನಗನಿಸುತ್ತಿದ್ದರೆ ನೀ ಹಾಗೆ ಮಾಡಿದರೂ ಏನೂ ತಪ್ಪಿಲ್ಲ"

ಇನ್ನೊಂದು ಚರ್ಚೆಯ ವಿಷಯ—ಜಗಳದ ವಿಷಯವೆಂದೇ ಹೇಳೇನು—ಮನೆಯ ಯಜಮಾನನಿಗೆ ಸಂಸಾರದಲ್ಲಿ ಎಲ್ಲರ ಮೇಲೂ ಪೂರ್ಣಾಧಿಕಾರವಿರುವ ಮಾತು. ಗಂಡನಿಗಾಗಲಿ, ತಂದೆಗಾಗಲಿ ಹೆಂಡತಿಯ ಅಥವಾ ಮಗುವಿನ ಜೀವದ ಮೇಲೆ ಅಧಿಕಾರವಿದೆ ಎಂದು ಒಪ್ಪಲು ನಾ ಸಿದ್ಧವಾಗಿರಲಿಲ್ಲ. ಅಬ್ರಹಾಂ ತನ್ನ ಮಗನನ್ನೆ ದೇವರಿಗೆ ಬಲಿಗೊಟ್ಟ ಕಥೆಯ ವಿಷಯದಲ್ಲಿ ಆ ಚರ್ಚೆ ತಲೆಹಾಕಿತು. ಗಾಂಧೀಜೀ ಅದನ್ನು ತುಂಬಾ ಮೆಚ್ಚಿ ಹೊಗಳಿದರು. ನಾ ಹೇಳಿದೆ. "ಅದು ತಂದೆಯ ತ್ಯಾಗವಲ್ಲ; ಬಲಿಯಾಗಲೊಪ್ಪಿದ ಮಗನದು. ತನ್ನ ಜೀವವನ್ನು ತಾನೇ ಬಲಿಗೊಡಲು ಸಿದ್ಧನಾದರೆ ಅದು ಅವನ ತ್ಯಾಗ.

ಆದರೆ ತನ್ನ ಮಗನೇ ಆದರೂ ಬೇರೆಯವರ ಜೀವ ಬಲಿಗೊಡಲು ಯಾರಿಗೂ ಅಧಿಕಾರವಿಲ್ಲ; ಅದು ಸಲ್ಲದು—ಕಾಪಾಡಲಿಕ್ಕೆ ಮಗನೇ ವಿನಾ ಕೊಲ್ಲಲಿಕ್ಕಲ್ಲ"

"ಈ ಕಥೆ ನಿಮ್ಮ ಬೈಬಲಿನ ಒಂದು ಭಾಗ. ಅಬ್ರಹಾಮನಿಗೆ ತನ್ನ ಮಗನ ಬಲಿ ಕೊಡುವಂತೆ ದೇವರು ಹೇಳಿದ."

'ನಿಜ. ನನಗೂ ಗೊತ್ತಿದೆ; ಆದರೆ ನಿನ್ನ ಮಗ ಇಸಾಕನನ್ನು ಬಲಿ ಕೊಡೆಂದು ದೇವರು ಕೇಳಿದನೆಂಬುದನ್ನು ನಾ ನಂಬುವುದಿಲ್ಲ. ಪ್ರತಿಯೊಬ್ಬ ಮಾನವನ ಆತ್ಮವೂ ತನ್ನ ಬಗ್ಗೆ ತಾನೇ ದೇವನಿಗೆ ಹೊಣೆ; ಹುಟ್ಟಿಗೆ ಕಾರಣನೆಂದ ಮಾತ್ರಕ್ಕೇ ತಂದೆಗೆ ಕೂಡ ಕೊಲ್ಲುವ ಅಧಿಕಾರವಿಲ್ಲ. ಮಗುವಿನ ಜೀವ ತಂದೆಯ ಅಧಿಕಾರದಲ್ಲಿರುವುದು ಅದನ್ನಾತ ಹಾಳುಮಾಡಲೆಂದಲ್ಲ ಹಾಗೂ ಅದನ್ನು ಹಾಳು ಮಾಡಿ, ಅದರ ಕೀರ್ತಿಯನ್ನು ತಾನು ಪಡೆವುದು ತೀರಾ ಪಶುತ್ವ. ಅಂಥ ಭೀಕರ ಭಾವನೆ ಕಂಡು ನನಗೆ ತುಂಬಾ ಸಿಟ್ಟು ಬರುತ್ತದೆ; ಎದೆ ತುಂಬಾ ನೋಯುತ್ತದೆ."

"ಅಂದರೆ ನಿಮ್ಮ ಬೈಬಲನ್ನು ನೀ ಒಪ್ಪುವುದಿಲ್ಲ?" ಗಾಂಧೀಜೀ ಕೆಣಕಿ ಕೇಳಿದರು.

"ಆ ಕಥೆ ನಡೆದ ಸಂಗತಿಯಿರಬಹುದು; ಆದರೆ ದೇವರು ಅಬ್ರಹಾಮನಿಗೆ ಇಸಾಕನನ್ನು ಕೊಲ್ಲು ಎಂದು ಹೇಳಿದನೆಂದು ನಾ ನಂಬುವುದಿಲ್ಲ."

"ಇಸಾಕನನ್ನು ಕೊಲ್ಲಲು ಬಿಡಲೂ ಇಲ್ಲ ದೇವರು ಬೇಡಿದಾಗ ತನ್ನ ಮಗನನ್ನು ಬಲಿಗೊಡುವಷ್ಟು ನಂಬಿಕೆ ಅಬ್ರಹಾಮನಿಗೆ ದೇವರಲ್ಲಿತ್ತು ಎನ್ನುವುದರಲ್ಲೇ ಕಥೆಯ ಸೌಂದರ್ಯವೆಲ್ಲಾ ಇರುವುದು." ಗಾಂಧೀಜೀ ನನ್ನ ಮಾತಿನ ಮಧ್ಯೆಯೇ ಮಾತಾಡಿದರು.

"ಅದು ಆ ಕಥೆಯ ನೀತಿ; ಅದನ್ನು ಬರೆದದ್ದೂ ಅದಕ್ಕಾಗೇ; ನಾ ಬಲ್ಲೆ. ಆ ನೀತಿಯನ್ನೂ ಮೆಚ್ಚುತ್ತೇನೆ. ನಾನು ಮೆಚ್ಚದಿರು

ವುದು, ಮಗನ ಅಥವಾ ಪತ್ನಿಯ ಅಳಿವು-ಉಳಿವಿಗೆ ತಾನು ಸರ್ವಾಧಿಕಾರಿ ಎಂದುಕೊಂಡ ಪುರುಷನ ಮನೋಧರ್ಮವನ್ನು. ಕಥೆಯಲ್ಲಿ ಈ ಬಲಿದಾನದ ಬಗ್ಗೆ ಇಸಾಕನ ಮನೋಭಾವ ಹೇಗಿತ್ತು, ಅವನ ತಾಯಿ ಏನೆಂದಳು ಎಂಬುದು ಬಂದಿಲ್ಲ. ಇವರಿಗೆ ಬೇಕಾದ್ದು 'ಅಬ್ರಹಾಮನ' ಬಲಿದಾನ ಮಾತ್ರ!''

ಗಾಂಧೀಜೀ ತಲೆಯಲ್ಲಾಡಿಸುತ್ತ ಹೇಳಿದರು. "ನೀನದರ ನಿಜವಾದ ಸೊಗಸನ್ನೇ ನೋಡುತ್ತಿಲ್ಲ. ಬಲಿದಾನಕ್ಕೆ ಇಸಾಕ್ ಒಪ್ಪಲಿ ಬಿಡಲಿ, ಬಲಿಗೊಡುವ ತಂದೆಯ ಹೃದಯಕ್ಕಾಗುವ ನೋವೇನೂ ಕಡಿಮೆಯಾಗದಷ್ಟೆ. ಅದಕ್ಕೇ ಅಬ್ರಹಾಮನ ಹೃದಯಯಾತನೆ, ಭಕ್ತಿಬಲ ಮುಖ್ಯ ಎಂದದ್ದು. ಕಥೆಯನ್ನು ಹಾಗೆ ಬರೆದಿರುವುದೂ ಅದಕ್ಕಾಗಿಯೇ.''

೬

ಶಾಂತವಾಗಿ ಅರಳುತ್ತಿದ್ದ ಆಶ್ರಮದ ವಾತಾವರಣದಲ್ಲಿ ಸ್ವಲ್ಪ ದಿನವೆನ್ನುವುದರಲ್ಲೆ ಅಶಾಂತಿ ಮೂಡಿ ಕಲಕಿತು. ನಾನು ಆಶ್ರಮದಲ್ಲಿದ್ದು ನಾಲ್ಕಾರು ವಾರದಲ್ಲಿ ನೇಟಾಲಿನ ದೇಶೀ ಜನರ ದಂಗೆ ಆರಂಭವಾಯಿತು. ನಮ್ಮೆಲ್ಲರಿಗೂ ತಹತಹ. ನಮ್ಮ ನೆರೆಯಲ್ಲಿದ್ದ ಜೂಲೂ ಜನರದೇನೂ ಹೆದರಿಕೆ ಇರಲಿಲ್ಲವಾಗಲಿ, ಒಂದೆರಡು ಮೈಲಿ ಆಚೆ ದಂಗೆಕೋರರ ಬಿಡಾರವಿತ್ತು. ಅವರನ್ನು ಮಟ್ಟಹಾಕಲು ದಿನದಿನಕ್ಕೆ ನಮ್ಮ ಸಿಪಾಯಿಗಳನ್ನೆ ಹೆಚ್ಚಾಗಿ ಕಳುಹಿಸುತ್ತಿದ್ದುದೂ ಗೊತ್ತಿತ್ತು. ಇದು ನಮ್ಮೆಲ್ಲರ ಮೇಲೂ ಪರಿಣಾಮ ಮಾಡಿತು.

ನಾನು ಜೊಹಾನೆಸ್ ಬರ್ಗ್ ಬಿಡುವ ಮುಂಚೆ ನಡೆದ, ಹೆದರಿಕೆ ಹುಟ್ಟಿಸುವಂಥದಾದರೂ ವಿನೋದವಾದ ಘಟನೆಯೊಂದು ಜ್ಞಾಪಕ ಬರುತ್ತಿದೆ. ನನ್ನ ಗೆಳತಿಯೊಬ್ಬಾಕೆ ಇಂಗ್ಲಿಷ್ ಹೆಂಗಸು ನನಗಿದನ್ನು ಹೇಳಿದಳು. ಆಕೆಗೆ ಸಂಬಂಧಿಸಿದ್ದೇ ಇದು. ಜೂಲೂ ಜನರಲ್ಲೂ ಅಶಾಂತಿ ಮಸೆಯುತ್ತಿತ್ತು. ಜೊಹಾನೆಸ್‌ಬರ್ಗಿನಲ್ಲಿದ್ದ ಮನೆಗೆಲಸದ ಆಳುಗಳು ನೇಟಾಲಿಗೆ ಬಂದ ಜೂಲೂ ಕುಲದವರು.

ಅವರಲ್ಲೂ ಹರಡುತ್ತಿತ್ತು ಈ ಬೆಂಕಿ. ಮಧ್ಯಾಹ್ನ ಮನೆಯಲ್ಲಿ ಈ ದೇಶೀ ಸೇವಕರೊಂದಿಗೆ ಒಂಟಿಯಾಗಿರುತ್ತಿದ್ದ ಎಷ್ಟೋ ಜನ ಬಿಳಿ ಹೆಂಗಸರು ಗುಟ್ಟಾಗಿ ಬಂದೂಕು ರಿವಾಲ್ವರು ಪ್ರಯೋಗಿಸುವುದನ್ನು ಕಲಿತರು. ಕಲಿತ ವಿದ್ಯೆಯನ್ನು ಉಪಯೋಗಿಸುವ ಸಂದರ್ಭ ಮಾತ್ರ ಅದೃಷ್ಟವಶಾತ್ ಬರಲಿಲ್ಲ.

ನನ್ನ ಗೆಳತಿಯ ಮನೆಯಲ್ಲಿ ಟಾಂ ಎಂಬ ಅಡಿಗೆ ಮಾಣಿ ಇದ್ದ; ಅವರಮನೆಯಲ್ಲಿ ಬಹಳ ವರ್ಷಗಳಿಂದ ಇದ್ದ. ಕೈಲಿ ನಾಲ್ಕುಕಾಸು ಉಳಿತಾಯವಾದ ಕೂಡಲೆ ತನ್ನ ಜೂಲೂ ಗೃಹಕ್ಕೆ ಹೋಗಿ ಮತ್ತೊಬ್ಬಹೆಂಡತಿಯನ್ನು ಮದುವೆಮಾಡಿಕೊಂಡು, ಮತ್ತೆ ಕೆಲಸಕ್ಕೆ ಹಿಂದಿರುಗುತ್ತಿದ್ದ. ಒಂದು ದಿನವೂ ಹೆಚ್ಚು ಕಡಿಮೆ ಮಾಡುತ್ತಿರಲಿಲ್ಲ; ಕೆಲಸದಲ್ಲಷ್ಟು ನಿಷ್ಠನಾಗಿದ್ದ. ಅವನಿಗೆ ನನ್ನ ಗೆಳತಿಯಲ್ಲಿ ತುಂಬಾ ಭಕ್ತಿ; ಆಕೆಗೂ ಅವನಲ್ಲಿ ವಿಶ್ವಾಸ.

ಒಂದು ದಿನ ಜೊಹಾನೆಸ್‌ಬರ್ಗಿನ ಮನೆಗೆಲಸದ ಮಾಣಿಗಳೆಲ್ಲಾ ತಮ್ಮೊಡೆಯರ ಮೇಲೆ ದೊಂಬಿ ಎದ್ದು ಅವರನ್ನು ಕತ್ತರಿಸಿ ಹಾಕುತ್ತಾರೆಂದು ಊರೆಲ್ಲಾ ಸುದ್ದಿ ಹರಡಿತು. ಈ ಸುದ್ದಿ ಕೇಳಿ ನನ್ನ ಗೆಳತಿ ಅರ್ಧ ಹಾಸ್ಯ, ಅರ್ಧ ಹೆದರಿಕೆಯಿಂದ 'ಮಾಣಿಗಳು ಗಲಾಟೆ ಮಾಡಿದರೆ ನೀನೂ ನನಗೇನು ಅಪಾಯ ಮಾಡುವುದಿಲ್ಲ ತಾನೆ ಟಾಂ' ಎಂತ ಕೇಳಿದಳು.

ಟಾಂ ಖಚಿತವಾಗಿ ಹೇಳಿದ. 'ಊಹುಂ ನಾನು ನೆರೆಮನೆ ಯಾಕೆಯನ್ನು ಕೊಲ್ಲುತ್ತೇನೆ. ನೆರಮನೆ ಮಾಣಿ ನಿಮ್ಮನ್ನು ಕೊಲ್ಲುತ್ತಾನೆ' ಎಂದ.

ಹುಡುಗನ ಈ ಸಮಾಧಾನದ ವಚನ ಕೇಳಿ ನನ್ನ ಗೆಳತಿ ಮೂರ್ಛೆ ಹೋಗುವುದರಲ್ಲಿದ್ದಳು. ಗಾಂಧೀಜಿಯೇನೋ ಈ ಕಥೆ ಕೇಳಿ ನಕ್ಕರಾಗಲಿ ನನ್ನ ಗೆಳತಿಯ ಕಣ್ಣೆದುರು ಈ ಮಾತು ಅಗ ನಿಂತಿತ್ತು ಭೂತವಾಗಿ.

ದೊಂಬಿ ನಡೆಯುತ್ತಿದ್ದಲ್ಲಿ ಗಾಯಗೊಂಡವರನ್ನು ಸಾಗಿಸಲು ಒಂದು 'ಡೋಲಿ ಪಡೆ' ಒಯ್ಯಲು ಗಾಂಧೀಜೀ ಸರ್ಕಾರದ ಅನುಮತಿ

ಕೇಳಿದರು. ಸರ್ಕಾರವೇನೋ ಆಗ ಇದಕ್ಕೆ ಒಪ್ಪಲಿಲ್ಲವಾಗಲಿ ಎಂದಾದರೂ ಗಾಂಧೀಜೀ ಹೋಗಬಹುದೆಂಬ ಯೋಚನೆಯಿಂದ ಆಶ್ರಮದ ಅಶಾಂತಿ ಹೆಚ್ಚಿತು.

ನನ್ನ ಗಂಡ ಜೊಹಾನೆಸ್‌ಬರ್ಗಿನಿಂದ ಹಿಂದಿರುಗಿದ ಕೂಡಲೆ ನಾವೂ ನಮ್ಮ ಸಂಸಾರಕ್ಕೊಂದು ಪುಟ್ಟ ಮನೆ ಗೊತ್ತುಮಾಡಿಕೊಂಡೆವು. ಆಶ್ರಮದ ಅಂಚಿನಲ್ಲಿತ್ತು ನಮ್ಮ ಮನೆ. ಎರಡು ಕೋಣೆಯ ಗುಡಿಸಲು. ಮೇಜು ಕುರ್ಚಿ ತೀರಾ ಸ್ವಲ್ಪ; ಇಲ್ಲವೆಂದರೂ ಸರಿಯೆ. ಮದುವೆಯಾದ ಮೇಲೆ ನಾನು ಗೂಡು ಕಟ್ಟಿದ್ದು ಇದೇ ಮೊದಲು. ಸರಿಯಾದ ಆಹಾರ ದೊರೆಯದ್ದು; ಹಾವು ಹುಳಹುಪ್ಪಡಿಗಳ ಹೆದರಿಕೆ, ಪಟ್ಟಣವಾಸಕ್ಕೆ ಮೈ ಒಗ್ಗಿದ ನನಗೆ ಆಶ್ರಮ ಜೀವನದಿಂದಾದ ನಿರಾಶೆ, ಇದೆಲ್ಲದರ ಮೇಲೆ ಈ ದೊಂಬಿ ನನ್ನ ಸಹನೆಗೆ ಮೀರಿತ್ತು. ರಾತ್ರಿಯೆಲ್ಲಾ ಕಣ್ಣಿಗೆ ಕಣ್ಣು ಹಚ್ಚದೆ ಎಲ್ಲಿ ಹಾವು ಹರಿಯುತ್ತದೋ ಎಂದು ಹೆದರುತ್ತಾ ಗಳಿಗೆಗಳಿಗೆ ಬಂದೂಕಿನ ಢಮಾರ್ ಏಟು ಬಿದ್ದವರ ನೋವಿನ ಕೂಗನ್ನು ಕೇಳುವ ಭೀತಿಯಲ್ಲಿ ಬಳಲುತ್ತಾ ಹಾಸಿಗೆಯಲ್ಲಿ ಹೊರಳಾಡುತ್ತಿದ್ದೆ. ನಿದ್ದೆ ಮಾಡುತ್ತಿದ್ದುದು ಎಲ್ಲೋ ಒಂದು ಗಳಿಗೆ ಮಾತ್ರ. ನಾವು ಫೀನಿಕ್ಸ್‌ನಲ್ಲಿ ಇರಬೇಕೇ ಬೇಡವೆ ಎಂಬುದನ್ನು ಗಾಂಧೀಜೀ ನನ್ನೊಡನೆ ಯೋಚಿಸಿ ಕಡೆಗೆ, ತತ್ಕಾಲಕ್ಕಾದರೂ ನಾನು ದರ್ಬಾನಿನಲ್ಲಿರುವುದೇ ಒಳ್ಳೆಯದೆಂದು ಹೇಳಿದರು. ಅದಕ್ಕೆ ಬೇಕಾದ ಸಿದ್ಧತೆಗಳಾದವು. ಅಂತೂ ಒಂದು ದಿನ ಬೆಳಿಗ್ಗೆ ನಾನು ಫೀನಿಕ್ಸ್ ಬಿಟ್ಟು ದರ್ಬಾನಿಗೆ ಹೊರಟೆ. ರೈಲಿನಲ್ಲಿ ನನ್ನ ಜೊತೆಗೊಬ್ಬ 'ಖಾಕೀವಾಲಾ' ಇದ್ದ. ಅವನು ಹೇಳುತ್ತಿದ್ದ: 'ಈ ಚೀಲದಲ್ಲಿ ಬಂಬಾಟಾನ ತಲೆ ಇದೆ' ಎಂತ. ಬಂಬಾಟಾ ಜೂಲೂ ದೊಂಬಿಗಾರರ ನಾಯಕ. ಅವನ ತಲೆ ತಂದವರಿಗೆ ಬಹುಮಾನವಿಟ್ಟಿತ್ತು. ಎಂತಲೇ ನಾನೂ ಆ ಕಥೆ ನಂಬಿದೆ. ನಿಜವೋ ಸುಳ್ಳೋ ನನಗಂತೂ ಗೊತ್ತಿಲ್ಲ. ದರ್ಬಾನಿಗೆ ಬಂದ ಮೇಲೂ ನನ್ನ ಗಂಡ ವಾರದಲ್ಲಿ ಎಷ್ಟೋ ಸಲ ಫೀನಿಕ್ಸ್‌ಗೆ ಹೋಗಿ ಬರುತ್ತಿದ್ದ, ಇಂಡಿಯನ್ ಒಪಿನಿಯನ್‌ನ ಸಂಪಾದಕತ್ವದ

ಕೆಲಸ ನಿರ್ವಹಿಸಲು. ಆಕೆಯೊಂದಿಗೆ ನಾನೂ ಆಗಾಗ ಆಶ್ರಮಕ್ಕೆ ಹೋಗಿಬರುತ್ತಾ ಇದ್ದೆ.

ನಾವು ಫೀನಿಕ್ಸ್ ಆಶ್ರಮ ಬಿಟ್ಟ ಕೆಲದಿನಗಳಲ್ಲೇ ಸರಕಾರ ಗಾಂಧೀಜಿಯ 'ಡೋಲಿ ಪಡೆ'ಗೆ ಒಪ್ಪಿತು. ತಾವೇ ತಿದ್ದಿ ತಯಾರಿಸಿದ ಜನರದೊಂದು ಪಡೆ ತೆಗೆದುಕೊಂಡು ಗಾಂಧೀಜೀ ರಂಗಕ್ಕೆ ಹೋದರು. ತನ್ನ ಗಂಡ ಹಾಕಿದ ಈ ಹೊಸ ಹೆಜ್ಜೆ ನೋಡಿ ಬಾಗೆ ಸ್ವಾಭಾವಿಕವಾಗೇ ತುಂಬಾ ಯೋಚನೆಯಾಯಿತು. ದಂಗೆ ಬಲು ಬೇಗ ಅಡಗಿತು. ಗಾಂಧೀಜೀ ಆಶ್ರಮಕ್ಕೆ ಹಿಂದಿರುಗಿದರು. ಆದರೆ ಅಲ್ಲೇ ನಿಲ್ಲಲಿಲ್ಲ.

ಟ್ರಾನ್ಸ್‌ವಾಲ್‌ನಲ್ಲಿಯ ಭಾರತೀಯರ ಪರಿಸ್ಥಿತಿ ಕೆಡುತ್ತಿದ್ದುದರಿಂದ ಗಾಂಧೀಜೀ ಕೂಡಲೆ ಅಲ್ಲಿಗೆ ಹೋಗುವುದು ಅಗತ್ಯವಾಯಿತು. ನನಗೂ ನನ್ನ ಗಂಡನಿಗೂ ಒಂದೆರಡುವಾರದಲ್ಲೇ ತಮ್ಮನ್ನು ಹಿಂಬಾಲಿಸುವಂತೆ ಹೇಳಿ ಅವರು ಕೂಡಲೇ ಜೊಹಾನೆಸ್‌ಬರ್ಗಿಗೆ ಹೋದರು, ಬಂದೊಡನೆ ಗಾಂಧೀಜೀ ಊರಿನಅಂಚಿನಲ್ಲೊಂದು ಸಣ್ಣಮನೆಯನ್ನು ಬಾಡಿಗೆಗೆ ಹಿಡಿದರು. ಈ ಮನೆಯಲ್ಲೂ ಅಷ್ಟೆ, ಕುರ್ಚಿ ಮೇಜಿನ ಆಡಂಬರ ತೀರಾ ಸ್ವಲ್ಪ. ಸ್ವಲ್ಪ ದಿನದಲ್ಲೇ ನಾವೂ ಗಾಂಧೀಜಿಯ ಜೊತೆ ಸೇರಿದೆವು. ಗಾಂಧೀಜಿಯ ಮೂರು ಜನ ಮಕ್ಕಳೂ ಬಾನೂ ಆಶ್ರಮದಲ್ಲೇ ಇದ್ದರು. ಹುಡುಗರಿಗೆ ಪಾಠ ಮೊದಲಿನ ಹಾಗೆ ಹುಣ್ಣಿಮೆಗೊಂದು ಸಲ, ಅಮಾವಾಸ್ಯೆಗೊಂದು ಸಲ. ದೊಡ್ಡ ಹುಡುಗ ತನಗೆ ಸರಿಯಾದ ಶಿಕ್ಷಣ ಕೊಡಿಸಬೇಕೆಂದು ಒತ್ತಾಯ ಮಾಡುತ್ತಿದ್ದ. ನಾವು ಫೀನಿಕ್ಸ್ ಬಿಡುವ ಮುನ್ನ ನನಗೆ ಹೇಳಿದ:

"ಬಾಪೂಗೆ ಸರಿಯಾದ ವಿದ್ಯಾಭ್ಯಾಸವಾಯಿತು. ನನಗೇಕೆ ಬೇಡ?"

ನನಗೇನೋ ಹುಡುಗನಲ್ಲಿ ಪೂರ್ಣಸಹಾನುಭೂತಿ. ಆದರೂ ವಿದ್ಯಾಭ್ಯಾಸದ ಬಗ್ಗೆ ಗಾಂಧೀಜೀ ನನಗೆ ಹೇಳಿದ ಮಾತನ್ನವನಿಗೆ ತಿಳಿಸಿದೆ.

ಮಾಡಿ ಒಂದೆರಡು ಚಿತ್ರ ಹಾಕಿದರೆ ಮನೆ ಎಷ್ಟೋ ಚೆನ್ನಾಗುತ್ತದೆ. ಈ ಅಸಹ್ಯದ ಗೋಡೆ ಮುಚ್ಚಬೇಕು ನಾನಂದೆ.

'ನೋಡು ಇಲ್ಲಿ ಕಾಣಿಸುವುದಕ್ಕಿಂತ ಸುಂದರವಾದ ಚಿತ್ರ ಇದೆಯೇ?' ಗಾಂಧೀಜೀ ವಿಮಾನಖಾನೆಯ ಕಿಟಕಿಯಿಂದಾಚೆ ಕಾಣುತ್ತಿದ್ದ ಭವ್ಯದೃಶ್ಯದ ಕಡೆ ಕೈತೋರಿಸುತ್ತಾ ಹೇಳಿದರು: 'ಬರೀ ಕಾಲಹರಣಕ್ಕೆ ಕಾರಣ, ಇದನ್ನೆಲ್ಲ ಏಕೆ ಹೇರಿಕೊಳ್ಳುತ್ತೀ? ಸೌಂದರ್ಯ ಬೇಕು ಎನ್ನುತ್ತೀಯೆ. ನಿನ್ನ ಸುತ್ತಾ ಇದೆ. ಈ ದೈವಸೃಷ್ಟಿಯ ಸೌಂದರ್ಯವಿರುವಾಗ ಮನುಷ್ಯ ಮಾಡಿದ್ದರ ಯೋಚನೆ ಏಕೆ ಮಾಡಬೇಕು?'

"ನಿಮ್ಮಷ್ಟು ಸುಲಭನಾಗಿ ನಾನು ದೇವ ಮಾನವರಲ್ಲಿ ಭೇದ ಮಾಡುವುದಿಲ್ಲ. ಈ ರೀತಿ ಗೆರೆ ಎಳೆಯುವುದೂ ನನಗೆ ಬಾರದು ಮನುಷ್ಯ ಸುಂದರ ವಸ್ತುಗಳನ್ನು ಸೃಜಿಸಿದರೆ, ದೇವರೇ ಅವನ ಮೂಲಕ ಮಾಡಿಸಿದ ಹಾಗೆ"

'ದೇವರಿದ್ದರೂ ಮನುಷ್ಯನ ಪೂಜೆ ಮಾಡಬೇಕೇನು ನೀನು?' ಗಾಂಧೀಜೀ ಪ್ರಶ್ನೆ ಹಾಕಿದರು.

'ಹಾಗಲ್ಲ, ಮನುಷ್ಯನ ಮೂಲಕ ನಾನು ದೇವರ ಪೂಜೆ ಮಾಡುತ್ತೇನೆ' ನಾನು ಉತ್ತರ ಕೊಟ್ಟೆ.

'ಊಹಂ, ಮನುಷ್ಯನ ಪೂಜೆ ಮಾಡುತ್ತಾ ನೀನು ದೇವರನ್ನೆ ಕಾಣದ ಹೋಗುತ್ತೀಯೆ?

'ನಿಮ್ಮ ಮಾತು ನಾನೊಪ್ಪುವುದಿಲ್ಲ. ಮನುಷ್ಯ ಮಾಡಿದ ಸುಂದರ ವಸ್ತು ಒಂದನ್ನು ನೋಡಿದಾಗ ಪ್ರೇಮ ಅಥವಾ ಸೌಂದರ್ಯದ ಭಾವಾನುಭವವಾಗುತ್ತದೆ ನನಗೆ; ನನ್ನಲ್ಲಿ ಮನುಷ್ಯ ದೇವರ ಭಾಷ್ಯಕಾರ.'

ಸ್ವಲ್ಪ ಹೊತ್ತು ಮೌನ ಆಮೇಲೆ ಗಾಂಧೀಜೀ ಹೇಳಿದರು: 'ಸರಿ, ಜಮಖಾನ ತೆರೆ ನಿನಗೆ ಬೇಕೆಬೇಕು ಎನಿಸಿದರೆ ತರಿಸಲೇಬೇಕು, ಆಗಲಿ ಹೆನ್ರಿ ಕೈಲಿ ಮಾತನಾಡೋಣಂತೆ."

ಒಂದೆರಡು ದಿನದಲ್ಲೇ ಪೇಟೆಯಿಂದ ಜಮಖಾನ ಬಂತು. ನಾನೂ ಕಿಟಕಿಗಳಿಗೆ ತೆರೆ, ಕುರ್ಚಿಗೆ ಮೆತ್ತೆ ಅಣಿಗೊಳಿಸುತ್ತಿದ್ದೆ. ಗೋಡೆಯ ಮೇಲೆ ಚಿತ್ರವೂ ಬಂತು. ಒಂದೆರಡು ವಾರದಲ್ಲಿ ಮನೆ "ಮನೆ"ಯಾಯಿತು.

ನಾನು ಮಾಡುತ್ತಿದ್ದ ಕೆಲಸ ನೋಡಿ ಗಾಂಧೀಜೀ, ಇದನ್ನು ಮಾಡುವ ಅಥವ ಇದರ ಬಗ್ಗೆ ಯೋಚಿಸುವ ಕಾಲವನ್ನು ಜ್ಞಾನಾರ್ಜನೆಗೆ ಉಪಯೋಗಿಸಿದರಾಗದೆ ಎಂದು ಬೋಧಿಸುತ್ತಿದ್ದರು.

'ಕಸೂತಿ ಹಾಕವಾಗಲೂ ನಾನು ಯೋಚನೆ ಮಾಡುತ್ತೇನೆ. ಕೈ ಕೆಲಸ ಮಾಡುತ್ತಿದೆ ಎಂತ ಮೆದಳು ಮಲಗುವುದಿಲ್ಲ. ಅಲ್ಲದೆ ಕಸೂತಿ ಹಾಕಿದರೆ ಮಿದುಳಿಗೂ ಹಾಯಿ' ಎಂದೆ ನಾನು

ಗಾಂಧೀಜೀ ಚರಖಾದಲ್ಲಿ ನೂಲುತ್ತಾ ಯಾವ್ಯಾವುದೋ ಸಮಸ್ಯೆ ಯೋಚಿಸುವಾಗ ಈ ಮಾತು ಜ್ಞಾಪಿಸಿಕೊಂಡಿದ್ದಾರೋ ಏನೋ—ನನಗಂತೂ ಹಾಗನಿಸುತ್ತದೆ

ಮೊದಲೇ ಹೇಳಿದ ಹಾಗೆ ಮನೆಯಲ್ಲಿ ಆಳುಗಳಾರೂ ಇರಲಿಲ್ಲ; ಇಟ್ಟುಕೊಳ್ಳಕೂಡದಾಗಿತ್ತು. ಮನೆಯಲ್ಲಿ ಗಂಡಸರ ಪೈಕಿ ಒಬ್ಬರು ಕಿಟಕಿಗಳನ್ನೆಲ್ಲಾ ಒರಸಿ ಶುಭ್ರವಾಗಿಡುತ್ತಿದ್ದರು. ಇನ್ನೊಬ್ಬರು ವರಾಂಡಾ, ಅಂಗಳ ಗುಡಿಸಿ ಚೊಕ್ಕಟ ಮಾಡುತ್ತಿದ್ದರು. ನಾನು ಪಟ್ಟಿ ಮಾಡಿಕೊಟ್ಟಂತೆ ಯಾರಾದರೊಬ್ಬರು ಊರೊಳಗೆ ಹೋಗಿ ಸಾಮಾನು ತರುತ್ತಿದ್ದರು ಈ ದಿನಗಳಲ್ಲಿ ಬೆಳಗಿನ ಉಪಾಹಾರಕ್ಕೆ ಹಣ್ಣು, ನಾನ್‌ರೊಟ್ಟಿ, ಬೇಕಾದವರಿಗೆ ಸ್ವಲ್ಪ ರಸಾಯನ ಇಷ್ಟೇ; ಹೆಚ್ಚೇನಾದರೂ ಬೇಕೆಂದರೆ ಬೇಕಾದವರು ಮಾಡಿಕೊಳ್ಳಬಹುದು. ಬೆಳಗ್ಗೆ ಒಂಬತ್ತು ಹೊತ್ತಿಗೇ ಗಂಡಸರೆಲ್ಲಾ ಕೆಲಸದ ಮೇಲೆ ಹೊರಟುಹೋಗುತ್ತಿದ್ದರು. ಮನೆಯಲ್ಲಿ ನಾನೊಬ್ಬಳೇ. ಮನೆಗೆಲಸ ಕಸಮುಸರೆ ಮಾಡಿಕೊಂಡು ಸಂಜೆಯ ಅಡಿಗೆ ಮಾಡುತ್ತಿದ್ದೆ. ಪಾತ್ರೆ ತೊಳೆಯುವುದರಲ್ಲಿ ಗಂಡಸರೂ ನೆರವಾಗುತ್ತಿದ್ದರು. ಅಡಿಗೆ ಮಾಡಿ ಬಡಿಸುವುದು, ಊಟಮಾಡಿದ ಮೇಲೆ ಪಾತ್ರೆ ತೆಗೆದಿಡುವುದು

ನನ್ನ ಕೆಲಸ. ಈ ಏರ್ಪಾಡು ಅಷ್ಟು ತೃಪ್ತಿಕರವಾಗಿರಲಿಲ್ಲ. ಕೆಲಸ ಮಾಡುವುದರಲ್ಲಿ ನನ್ನ ಗಂಡ, ಗಾಂಧೀಜೀ ಇಬ್ಬರೂ ನೆರವಾಗಬೇಕೆಂದು ನಿಯಮವೇನೋ ಇತ್ತಾಗಲಿ, ಮನೆಗೆಲಸಕ್ಕೆ ಅವರಿಗೆ ಹೊತ್ತೆಲ್ಲಿ ತರಬೇಕು. ಕೆಲಸವೆಲ್ಲಾ ನನ್ನೊಬ್ಬಳ ಮೇಲೇ ಬೀಳುತ್ತಿತ್ತು. ನಾನೊಬ್ಬಳೇ ಎಷ್ಟೆಂತ ಕೆಲಸ ಮಾಡಿಯೇನು? ಹೀಗಾಗಿ ಅಡಿಗೆ ಕೆಲಸದಲ್ಲಿ ಸಹಾಯ ಮಾಡಲು, ಕಿಟಕಿ ಮೇಜು ಕುರ್ಚಿ ಒರೆಸಲು, ಇನ್ನೂ ಇಂಥದೆ ಪುಡಿಗೆಲಸ ಮಾಡಲು ದೇಶೀ ಹುಡುಗನೊಬ್ಬನನ್ನು ಗೊತ್ತುಮಾಡಿಕೊಂಡೆವು. ಆ ಹುಡುಗ ತೀರಾ ಹೊಸಬ, ಮೇಜು ಒರಸು ಎಂದರೆ ಇದ್ದದ್ದೂ ಕೊಳೆಮಾಡುತ್ತಿದ್ದ. ಕಡೆಗೆ ಇವನನ್ನು ಬಿಡಿಸಿ ಇನ್ನೊಬ್ಬ ಹುಡುಗನನ್ನು ಕೆಲಸಕ್ಕಿಟ್ಟುಕೊಂಡದ್ದಾಯಿತು.

ಕಸ ಗುಡಿಸುವುದು, ನೆಲ ಸಾರಿಸುವುದು, ಒಲೆ ತೊಳೆಯುವುದನ್ನು ಅವನಿಗೆ ನಾನು ಹೇಳಿಕೊಡುವುದು ಗಾಂಧೀಜೀಗೆ ತುಂಬಾ ವಿನೋದವಾಗಿತ್ತು. ಇಷ್ಟರಲ್ಲೇ ನನ್ನ ಹೆರಿಗೆಯ ದಿನಗಳೂ ಹತ್ತಿರವಾದ್ದರಿಂದ ನೆರವಿಗೆ ಕೂಡಲೆ ಯಾರನ್ನಾದರೂ ತರುವುದು ಅಗತ್ಯವೆಂದು ಗಾಂಧೀಜಿಗೆ ಅರ್ಥವಾಯಿತು. ನನ್ನ ಚೊಚ್ಚಲು ಕೂಸು ಹುಟ್ಟುವುದಕ್ಕೆ ಒಂದು ತಿಂಗಳ ಮುಂಚೆ 'ಬಣ್ಣ'ದ ಹುಡುಗಿಯೊಬ್ಬಳನ್ನು ನನಗೆ ನೆರವಾಗಲೆಂದು ತಂದರು. ಇಷ್ಟರಲ್ಲೇ ಮುಂದಿನ ಕೋಣೆಯಲ್ಲಿದ್ದ ಹುಡುಗ ಜೊಹಾನೆಸ್‌ಬರ್ಗ್‌ನಲ್ಲಿದ್ದ ತನ್ನ ಗೆಳೆಯರ ಬಳಿ ಇರಹೋದ್ದರಿಂದ ಹುಡುಗಿಗೆ ಸ್ಥಳಾನುಕೂಲವಾಯಿತು. ಆ ಹುಡುಗನಿದ್ದ ಕೋಣೆಯನ್ನೇ ಈಕೆಗೆ ತೆರವು ಮಾಡಿಕೊಟ್ಟೆವು.

ದಿನಗಳೆದಂತೆ ಭಾರತೀಯರ ಪರಿಸ್ಥಿತಿ ವಿಷಮವಾಗುತ್ತಾ ನಡೆದಿತ್ತು. ಎಲ್ಲರಿಗೂ ಅದರ ಕಾತರ. ಯಾವ ಗಳಿಗೆಗೆ ಏನೋ ಎನ್ನುವ ಗಂಭೀರಸ್ಥಿತಿಗೆ ಬಂದಿತ್ತು. ನಗೆ, ಗೆಲವಿನ ಶಾಂತವಾದ ಸಂಜೆಗಳ ಕಾಲ ಆಗಿಹೋಯಿತು. ಎಷ್ಟೋ ಸಾರಿ ಗಾಂಧೀಜೀ ಮನೆಗೆ ಬರಬೇಕಾದರೆ ನಡುರಾತ್ರಿಯಾಗುತ್ತಿತ್ತು. ಅದೂ ೧೨ ಗಂಟೆ

ಗಳ ಪಟ್ಟಾದ ಚಾಕರಿ ದುಡಿದು, ನಾಲ್ಕುಮೈಲಿ ನಡೆದು ಬರಬೇಕಿತ್ತು ಮನೆಗೆ. ಮನೆಗೆ ಬಂದರೇನು, ಇಲ್ಲೂ ಕೆಲಸ ಇದ್ದೇ ಇರುತ್ತಿತ್ತು. ಎಷ್ಟೋ ಜನ ನಾಲ್ಕು ಮೈಲಿಯೂ ಅವರೊಡನೆ ತಮ್ಮ ಸುತ್ತಲ ನೂರು ತೊಂದರೆ ಬಗೆಹರಿಸುವ ವಿಧಾನ ಚರ್ಚಿಸುತ್ತಾ ಅವರ ಜೊತೆ ಯಲ್ಲೇ ಬರುತ್ತಿದ್ದರು ಎಷ್ಟೋ ಸಲ ಮಧ್ಯ ರಾತ್ರಿಯ ಹೊತ್ತಿ ನಲ್ಲಿ ನಾಲ್ಕಾರು ಜನ ಬಂದುಬಿಡುತ್ತಿದ್ದರು ಎಲ್ಲಾ ದಣಿದು ಬಂದವರೇ! ಸರಿ, ಮಾತಾಡಲು ಕೂಡಾ ಆಗದಷ್ಟು ಸೋತಾಗ ಸ್ಥಳ ಸಿಕ್ಕಲ್ಲಿ ಕಂಬಳಿ ಹಾಸಿಕೊಟ್ಟು ಅವರಿಗೆ ಒಂದೆರಡು ಗಳಿಗೆ ಕಣ್ಣು ಮುಚ್ಚಿಕೊಳ್ಳಲು ಅನುಕೂಲ ಮಾಡಿಕೊಡುತ್ತಿದ್ದೆವು. ಮತ್ತೆ ನಸುಕಿನಲ್ಲೇ ಎದ್ದು ನಾಲ್ಕು ಮೈಲಿ ನಡೆಯಬೇಕಲ್ಲ! ಮನೆಯ ಹತ್ತಿರದಿಂದಲೇ ನಗರದ ಮಧ್ಯಕ್ಕೆ ದಿನಾಲೂ ಒಂದು ಮೋಟಾರು ಓಡಾಡುತ್ತಿತ್ತು. ಆದರೆ ಅದು ಬಿಳಿಯರಿಗೆ ಮಾತ್ರ; ಬಣ್ಣದವರು ಅದರಲ್ಲಿ ಕಾಲಿಡುವ ಹಾಗಿರಲಿಲ್ಲ. ಬಾಡಿಗೆ ಗಾಡಿ ಮಾಡದೆ ಹೋದರೆ ಗಾಂಧೀಜೀ ಎರಡೂ ಹೊತ್ತು ನಡೆಯಬೇಕಾಗಿತ್ತು. ಗಾಂಧೀಜೀ ಮಾತ್ರ ಎಂದೂ ಇದರ ಬಗ್ಗೆ ಗೊಣಗುತ್ತಿರಲಿಲ್ಲ. ಅವರು ಕೇಳಿದ್ದರೆ ಅವರೊಬ್ಬರನ್ನು ಮಾತ್ರ ಮೋಟಾರಿನಲ್ಲಿ ಕೂಡಿಸಿಕೊಂಡು ಹೋಗಲು ಅಪ್ಪಣೆ ದೊರೆಯಬಹುದಾಗಿತ್ತೋ ಏನೋ. ಆದರೆ ತಮ್ಮವರಲ್ಲಿ ತೀರ ಕೀಳು ಮನುಷ್ಯನಿಗೂ ಆಗಬೇಕು ಆ ಅನುಕೂಲ, ಇಲ್ಲದಿದ್ದರೆ ಅವರಿಗೆ ಬೇಕಾಗಿರಲಿಲ್ಲ. ಅಲ್ಲದೆ ಅಲ್ಪಸ್ವಲ್ಪ ದೂರವಾದರೆ ಗಾಂಧೀಜಿಗೆ ನಡೆವುದೇ ರೂಢಿ. ಆದರೂ ಒಂದು ಗಳಿಗೆ ತಮ್ಮನ್ನು ನೋಡಲೆಂದು ವಯಸ್ಸಾದವರು ಯಾರಾ ದರೂ ಅಷ್ಟು ದೂರ ನಡೆದು ಬಂದರೆ ಅವರಿಗೆ ವ್ಯಥೆಯಾಗುತ್ತಿತ್ತು. ಇಷ್ಟು ದೂರ ಬರಿಗಾಲಲ್ಲಿ ನಡೆದುಬಂದರಲ್ಲಾ ಎಂತ.

೨

ಗಾಂಧೀಜೀಗೆ ಜನರಲ್ಲಿ, ಸಹೋದ್ಯೋಗಿಗಳಲ್ಲಿ ಒಳ್ಳೇ ವಕೀಲ ರೆಂಬ ಹೆಸರಿತ್ತು; ಕೋರ್ಟಿನಲ್ಲೂ ಒಳ್ಳೇ ಗೌರವವಿತ್ತು. ಕೆಲಸ ತುಂಬಾ ಹೆಚ್ಚಾಗಿದ್ದಾಗ ಎಷ್ಟೋಸಾರಿ ಸಂಜೆಗೆ ಮನೆಯಲ್ಲಿ ಗಾಂಧೀಜೀ

ನನ್ನ ಗಂಡ ಇಬ್ಬರೂ ಮೊಕದ್ದಮೆಗಳ ವಿಷಯ ಮಾತನಾಡುತ್ತಿದ್ದರು. ಅರ್ಥವಾಗಲಿ ಬಿಡಲಿ ನಾನೂ ಕೇಳುತ್ತಿದ್ದೆ. ಕೆಲವು ಮೊಕದ್ದಮೆಗಳು ತಮಾಷೆಯಾಗಿರುತ್ತಿದ್ದವು ತಮಾಷೆ ಕಾನೂನು ತೊಡಕಿನದಲ್ಲ; ಅದರ ಬಗ್ಗೆ ಗಾಂಧೀಜೀ ತೋರುತ್ತಿದ್ದ ಮನೋಭಾವದ್ದು. ಈಗ ನಾ ಹೇಳಲಿರುವುದು ಅಂಥದೊಂದು ನಗೆಗತೆ.

ಇದೊಂದು ತೀರಾ ಚಿಲ್ಲರೆ ಮೊಕದ್ದಮೆ. ಯಾರೋ ಒಬ್ಬನ ಮೇಲೆ ಕಳ್ಳತನ ಮಾಡಿದ ಎಂತ ವ್ಯವಹಾರ ಹೂಡಿದ್ದರು. ತನ್ನ ಪರವಾಗಿ ವಾದಿಸುವಂತೆ ಕೇಳಲು ಅವನು ಗಾಂಧೀಜೀ ಹತ್ತಿರ ಬಂದಿದ್ದ. 'ತಪ್ಪಿತಸ್ಥನಲ್ಲ' ಎಂದು ತಪ್ಪಿತಸ್ಥನ ಪರವಾಗಿ ಗಾಂಧೀಜೀ ಎಂದೂ ವಾದಿಸರೆಂಬುದು ಎಲ್ಲರಿಗೂ ಗೊತ್ತಿತ್ತು. ತೀರ ಅನಿವಾರ್ಯವಾದ ಪ್ರಸಂಗ ಬಂತು, ಹಾಗೆ ಮಾಡಿದ ಎಂದು ಹೇಳುತ್ತಿದ್ದರೇ ವಿನಾ ನ್ಯಾಯಾಧಿಪತಿಯ ಇದಿರು ನಿಂತು ಎಂದೂ ಸುಳ್ಳು ಹೇಳುತ್ತಿರಲಿಲ್ಲ. ಎಷ್ಟೋ ಸಲ ಕಕ್ಷಿಗಾರ ತಮಗೆ ಮೋಸಮಾಡಿದನೆಂದು ತಿಳಿದಾಗ ಮೊಕದ್ದಮೆಯನ್ನು ಮಧ್ಯದಲ್ಲೇ ಬಿಟ್ಟು ಬಂದುಬಿಡುತ್ತಿದ್ದರು; ನಂಬಿಕೆಯಾದ ಮೇಲೇ ಮೊಕದ್ದಮೆ ಹಿಡಿಯುತ್ತಿದ್ದರು.

ಅಂತೇ ಆ ಮನುಷ್ಯ ತನ್ನ ಪರವಾಗಿ ವಾದಿಸುವಂತೆ ಗಾಂಧೀಜಿಯನ್ನು ಕೇಳಲು ಬಂದಾಗ ಗಾಂಧೀಜೀ ಸೂಕ್ಷ್ಮವಾಗಿ ಅವನನ್ನು ಪ್ರಶ್ನಿಸಿ ಪರೀಕ್ಷಿಸಿದರು. ಅವನು ಈ ಪ್ರಶ್ನೆಗಳ ಮುಂದೆ ನಿಲ್ಲಲಾರದೆ ತಪ್ಪನ್ನೊಪ್ಪಿಕೊಂಡ.

'ಹಾಗಾದರೆ ಏಕೆ ಮಾಡಿದೆ?' ಗಾಂಧೀಜಿ ಕೇಳಿದರು. 'ಕಳ್ಳತನವೆಂತ ನಿನಗೆ ಗೊತ್ತಿದ್ದೂ ಅದಕ್ಕೆ ಆಗುವ ಶಿಕ್ಷೆಯೂ ಗೊತ್ತಿದ್ದೂ ಹೀಗೇಕೆ ಮಾಡಿದೆ?'

'ಬದುಕಲಿಕ್ಕೆ' ಎಂದ ಆ ಮನುಷ್ಯ, ದೃಢವಾದ ಧ್ವನಿಯಲ್ಲಿ.

'ಬದುಕಲಿಕ್ಕೆ' ಗಾಂಧೀಜೀ ಮೃದುವಾಗಿ ಮಾರ್ನುಡಿದರು. 'ಏಕೆ ಬದುಕಬೇಕು?' ಎಂದು ಕೇಳಿದರು.

ಈ ಘಟನೆ ಕುರಿತು ಎಷ್ಟೋ ಸಲ ಯೋಚಿಸಿದೇನೆ ಗಾಂಧೀಜೀ ಕೇಳಿದ ಆ 'ಏಕೆ' ಎಷ್ಟೋ ಸಲ ಮನಸ್ಸನ್ನು ಕೆಣಕಿದೆ. ಅವರ ಚಿತ್ತಪ್ರವಾಹ ಹೇಗೆ ಹರಿಯುತ್ತಿದೆ ಎಂಬುದಕ್ಕೆ ಈ ಪ್ರಶ್ನೆ ದಿಕ್ಸೂಚಿ· ನೀನೇಕೆ ಬದುಕಬೇಕು ? ನಿನ್ನಿಂದ ಬಾಳಿಗೇನು ಉಪಕಾರ? ಈ ಪ್ರಶ್ನೆ ಸದಾ ಗಾಂಧೀಜಿಯ ಕಣ್ಣೆದಿರು ನಿಂತಿರುತ್ತಿದ್ದವು

ಇನ್ನೊಂದು ಸಲ ಮತ್ತೊಬ್ಬ ಕಕ್ಷಿಗಾರ ಗಾಂಧೀಜಿಯ ಬಳಿ ಬಂದ. 'ನನ್ನನ್ನು ಗುರುತರ ಆಪಾದನೆಗಾಗಿ ದಸ್ತಗಿರಿ ಮಾಡಿದ್ದರು, ಜಾಮೀನಿನ ಮೇಲೆ ಬಿಡುಗಡೆಯಾಗಿ ಬಂದಿದೇನೆ, ಮರುದಿನ ಕೋರ್ಟಿನಲ್ಲಿ ನನ್ನ ಪರವಾಗಿ ವಾದಿಸಿ' ಎಂತ ಕೇಳಲು ಬಂದಿದ್ದ. ಆ ದಿನ ಭಾನುವಾರ; ಗಾಂಧೀಜೀ ಕೆಲಸ ಮಾಡಿಮಾಡಿ ತೀರಾ ಬಳಲಿ ಹೋಗಿದ್ದರು ಇದು ಗೊತ್ತಿದ್ದ ನನ್ನ ಗಂಡ ಭಾನುವಾರದ ದಿನವೂ ಕಕ್ಷಿಗಾರನನ್ನು ಮಾತಾಡಿಸುವುದನ್ನು ನೋಡಿ 'ಈ ದಿನವಾದರೂ ಸ್ವಲ್ಪ ವಿರಾಮ ತೆಗೆದುಕೊಂಡು ಬಳಲಿಕೆ ಆರಿಸಿಕೊಳ್ಳಬಾರದೆ' ಎಂತ ರೇಗಿದ. ಗಾಂಧೀಜೀ ಮೃದುವಾಗಿ ಉತ್ತರ ಕೊಟ್ಟರು. ಮಾತು ಮೃದುವಾದರೂ ಛಾಟಿಯ ಏಟಿತ್ತು ಅದರಲ್ಲಿ.

'ದುಃಖದಿಂದ ನರಳುತ್ತಿರುವವನಿಗೆಲ್ಲಿಯ ಭಾನುವಾರ? ವಿರಾಮ? ಈ ಮನುಷ್ಯ ಅಸುಖಿ ಆತುರನಾಗಿದಾನೆ. ಈಗ ಅವನು ದೋಷಿಯೋ ಆದರೂ ಅವನ ದುಃಖ ಕಂಡು ಅವನನ್ನು ಹೇಗೆ ಹೊರ ಗಟ್ಟಲಿ, ಹೇಳು.

ಮತ್ತೊಂದು ಸಲ ಕಚೇರಿಯ ಹಣಕಾಸಿನ ಲೆಕ್ಕಾಚಾರವನ್ನೆಲ್ಲ ನನ್ನ ಗಂಡನೇ ನೋಡಿಕೊಳ್ಳುತ್ತಿದ್ದ. ಒಂದು ಸಲ ಲೆಕ್ಕ ನೋಡುವಾಗ ಒಬ್ಬ ಕಕ್ಷಿಗಾರನಿಂದ ತುಂಬಾ ಹಣ ಬಾಕಿಯಾಗಿ ನಿಂತದ್ದು ಗೊತ್ತಾಯಿತು. ಎಷ್ಟು ಕಾಗದ ಬರೆದರೂ ಜುಂ ಎಂದಿರಲಿಲ್ಲ ಆಸಾಮಿ; ತಕರಾರು ಕಳ್ಳ! ನನ್ನ ಗಂಡ ರೇಗಿ ಕೂಡಲೇ ಹಣ ಸಂದಾಯ ಮಾಡದೆ ಹೋದರೆ ಕೋರ್ಟಿನಲ್ಲಿ ವ್ಯವಹಾರ ಹೂಡ ಬೇಕಾದೀತು ಎಂದು ಹೆದರಿಸಿ ಕಾಗದ ಬರೆದು, ರುಜು ಹಾಕಲು

ಗಾಂಧೀಜಿಗೆ ಆ ಕಾಗದ ಕಳಿಸಿದರು. ಗಾಂಧೀಜೀ ಕಾಗದಕ್ಕೆ ರುಜು ಹಾಕಲಿಲ್ಲ. ನನ್ನ ಗಂಡನಿಗೇ ಹೇಳಿ ಕಳಿಸಿದರು. ಬಂದಾಗ ಹೇಳಿದರು

'ಕಕ್ಷಿಗಾರನಿಗಾಗಿ ಮಾಡಿದ ಕೆಲಸಕ್ಕೆ ಬರಬೇಕಾದ ಹಣ ವಸೂಲು ಮಾಡಿಕೊಳ್ಳಲು ನಾನೆಂದೂ ಕಚೇರಿಗೆ ಹೋಗುವುದಿಲ್ಲ ನಿನಗೂ ಗೊತ್ತಿದೆ ತಾನೆ ಇದು? ಹೆದರಿಸಿದ ಮಾತ್ರಕ್ಕೇ ಯಾರಾದರೂ ಪ್ರಾಮಾಣಿಕರಾಗುತ್ತಾರೆಯೆ? ಮನಸ್ಸೊಪ್ಪಿ ಕಕ್ಷಿಗಾರ ದುಡ್ಡು ಕೊಡದಿದ್ದರೆ ಮೊದಲೇ ದುಡ್ಡು ತೆಗೆದುಕೊಂಡು ಕೆಲಸ ಮಾಡದುದು ನನ್ನ ತಪ್ಪು, ಅದಕ್ಕಾಗಿ ಈ ನಷ್ಟ ಅನುಭವಿಸಬೇಕು' ಎಂದರು.

ಇನ್ನೊಂದು ರಸವತ್ತಾದ ವಿಷಯ ನ್ಯಾಯಾಲಯಕ್ಕೆ ಸಂಬಂಧಿಸಿದ್ದೇ. ಡಾ|| ಎಫ್ ಇ. ಟಿ. ಕ್ರಾಸ್ ಈಗ ದಕ್ಷಿಣ ಆಫ್ರಿಕದ ಶ್ರೇಷ್ಠ ನ್ಯಾಯಾಧೀಶರು. ಆಗ ದಕ್ಷಿಣ ಆಫ್ರಿಕದಲ್ಲೆಲ್ಲಾ ತುಂಬಾ ಹೆಸರುವಾಸಿಯಾದ ನ್ಯಾಯವಾದಿ. ಒಂದು ಸಲ ಬ್ರಿಟಿಷ್ ಸರಕಾರ ಈತನ ಮೇಲೆ ಉರಿಗಣ್ಣು ತಿರುಗಿಸಿತು ಬೋಯರ್ ಯುದ್ಧದ ಕಾಲದಲ್ಲಿ ರಾಜದ್ರೋಹದ ಅಪಾದನೆಯ ಮೇಲೆ ಈತನನ್ನು ಬಂಧಿಸಿದ್ದರು. ಈತನ ವಕೀಲಿ ಸನದೂ ಹೋಯಿತು. ಮತ್ತೆ ಟ್ರಾನ್ಸ್‌ವಾಲ್‌ನಲ್ಲಿ ಶಾಂತಿಸ್ಥಾಪನೆಯಾದಾಗ ತನ್ನ ವಕೀಲಿ ಸನದು ಕೊಡಬೇಕೆಂದು ಈತ ಕೇಳಿಕೊಂಡ ಸನದೂ ಬಂತು. ಯುದ್ಧಕ್ಕೆ ಮುಂಚೆ ಈತ ಜೋಹಾನೆಸ್‌ಬರ್ಗಿನಲ್ಲಿ ಪಬ್ಲಿಕ್ ಪ್ರಾಸಿಕ್ಯೂಟರ್ ಆಗಿದ್ದಾಗ ಗಾಂಧೀಜಿಗೆ ಪರಿಚಯವಿತ್ತು. ಗಾಂಧೀಜಿಗೆ ಎಷ್ಟೋ ಉಪಕಾರ ಮಾಡಿದ್ದ ಕ್ರಾಸ್‌ಗೆ ವಕೀಲಿ ಸನದು ಬಂದ ದಿನ ಗಾಂಧೀಜೀ ಯಾವುದೋ ಕೆಲಸದ ಮೇಲೆ ಕೋರ್ಟಿನಲ್ಲಿದ್ದರು ಆ ಸುದ್ದಿ ಗೊತ್ತಾದೊಡನೆಯೆ ಕ್ರಾಸನ್ನು ಅಭಿನಂದಿಸಿದವರಲ್ಲಿ ಗಾಂಧೀಜಿಯೇ ಮೊದಲು ಗಾಂಧೀಜೀ ಎಷ್ಟೋ ಸಂತೋಷದಿಂದ ಆತ ತನ್ನ ಲಾಯರಿ ಉಡುಪು ಹಾಕಿಕೊಳ್ಳಲು ಕೂಡಾ ಸಹಾಯ ಮಾಡಿದರು ಈಗ ಗಾಂಧೀಜಿಗೆ ಇಂಗ್ಲಿಷ್ ನ್ಯಾಯವಾದಿಗಳ ಗುಂಪಿ

ನಿಂದ ಬಹಿಷ್ಕಾರವಾಗಿದೆ ಗಾಂಧೀಜಿಗೆ ಮತ್ತೆ ಬ್ಯಾರಿಸ್ಟರ್ ಉಡುಪು ಉಡಿಸುವ ಆನಂದ ಕ್ರಾಸ್‌ಗೆ ಎಂದೂ ಬರಲಾರದು. ಭಾರತದ ಈ ನಾಯಕನ್ನ ಈಗ ತಾನು ಲಾಯರೆನ್ನುವುದಿಲ್ಲ; ರೈತ, ನೂಲುಕಾರ ಎಂದು ಹೇಳುತ್ತಾನೆ. ಎಷ್ಟೋ ಸಲ ಶಾಸನದ ಅಂತಿಮ ಆಶ್ರಯ ದೈಹಿಕ ಹಿಂಸೆ ಎಂದು ಹೇಳುತ್ತಿದ್ದರು. ವಕೀಲಿ ಬಿಟ್ಟು ಎಷ್ಟೋ ವರ್ಷವಾಯಿತು ; ಚಿರತ್ಯಾಗ ಅದು.

○ ○ ○

ಹಣ್ಣು, ತರಕಾರಿ, ಬೇಳೆಯಿಂದ ನಾಲಿಗೆಯಲ್ಲಿ ನೀರೂರಿಸುವ ಹೊಸ ಹೊಸ ತಿಂಡಿ ಸೃಷ್ಟಿಸುವ ಆಶೆಯಿಂದ ಎಷ್ಟೋ ಪಾಕಪ್ರಯೋಗ ಮಾಡುತ್ತಿದ್ದೆ. ಎಷ್ಟೋ ಸಲ ನನ್ನ ಪ್ರಯೋಗ ಕುಲಗೆಟ್ಟು ಹೋಗಿದೆ ಎಂದು ನನಗೇ ಗೊತ್ತಾಗುತ್ತಿತ್ತು. ನಾನೇನೇ ಮಾಡಿದರೂ ನನ್ನ ಗಂಡ ಧೀರತನದಿಂದ ತಿಂದುಬಿಡುತ್ತಿದ್ದರು. ಅಷ್ಟೇ ಅಲ್ಲ; ಸಾಧಾರಣವಾಗಿ ಚೆನ್ನಾಗಿದೆ ಎಂತ ಹೊಗಳುತ್ತಿದ್ದರು ಊಟ ಮಾಡುವಾಗ ಅವರೂ ಜೊತೆಯಲ್ಲಿ ಕೂತವರೂ ಮಾತಿನಲ್ಲೇ ಮಗ್ನರಾಗಿರುತ್ತಿದ್ದುದರಿಂದ ತಾವೇನು ತಿಂದೆವೆಂಬುದೇ ಅವರಿಗೆ ಗೊತ್ತಾಗುತ್ತಿರಲಿಲ್ಲ. ಎಷ್ಟೋ ಸಲ ಇದೇ ಒಳ್ಳೆಯದಾಗುತ್ತಿತ್ತು!

ಆ ಕಾಲಕ್ಕೆ ನಾವು ಆಹಾರಶಾಸ್ತ್ರದಲ್ಲಿ ಎಷ್ಟೋ ಪ್ರಯೋಗ ಮಾಡಿ ನೋಡಿದೆವು ಎಷ್ಟೋ ದಿನ ಅಡಿಗೆಗೆ ಉಪ್ಪೇ ಇರಲಿಲ್ಲ; ಮಸಾಲೆಯಂತೂ ಇರಲೇ ಇಲ್ಲ ಶುದ್ಧ ಪಥ್ಯದ ಊಟ! ನನಗೇನೋ ಈ ಊಟ ಸ್ವಲ್ಪವೂ ರುಚಿಸುತ್ತಿರಲಿಲ್ಲ. ಆದರೂ ಹಾಗೇ ಊಟ ಮಾಡುತ್ತಿದ್ದೆ. ಕೆಲವು ದಿನ ಸಕ್ಕರೆ ಬಿಟ್ಟದ್ದೆವು. ಸಿಹಿ ಬೇಕಾದಾಗ ನಾನು ಖರ್ಜೂರ, ದೀಪದ್ರಾಕ್ಷಿ, ಕಂರ್‍ರಾಂಟ್ಸ್ ತಿನ್ನುತ್ತಿದ್ದೆ. ಇನ್ನಷ್ಟು ದಿನ ಬೇಯದ ಸುಡದ ಆಹಾರ, ಜೊತೆಗೆ ಆಲಿವ್ ಎಣ್ಣೆ ಉಂಡದ್ದಾಯಿತು ನಾನೂ ಈ ಪ್ರಯೋಗಭೋಜನ ಮಾಡಬೇಕೆಂಬ ನಿಯಮವೇನು ಇರಲಿಲ್ಲ; ನಾನದನ್ನು ಪಾಲಿಸುತ್ತಲೂ ಇರಲಿಲ್ಲ. ಆದರೆ ನನ್ನಗಂಡ, ಗಾಂಧೀಜೀ ಇಬ್ಬರೂ ವಾರಗಟ್ಟಲೆ ತಿಂಗಳುಗಟ್ಟಲೆ

ರುಚಿಯಾಗಿದೆ ಎನ್ನುತ್ತ ಉಣ್ಣುತ್ತಿದ್ದರು. ಏನು ರುಚಿಯೋ ದೇವರಿಗೇ ಗೊತ್ತು! ಯಾವ ಯಾವ ಆಹಾರಪದಾರ್ಥದ ಯೋಗ್ಯತೆ ಎಷ್ಟು, ದೇಹದ ಮೇಲೆ ಅವುಗಳ ಪರಿಣಾಮ ಹೇಗೆ, ಅದರ ನೈತಿಕ ಪ್ರಭಾವ ಎಂಥದು ಎಲ್ಲದರ ಪರೀಕ್ಷೆಯಾಗುತ್ತಿತ್ತು, ಬೇಕಾದಷ್ಟು ಚರ್ಚೆಯಾಗುತ್ತಿತ್ತು. ಹೆಚ್ಚಿದ ಸ್ಪಾನಿಷ್ ಈರುಳ್ಳಿ ರಕ್ತಶುದ್ಧಿ ಮಾಡುತ್ತದೆ ಎಂತ ಕೆಲವು ದಿನ ಊಟದ ಜೊತೆಗೆ ತಪ್ಪದೆ ತಿನ್ನುತ್ತಿದ್ದೆವು. ಗಾಂಧೀಜಿಗೆ ಈರುಳ್ಳಿಚಟ್ನಿ ಎಂದರೆ ತುಂಬಾ ಪ್ರೀತಿ. ನಾನಲ್ಲಿಗೆ ಬರುವ ಮುಂಚೆ ಗಾಂಧೀಜೀ, ಅವರ ನಾಲ್ಕಾರು ಜನ ಗೆಳೆಯರು ಜೊಹಾನೆಸ್‌ಬರ್ಗಿನ ಸಸ್ಯಾಹಾರಿಗಳ ಹೋಟೆಲಿಗೆ ತಪ್ಪದೆ ಈ ಈರುಳ್ಳಿ ಚಟ್ನಿಗಾಗಿ ಹೋಗುತ್ತಿದ್ದರಂತೆ; ಈರುಳ್ಳಿ ತಿನ್ನುವವರ ಸಂಘ' ಒಂದು ಮಾಡಿಕೊಂಡಿದ್ದರಂತೆ; ಗಾಂಧೀಜೀ ಹಾಗೆಂತ ಹೇಳಿದರು! ಕಡೆಗೆ ಈರುಳ್ಳಿ ರಾಗೋದ್ರೇಕ ಉಂಟುಮಾಡುವ ವಸ್ತು ಎಂತ ಬಿಟ್ಟರು. ಹಾಲೂ ರಾಗಕ್ಕೆ ಉತ್ತೇಜಕ ಎಂದು ಬಿಟ್ಟುಬಿಟ್ಟರು. ಹಸೀ ಈರುಳ್ಳಿ ತಪ್ಪಿದ್ದಕ್ಕೆ ನನಗೇನೂ ದುಃಖವಾಗಲಿಲ್ಲವಾಗಲಿ ಹಾಲನ್ನು ಬಿಡಬೇಕೆಂದರೆ ಏಕೆ ಬಿಡಬೇಕು ಎಂತ ಕೇಳಿಬಿಟ್ಟೆ.

'ಹಾಲು ರಾಗೋತ್ತೇಜಕ ಆಹಾರವಾದರೆ ಹಸುಳೆಗಳಿಗೆ, ಹುಡುಗರಿಗೆ ಒಳ್ಳೆ ಆಹಾರವೆಂತ ಹೇಳುತ್ತಾರೇಕೆ' ಎಂತ ಕೇಳಿದೆ.

'ತಾಯಹಾಲು ಮಕ್ಕಳಿಗೆ ಸರಿಯಾದ ಆಹಾರ, ಬೆಳೆದವರಿಗಲ್ಲ' ಎಂದರು ಗಾಂಧೀಜೀ.

'ಅದಿರಬಹುದು, ಮಕ್ಕಳ ಆಹಾರವಾದ್ದರಿಂದ ಹಾಲು ದೊಡ್ಡವರಿಗೆ ಆಹಾರವಲ್ಲದೆ ಇರಬಹುದು, ಒಪ್ಪಿದೆ. ಹಾಗೆಂತ ಅದು ರಾಗೋತ್ತೇಜಕ ಎಂಬುದನ್ನು ಒಪ್ಪಲಾರೆ. ಅದು ನಿಜ ಎಂದರೆ ಹಸುಗೂಸು ತೀರಾ ಪಶುವೇ ಆಗಬೇಕಾಯಿತಲ್ಲ. ಹಾಲುಕುಡಿದು, ಕಾಮೋದ್ರೇಕ ಪೀಡಿತವಾದ ಹಸುಮಗು ಎಲ್ಲಾದರೂ ಉಂಟೆ? ಶುದ್ಧ ಅಸಂಬದ್ಧ' ಎಂದು ನಾನು ವಾದಿಸಿದೆ

ಏನೇ ಆಗಲಿ. ಅಂತೂ ಅಂದಿನಿಂದ ಗಾಂಧೀಜಿಯ ನಿತ್ಯದ ಊಟದಲ್ಲಿ ಹಾಲು ತಪ್ಪಿ ಹೋಯಿತು. ಮುಂದೆ ಅವರು ಹಸುವಿನ ಹಾಲನ್ನು ಮುಟ್ಟುವುದೂ ಇಲ್ಲವೆಂದು ಪ್ರತಿಜ್ಞೆ ಮಾಡಿದರು. ಎಷ್ಟೋ ವರ್ಷ ಕಳೆದುಹೋದರೂ ಈ ಪ್ರತಿಜ್ಞೆಗೆ ಭಂಗಬಂದಿಲ್ಲ. ಮುಂದೇನೊ ಕಸ್ತೂರಿಬಾ ತೃಪ್ತಿಗಾಗಿ ಆಡಿನ ಹಾಲು ಕುಡಿಯುತ್ತಿದಾರಾಗಲಿ, ಹಸುವಿನ ಹಾಲು ಮುಟ್ಟೆನೆಂಬ ಪ್ರತಿಜ್ಞೆಗೆ ಮಾತ್ರ ಚಾಚೂ ತಪ್ಪಿಲ್ಲ.

'ಒಳ್ಳೆ ಬಕಾಸುರನ ಹಾಗೆ ತಿಂಡಿಯ ವಿಚಾರ ಮಾತಾಡುತ್ತೀವಲ್ಲವೆ ನಾವು ಯಾವಾಗಲೂ ಯಾವುದನ್ನು ತಿನ್ನಬೇಕು ಯಾವುದನ್ನು ತಿನ್ನಬಾರದು, ಇದೇ ಮಾತಾಗಿ ಹೋಗಿದೆ ನಮಗೆ. ನನಗೊಂದೊಂದು ಸಲ ಅನಿಸುತ್ತದೆ, ಏನೂ ಮಾತಾಡದೆ ಸಿಕ್ಕಿದ್ದು ತಿಂದುಬಿಡಬೇಕು' ನಾನೊಂದು ಸಲ ಹೇಳಿದೆ.

'ಮಾಂಸಕೂಡಾ' ಎಂದರು ರೇಗಿಸುವ ಧ್ವನಿಯಲ್ಲಿ ಗಾಂಧೀಜೀ. ನಾನದಕ್ಕೆ ಉತ್ತರ ಕೊಟ್ಟೆ 'ಮನುಷ್ಯನಿಗೆ ಮಣೆ ಹಾಕುವುದು ಬಾಯಿಂದ ಏನುಬರುತ್ತದೆ ಎನ್ನುವುದನ್ನು ನೋಡಿ; ಬಾಯಿಗೆ ಏನು ಹಾಕುತ್ತಾನೆ ಎನ್ನುವುದಕ್ಕಲ್ಲ?

ಇನ್ನೊಂದು ವಾಗ್ವಾದದ ವಿಷಯ ಗಾಂಧೀಜಿಯ, ಕಷ್ಟ ಪಕ್ಷಪಾತ ಪ್ರತಿಕೂಲ ಪ್ರೇಮ.

"ಯಾವ ಕೆಲಸ ಮಾಡಬೇಕಾದರೂ ತೀರಾ ಅನನುಕೂಲವಾದ ದಾರಿಯನ್ನೇ ಆರಿಸುತ್ತೀರೇಕೆ ನೀವು?" ನಾನೊಂದು ಸಲ ಕೇಳಿದೆ.

"ಅದು ನನಗೆ ಅನನುಕೂಲವಲ್ಲ. ಆದಿರಲಿ, ಇದರಲ್ಲಿ ನಿನ್ನ ತಕರಾರೇನು?"

'ನೀವು ಮಾಡುವ ಎಷ್ಟೋ ಕೆಲಸದಲ್ಲಿ ನಿಮಗೆ ತುಂಬಾ ಕಷ್ಟವಾಗುತ್ತಿರಬೇಕು. ಅದನ್ನು ಮಾಡಲೇಬೇಕೆಂಬ ಅಗತ್ಯವೇನೂ ಇಲ್ಲ ನಿಮಗೆ. ಯಾವುದೋ ವಿಚಿತ್ರ ತತ್ವದ ದೃಷ್ಟಿಯಿಂದ ಮಾಡು

ತ್ತೀರಿ. ಮೃದುವಾದ ಹೂಹಾಸಿದ ಹಾದಿ ಬಿಟ್ಟು ಕಲ್ಲು ಮುಳ್ಳು ತುಂಬಿದ ದಾರಿಯನ್ನೇ ಏಕೆ ಆರಿಸುತ್ತೀರಿ?

'ಸುಲಭವಾದ ಸುಖದ ಹಾದಿ ದೇವರ ಬಳಿಗೊಯ್ಯದು. ಮೈ ಸುಖಭೋಗ ಬಯಸಿದಾಗ ಅದನ್ನದಕ್ಕೆ ಕೊಡಬಾರದು."

ದೇವರು ಯಾವಾಗಲೂ ದೇಹವನ್ನು ಛಾಟಿಯಿಂದ ಹೊಡೆದುಕೋ ಎಂದು ಹೇಳುತ್ತಾನೆಯೆ?''

'ಹಾಗೆಂತ ಆತನನ್ನು ಮರೆತುಬಿಡಬೇಕೆಂತಲೂ ಆತನ ಇಚ್ಛೆಯಲ್ಲ.'

'ಆ ಮಾತು ನಾನೂ ಒಪ್ಪುತ್ತೇನೆ. ಹೂವನ್ನು ಮರೆತು ಬೆಣಚುಕಲ್ಲಿನ ಮೇಲೆ ನಡೆದು ಕಾಲು ಕತ್ತರಿಸಿಕೊಳ್ಳಬೇಕೆಂಬುದು ಆತನ ಇಚ್ಛೆಯೆಂತ ನಾ ನಂಬಲಾರೆ!

'ದೇವರ ಸೇವೆಗೆ ಮುಂಚೆ ನಮ್ಮ ಸುಖದ ಸೇವೆ ಎನ್ನುತ್ತೇವೆ ಅದೇ ಅಪಾಯ.'

"ಆತನ ಜಗತ್ತಿನ ಸೌಂದರ್ಯವನ್ನು ಮೆಚ್ಚಿದ ಮಾತ್ರಕ್ಕೆ ಆತನೇ ಇಲ್ಲವೆನ್ನುತ್ತೇವೆಯೆ ನಾವು? ಕಲ್ಲು ಮಾತ್ರ ಆತನ ಪ್ರೀತಿಯ ಸೃಷ್ಟಿ; ಅಲ್ಲವೇನು?' ಒತ್ತಿ ಕೇಳಿದೆ.

'ಸುಖ, ಸೋಮಾರಿತನಗಳ ಚಪಲ ನಮ್ಮಲ್ಲಿ ಯಾವಾಗಲೂ ಇದೆ. ಅದಕ್ಕೆ ಸಿಗದಹಾಗೆ ಹುಷಾರಾಗಿರಬೇಕು.'

ಗಾಂಧೀಜೀ ಇಂಥ ಚಿತ್ತವೃತ್ತಿಯಲ್ಲಿದ್ದಾಗ ಅವರೊಡನೆ ವಾದಿಸುವುದು ಉಪಯೋಗವಿಲ್ಲದ ಕೆಲಸ. ಅವರ ಒಲವು ವೈರಾಗ್ಯದತ್ತ; ರಸ ರಾಮಣೀಯಕತೆಯ ಕಡೆಗಲ್ಲ. ಸರಳವಾದ ಕಷ್ಟಜೀವನದ ಪ್ರೀತಿ, ಅಭ್ಯಾಸ ಮುಂದೆ ಗಾಂಧೀಜೀ ಸೆರೆಮನೆಯ ಅನಾನುಕೂಲ ಕಷ್ಟಗಳನ್ನು ಅನುಭವಿಸುವಾಗ ತುಂಬಾ ಸಹಾಯ ಮಾಡಿತು. ಅದಕ್ಕೇ ಗಾಂಧೀಜೀ ತಮ್ಮ ಅನುಯಾಯಿಗಳಿಗೆ ಹೋರಾಟದ ಕಾಲ

ದಲ್ಲಿ ಬರುವ ಕಷ್ಟ ಸಹಿಸಲು ಅನುಕೂಲವಾಗುವಂತೆ ಶಾಂತಿಕಾಲ ದಲ್ಲೂ ಕಷ್ಟ ಜೀವನ ನಡೆಸಿರೆಂದು ಹೇಳುತ್ತಿದ್ದರು.

೦ ೦ ೦ ೦

೧೯೦೬ ರಲ್ಲಿ ಗಾಂಧೀಜೀ ಇಂಗ್ಲೆಂಡಿಗೆ ಅವಸರವಸರವಾಗಿ ಹೋಗಿ ಒಂದೆರಡು ದಿನ ಇದ್ದು ಬಂದರು. ಹಿಂದಿರುಗಿ ಬಂದು ಸಾಮಾನು ಬಿಚ್ಚುವಾಗ ನನ್ನ ಕೈಗೊಂದು ಪೊಟ್ಟಣ ಕೊಟ್ಟು "ತಗೋ ಉಡುಗೊರೆ' ಎಂದರು.

ನಾನೂ ಆಶ್ಚರ್ಯಪಡುತ್ತಾ ಪೊಟ್ಟಣ ಬಿಚ್ಚಿದೆ. ಗಾಂಧೀಜಿಯ ಸ್ವಭಾವವೇನೋ ಉದಾರವಾಗಲಿ, ಈ ರೀತಿ ಉಡುಗೊರೆ ಕೊಡುವುದು ಅವರ ಗುಣವಲ್ಲ. ಅದಕ್ಕೇ ನನಗಾಶ್ಚರ್ಯವಾದ್ದು. ಇದೇನು ಎಂದೆ. 'ತೆಗೆದು ನೋಡು ಗೊತ್ತಾಗುತ್ತೆ' ಎಂದರು.

ನನ್ನ ಗಂಡನೂ ಅಲ್ಲೇ ಇದ್ದ. ನಾನು ಪೊಟ್ಟಣ ಬಿಚ್ಚುತ್ತಿರುವಾಗ ಆತನೂ ಏನೋ ಎಂತ ಬಗ್ಗಿ ನೋಡಿದ. ನಾನು ಆತುರಾತುರವಾಗಿ ಬಿಚ್ಚಿನೋಡಿದೆ. ಅದರಲ್ಲಿದ್ದದು ಒಂದು ದೊಡ್ಡ ಸೀಸೆ-ಕೇಶವರ್ಧಿನಿ! ಸೀಸೆಯ ಕಡೆಗೊಂದು ಸಲ, ಗಾಂಧೀಜಿಯ ಕಡೆ ಒಂದು ಸಲ ಏನೂ ತೋಚದೆ ನೋಡಿದೆ.

'ಅದಕ್ಕೆ ಎರಡು ಪೌಂಡು ಕೊಟ್ಟೆ' ಎಂದರು ಗಾಂಧೀಜೀ ವಿಷಣ್ಣ ಸ್ವರದಲ್ಲಿ.

'ಎರಡು ಪೌಂಡು'! ಏನೂ ತಿಳಿಯದೆ ನಾ ಕೇಳಿದೆ. 'ಇದೇಕೆ ಕೊಂಡು ತಂದಿರಿ?

'ಕೊಂಡುಕೊಳ್ಳಬೇಕೂಂತ ನನಗೇನೂ ಆಸೆಯಿರಲಿಲ್ಲ' ಎಂದರು ಗಾಂಧೀಜೀ ರೋದನ ಧ್ವನಿಯಲ್ಲಿ.

ನನಗೇನೂ ಅರ್ಥವಾಗಿಲ್ಲ. ಹಾಗಾದರಿದನ್ನೇಕೆ ಕೊಂಡುಕೊಂಡಿರಿ? ನನಗೇ ಎಂತಲೇನೂ ಇದನ್ನು ಕೊಂಡುತರಲಿಲ್ಲ ತಾನೆ'?

'ನಾನು ಮುತ್ತಾಳ. ಹಜಾಮರ ಅಂಗಡಿಗೆ ಹೋಗಿದ್ದೆ. ಏನೋ ಅವಸರದಲ್ಲಿ ಏನೋ ಯೋಚನೆಯಲ್ಲಿದ್ದೆ. ಕ್ಷೌರದವನು ಕೂದಲಿಗೇನೋ ಒಂದು ತೈಲಬೇಕು ಎಂದ. ಅವನೇನು ಹೇಳಿದನೋ ನನಗಂತೂ ಗಮನವಿರಲಿಲ್ಲ, ಆಮೇಲೆ ಅವನು ಅದನ್ನೇ ಒತ್ತಾಯ ಮಾಡಿ ನಿಮ್ಮ ಕೋಣೆಗೆ ಒಂದು ಸೀಸೆ ತೈಲ ಕಳಿಸುತ್ತೇನೆ ಎಂದ. ನಾನೂ ಹೂ ಎಂದುಬಿಟ್ಟೆ. ನಾಲ್ಕೈದು ದಿನವಾದ ಮೇಲೆ ಇಲ್ಲಿಗೆ ಬರುವಾಗ ಎರಡು ಪೌಂಡು ಬೆಲೆಹೇಳಿ ಕೊಟ್ಟ, ಈ ಹಾಳು ಸಾಮಾನನ್ನು. ಅದೇಕೆ ಕೊಟ್ಟನೋ ನಾನು ಪೊಟ್ಟಣ ಬಿಚ್ಚಿ ಕೂಡಾ ನೋಡಲಿಲ್ಲ. ನನಗಂತೂ ಇದು ಬೇಕಾಗಿರಲಿಲ್ಲ. ನಿನಗೇನಾದರೂ ಬೇಕಾದೀತೇನೋ ಎಂದು ತಂದೆ' ಎಂದರು ಗಾಂಧೀಜೀ.

'ಬಹಳ ಸಂತೋಷ' ಎಂದೆ. ಒಂದುಗಳಿಗೆ ಬಿಟ್ಟುಕೊಂಡು ಮೂರೂ ಜನ ಗಟ್ಟಿಯಾಗಿ ನಕ್ಕುಬಿಟ್ಟೆವು. ಅಂದಿನಿಂದ ಈ ಎರಡು ಪೌಂಡಿನ ಕೇಶವರ್ಧಿನಿ ನಿತ್ಯ ವಿನೋದವಾಗಿ ಬಿಟ್ಟಿತು. ಕಡೆಗಾತೈಲ ಚರಂಡಿ ಕಂಡಿತು. ಹಚ್ಚಿಕೊಂಡಿದ್ದರೆ ಕೂದಲೇ ಉದುರಿ ಹೋಗುತ್ತಿತ್ತೋ ಏನೋ!

೮

ಬಿರುಗಾಳಿಯಂತೆ ಮುಸೆಯುತ್ತಿದ್ದ ಭಾರತೀಯ ಸಮಸ್ಯೆ ಒಂದೆರಡು ದಿನದಮಟ್ಟಿಗೆ ಸ್ವಲ್ಪ ಸ್ತಬ್ಧವಾಗಿದ್ದಾಗ ನನ್ನ ಮೊದಲ ಮಗು ಹುಟ್ಟಿತು ಗಾಂಧೀಜೀಗಂತೂ ಹಿಡಿಸಲಾರದಷ್ಟು ಸಂತೋಷ. ಸ್ನೇಹದ ಹೊಸರೀತಿಯ ತಳುಕು ಆಯಿತು ಈ ಮಗು. ಇದರ ಬಾಳಿನ ತೀರ ಸಣ್ಣ ವಿಷಯದಲ್ಲೂ ಗಾಂಧೀಜಿಗೆ ಎಷ್ಟೋ ಆಸಕ್ತಿ, ಕುತೂಹಲ. ಹುಟ್ಟಿದಾಗಿನ ತೂಕ, ಅದಕ್ಕೆ ಹಾಲು ಕೊಡುವುದು, ಅದರ ಬೆಳವಣಿಗೆ, ಅದು ಬುದ್ಧಿಯ ಮೊದಲ ಕುರುಹು ತೋರಿದ್ದು, ತೋರಿಕೆಯ ಹಟಮಾರಿತನ, ಅದರ - ದೈಹಿಕ - ಆಗತಾನೆ ರೂಪುಗೊಳ್ಳುತ್ತಿದ್ದ ಮಾನಸಿಕ ಜೀವನದ ಒಂದೊಂದು ಹೆಜ್ಜೆಯೂ ಗಾಂಧೀಜಿಗೆ ತುಂಬಾ ಸಂತೋಷ ಕೊಡುತ್ತಿದ್ದವು; ನನಗೆ, ನನ್ನ ಗಂಡನಿಗೆ ಆಗುತ್ತಿದ್ದಷ್ಟು ಸಂತೋಷವೇ ಆಗುತ್ತಿತ್ತು.

ನಮ್ಮಲ್ಲಿ ಯಾರೂ ಹಸುಗೂಸನ್ನು ನೋಡಿಕೊಳ್ಳುವಷ್ಟು, ಸರಿಯಾಗಿ ಬೆಳೆಸುವಷ್ಟು ಬುದ್ಧಿವಂತರಾಗಿರಲಿಲ್ಲವೆಂದು ಈಗ ನನಗೆ ಅನಿಸುತ್ತಿದೆ. ಮನೆಯಲ್ಲಿ ದಾದಿ ಇರಲಿಲ್ಲ. ತಾಯಿ ಮಗುವನು ಹೇಗೆ ಬೆಳೆಸಬೇಕೋ ನನಗಷ್ಟು ಗೊತ್ತಿರಲಿಲ್ಲ. ಊರಿಗೆ ತುಂಬಾ ದೂರವಾಗಿದ್ದುದರಿಂದ, ಸಲಹೆ ಬುದ್ಧಿವಾದ ಹೇಳಬಲ್ಲ ನನಗಿಂತ ದೊಡ್ಡವರಾದ, ಅನುಭವಸ್ಥರಾದ ಹೆಂಗಸರು ಯಾರೂ ಮನೆಯ ಕಡೆ ಬರುತ್ತಿರಲಿಲ್ಲ. ಮಗುವಿಗೆ ಯಾವುದು ಒಳ್ಳೆಯದೋ ಸೂಕ್ತವೋ ಅದನ್ನು ಮಾಡಲು ಯಾರ ಬುದ್ಧಿವಾದವೂ ಬೇಡ; ತಾಯ ಪ್ರೇಮವೇ ಕಲಿಸುತ್ತದೆ ಎಂತ ಗಾಂಧೀಜೀ ನಂಬಿದ್ದರು. ಇದರ ಬಗ್ಗೆ ಬೇಕಾದಷ್ಟು ಚರ್ಚೆಯಾಗುತ್ತಿತ್ತು.

ಈಗಿನ ಕಾಲದಲ್ಲಾದರೆ ನುರಿತ ದಾದಿಯರು ಹುಟ್ಟಿದ ದಿನದಿಂದಲೇ ಮಗು ಮುಂದೆ ಹೇಗೆ ದೊಡ್ಡವನಾಗಬೇಕೆಂದು ಯೋಚಿಸಿ ಅದಕ್ಕೆ ಸರಿಯಾಗಿ ಬೆಳೆಸುತ್ತಾರೆ. ಆದರೆ ನನಗೆ ಸಿಕ್ಕಿದ ದಾದಿಗೆ ಇದೇನೂ ಗೊತ್ತಿರಲಿಲ್ಲ. ಮಗುವಿಗೂ ಒಳ್ಳೆಗುಣದ ತಳಹದಿ ಹಾಕಲಿಲ್ಲ; ನನಗೂ ಹೇಗೆ ಬೆಳೆಸಬೇಕೆಂದು ಹೇಳಿಕೊಡಲಿಲ್ಲ. ಮಗುವೂ ಇತರ ಮಕ್ಕಳ ಹಾಗಿರಲಿಲ್ಲ; ಹೊತ್ತುಗೊತ್ತಿಗೆ ಸರಿಯಾಗಿ ಮಲಗುತ್ತಿರಲಿಲ್ಲ. ಅದರಲ್ಲೂ ರಾತ್ರಿಯ ಹೊತ್ತಂತೂ ಕಣ್ಣೇ ಮುಚ್ಚುತ್ತಿರಲಿಲ್ಲ. ಮಗುವಿಗೆ ಮಲಗಲು ಇಷ್ಟವಿಲ್ಲದಿರುವಾಗ ಸುಮ್ಮನೆ ಮಲಗಲು ಒತ್ತಾಯ ಮಾಡಬಾರದೆಂಬುದು ಗಾಂಧೀಜೀ ಅಭಿಪ್ರಾಯ 'ನಿನ್ನ ಹೊತ್ತಿಗೆ ಮಗು ಹೊಂದಿಕೊಳ್ಳದಿದ್ದರೆ ಮಗುವಿನ ಹೊತ್ತಿಗೆ ನೀನು ಹೊಂದಿಕೊಳ್ಳಬೇಕು. ರಾತ್ರಿಯೋ ಹಗಲೋ ಅದು ಯಾವಾಗ ಮಲಗಿಕೊಂಡರೆ ಆಗಲೇ ನೀನೂ ಮಲಗು. ಹೊತ್ತುಗೊತ್ತು ಏನೂ ಯೋಚಿಸಬೇಡ' ಎಂದರು.

ಈ ಬುದ್ಧಿವಾದ ಒಳ್ಳೆಯದೆಂದು ನನಗೇನೂ ಅನಿಸಿಲ್ಲ. ಆದರೂ ಅವರು ಹೇಳಿದ ಹಾಗೆ ಮಾಡಿದೆ. ಅದರಿಂದ ಉಪಯೋಗ ಏನೂ ಆಗಲಿಲ್ಲ. ಇದೆಲ್ಲ ಕಷ್ಟದ ಜೊತೆಗೆ ಕೆಲಸದ ಹುಡುಗಿ

ಊರಿಗೆ ದೂರವಾಗಿ ಒಂಟಿಯಾಗಿರಲಾರದೆ, ನನ್ನ ಪಾಡಿಗೆ ನನ್ನನ್ನು ಬಿಟ್ಟು ಕೆಲಸಬಿಟ್ಟು ಹೊರಟು ಹೋದಳು.

ಮತ್ತೊಬ್ಬ ಹುಡುಗಿಯನ್ನು ನೇಮಿಸಿಕೊಂಡುದಾಯಿತು. ಅವಳ ವಿಷಯದಲ್ಲಿ ಮತ್ತೊಂದು ಪ್ರಯೋಗಮಾಡಿ ನೋಡಿದೆವು. ಕೃತಕವರ್ಗಭೇದದಲ್ಲಿ ನಮಗೆ ವಿಶ್ವಾಸವಿಲ್ಲ, ಎಲ್ಲ ಜೀವಗಳೂ ಸಮಾನ ಎನ್ನುತ್ತಿದ್ದೆವಲ್ಲ, ಅದನ್ನು ಆಚರಣೆಗೆ ತರಲು ಯತ್ನಿಸಿದೆವು. ಈ ಹುಡುಗಿ ದೇಶೀ ಬಿಳಿಯರ ಮಿಶ್ರಸಂತಾನ. ಇವಳ ಕೈಲಿ ನಾನು ನಯವಾಗಿ ಮಾತಾಡಬೇಕು, ನಮ್ಮ ಜೊತೆಯಲ್ಲೇ ಊಟಕ್ಕೆ ಕೂಡಿಸಿಕೊಳ್ಳಬೇಕು ಎಂದು ಯೋಚಿಸಿದೆವು. ಎರಡು ಸಲ ಹೆದರಿಕೊಂಡೆ ನಮ್ಮ ಜೊತೆಯಲ್ಲಿ ಊಟಮಾಡಿದಳು. ಆಮೇಲೆ ಏನು ಮಾಡಿದರೂ ನಮ್ಮ ಜೊತೆಗೆ ಊಟ ಮಾಡಲು ಒಪ್ಪಲಿಲ್ಲ. ಒಂಟಿಯಾಗೇ ಏಕೆ ಊಟ ಮಾಡುತ್ತೀ ಎಂತ ಕೇಳಿದೆ. ಅದಕ್ಕೇನೂ ಕಾರಣ ತೋಚಲಿಲ್ಲ. 'ಇಷ್ಟವಿಲ್ಲ' ಎಂದುಬಿಟ್ಟಳು. ಎರಡು ವಾರ ಕೆಲಸ ಮಾಡಿದ ಮೇಲೆ ಸಂಬಳ ಕೂಡಾ ತೆಗೆದುಕೊಳ್ಳದೆ ಓಡಿಹೋಗಿಬಿಟ್ಟಳು. ಇದ್ದಬಿದ್ದ ತನ್ನ ಸಾಮಾನನ್ನು ಪೆಟ್ಟಿಗೆಯಲ್ಲಿ ಹಾಕಿಕೊಂಡು ಒಂದು ದಿನ ಬೆಳಿಗ್ಗೆ ಆ ಹುಡುಗಿ ನಾವಾರೂ ಏಳಲಿಕ್ಕೆ ಮುಂಚೆಯೆ ಹೇಳದೆ ಕೇಳದೆ ಹೋಗಿಬಿಟ್ಟಳು. ನಮ್ಮ ಪ್ರೀತಿನೋಡಿ ಹೆದರಿಬಿಟ್ಟಳೇನೋ! ಇನ್ನೊಂದು ಪ್ರಯೋಗ ತತ್ವ ಗಾಳಿಪಾಲಾಯಿತು. ನಾನೂ ಮತ್ತೊಂದು ಬಾರಿ ಈ ಪ್ರಯೋಗ ಮಾಡಲಿಲ್ಲ; ಮಾಡುವಂತೆ ಗಾಂಧೀಜಿಯೂ ಒತ್ತಾಯಮಾಡಲಿಲ್ಲ. ಇದಾದ ಮೇಲೆ ಒಬ್ಬ ಬಸುಟೋ ಹೆಂಗಸನ್ನು ಕೆಲಸಕ್ಕಿಟ್ಟುಕೊಂಡೆವು. ಆಕೆ ಆ ಕುಲದ ನಾಯಕರ ಮನೆತನದವಳು. ಮನೆಗೆಲಸದಲ್ಲಿ ತುಂಬಾ ಸಹಾಯ ಮಾಡುತ್ತಿದ್ದಳು. ಒಳ್ಳೆ ನಂಬಿಗಸ್ತೆ. ಎಂದೂ ಎಲ್ಲೂ ನನಗಂಥ ಆಳು ಸಿಕ್ಕಲಿಲ್ಲ; ಇಂದಿಗೂ. ಎಲ್ಲೋ ಸ್ವಲ್ಪ ದಿನ ಮಾತ್ರ ಕೆಲಸಕ್ಕಿದ್ದಳು. ಆಮೇಲೆ ತನ್ನ ಗಂಡನ ಜೊತೆಯಲ್ಲಿ ಸಂಸಾರ ಮಾಡಲು ಹೊರಟುಹೋದಳು. ಆದರೂ ನಾನು ಅವಳನ್ನಾಗಲಿ

ನನ್ನಲ್ಲೂ ಮಗುವಿನಲ್ಲೂ ಅವಳು ತೋರಿದ ಶ್ರದ್ಧೆ ವಿಶ್ವಾಸವನ್ನಾಗಲಿ, ಎಂದೂ ಮರೆಯಲಾರೆ ನಾನಾತೆಗೆ ಚಿರಋಣಿ.

ಈ ಬಂಗಲೆಯಲ್ಲಿದ್ದಾಗಲೆ ಒಂದುಸಲ ಅವರ ದೇಶದವರೇ ಗಾಂಧೀಜಿಯ ಜೀವಕ್ಕೇ ಸಂಚಕಾರ ತಂದಿದ್ದರು ಯಾರೋ ಒಬ್ಬರು. ಇದಾದಮೇಲೆ ಅವರ ಜೀವ ಉಳಿಸಿದ ಐರೋಪ್ಯ ಮಿತ್ರರ ಮನೆಯಲ್ಲೇ ಎಷ್ಟೋ ದಿನ ಹಾಸಿಗೆ ಹಿಡಿದು ಮಲಗಿದ್ದರು ಗಾಂಧೀಜೀ. ಅವರು ಹೀಗೆ ಖಾಯಿಲೆ ಮಲಗಿದಾಗಲೆ ನಾವು ಊರ ಹೊರಗಿನ ಮನೆಬಿಟ್ಟು ಊರೊಳಗೆ ಒಂದು ಸಣ್ಣ ಮನೆ ಬಾಡಿಗೆಗೆ ಹಿಡಿದೆವು ಗುಣವಾದಮೇಲೆ ಗಾಂಧೀಜೀ ಇಲ್ಲಿಗೆ ಬಂದರು. ಬಂದಾಗ ತುಂಬಾ ದುರ್ಬಲರಾಗಿದ್ದರು. ಈ ಸಂದರ್ಭದಲ್ಲಿ ಗಾಂಧೀಜೀ ಯಾವಾಗಂದ ರಾವಾಗ, ಎಲ್ಲೆಂದರೆ ಅಲ್ಲಿ, ಎಷ್ಟು ಹೊತ್ತೆಂದರೆ ಅಷ್ಟು ಹೊತ್ತು ಮಲಗಿ ಏಳುವುದನ್ನು ಅಭ್ಯಾಸ ಮಾಡಿದರು. ಮುಂದೂ ಇದನ್ನು ಮರೆಯಲಿಲ್ಲ. ಯೋಚನೆ ಮಾಡುತ್ತಾ ಹಾಗೇ ಮಲಗಿಬಿಟ್ಟರೂ ವಿಚಾರ ಸರಣಿ ಮಾತ್ರ ಎಂದೂ ಭಂಗವಾಗುತ್ತಿರಲಿಲ್ಲ. ಹಾಸಿಗೆ ಹಿಡಿದುದರಿಂದ ಗಾಂಧೀಜೀ ಹೇಳಿದುದನ್ನು ಬರೆದುಕೊಳ್ಳಲು ಅವರ ಕಾರ್ಯದರ್ಶಿ ಮನೆಗೇ ಬರುತ್ತಿದ್ದರು ಹೇಳಹೇಳುತ್ತಾ ಹಾಗೇ ಮಾತುನಿಲ್ಲಿಸಿ ಗಾಂಧೀಜೀ ಕಣ್ಣು ಮುಚ್ಚುತ್ತಿದ್ದರು. ನಿದ್ದೆ ಮುಗಿಸಿ ಎದ್ದವರೆ ಎಲ್ಲಿ ಬಿಟ್ಟಿದ್ದರೋ ಅಲ್ಲಿಂದ ನೇರವಾಗಿ ಮತ್ತೆ ಮುಂಬರಿ ಸುತ್ತಿದ್ದರು. ಒಂದು ಸಲವಾದರೂ ಎಲ್ಲಿಗೆ ನಿಲ್ಲಿಸಿದೆ, ಏನು ಹೇಳು ತ್ತಿದ್ದೆ ಎಂದು ಕೇಳಿದವರಲ್ಲ.

ಹಾಸಿಗೆ ಹಿಡಿದಾಗ ಔಷಧ ತೆಗೆದುಕೊಳ್ಳಲು ಅವರು ನಿರಾಕರಿ ಸುತ್ತಿದ್ದುದು ಶುಶ್ರೂಷೆ ಮಾಡುತ್ತಿದ್ದವರಿಗೂ ಸ್ನೇಹಿತರಿಗೂ ತುಂಬಾ ಯೋಚನೆಗೆ ಕಾರಣವಾಗಿತ್ತು. ಔಷಧಿ ಅಂದರೆ ಮುಟ್ಟುತ್ತಲೇ ಇರಲಿಲ್ಲ ಸ್ವಾಭಾವಿಕವಾಗಿಯೇ ಗುಣವಾಗಲಿ ಎಂದುಬಿಡುತ್ತಿದ್ದರು ಪುಣ್ಯಕ್ಕೆ ಹಾಗೇ ವಾಸಿಯಾಯಿತು; ಅದೂ ಎಷ್ಟೋ ದಿನ ಅನಗತ್ಯ ವಾಗಿ ನರಳಿದ ಮೇಲೆ.

ಎದ್ದು ಓಡಾಡುವ ಹಾಗಾದ ಕೂಡಲೇ ಮತ್ತೆ ತಮ್ಮ ಆಫೀಸಿನ ಕೆಲಸ, ವಸಾಹತಿನ ರಾಜಕೀಯಕ್ಕೆ ಕೈಹಾಕಿದರು. ಹಗಲೂ ರಾತ್ರಿ ಅದೇ ಕೆಲಸ. ಆದರೂ ಮುಂಜಾನೆಯೋ ನಡುರಾತ್ರಿಯಾದ ಮೇಲೋ ಯಾವಾಗಲಾದರೊಂದು ಗಳಿಗೆ ನನ್ನ ಬಳಿ ಕೂತು ಮಗುವಿನ ಕೈಲಿ ಆಟವಾಡುತ್ತಿದ್ದರು. ಒಂದು ದಿನವಾದರೂ ತಪ್ಪಿಸುತ್ತಿರಲಿಲ್ಲ.

ಒಂದೆರಡು ವರ್ಷಕಾಲ ನಡೆದ ಸತ್ಯಾಗ್ರಹದ (ಪ್ಯಾಸಿವ್ ರೆಸಿಸ್ಟೆನ್ಸ್) ಕಥೆ ಅವರೇ ಬರೆದಿದಾರೆ; ಇನ್ನೂ ಕೆಲವರು ಹೇಳಿದಾರೆ ನಾನು ಆ ಕಥೆ ಹೇಳುವುದಿಲ್ಲ. ಗಾಂಧೀಜಿಯ ಮಾನವ ಸ್ವಭಾವವನ್ನು ಚಿತ್ರಿಸುವಂಥ ಒಂದೆರಡು ಕಥೆ ಹೇಳುತ್ತೇನೆ; ಅಷ್ಟೆ. ಸ್ವಲ್ಪ ಗುಣಮುಖವಾಗಿ ಚೇತರಿಸಿಕೊಳ್ಳುತ್ತಿದ್ದ ಹಾಗೆಯೇ ಮತ್ತೆ ಸತ್ಯಾಗ್ರಹ ಆರಂಭಿಸಿದರೆಂದು ಗಾಂಧೀಜಿಯನ್ನು ಬಂಧಿಸಿ ಮೂರು ತಿಂಗಳು ಕಠಿಣ ಶಿಕ್ಷೆ ವಿಧಿಸಿದರು.

ಭಾರತೀಯರ ಹೋರಾಟ ಜೋರುಜೋರಾಗುತ್ತ ಹೋದ ಹಾಗೆ ಗಾಂಧೀಜಿಗೆ ಜೈಲೇ ಮನೆಯಾಯಿತು ತನ್ನ ಸುತ್ತ ಎಲ್ಲಾದರೂ ಅನ್ಯಾಯ ನಡೆದದ್ದು ಕಂಡರೆ, ಜೀವದ ಹಂಗುತೊರೆದು ಅದನ್ನು ತಡೆಯಲು ಹೋರಾಡಬೇಕು; ಬಲವಂತವಾಗಿ ಅಲ್ಲಿಂದ ಕದಲಿಸಿಬಿಟ್ಟರೆ, ತನ್ನ ಕೆಲಸ ತಾನು ಮಾಡಿಕೊಳ್ಳಲು ದೇವರ ಮೇಲೇ ಭಾರಹಾಕಬೇಕು; ಇದು ಗಾಂಧೀಜಿಯ ತತ್ವ ಈ ತತ್ವವನ್ನವರು ಅಕ್ಷರಶಃ ಪಾಲಿಸುತ್ತಿದ್ದರು. ಈ ನಿರ್ಲಿಪ್ತತೆ ಇತ್ತೆಂತಲೇ ಮೊದಮೊದಲು ಸೆರೆಯಲ್ಲಿ ಕಾಯುಕಷ್ಟವಾದರೂ, ಆ ರಸರಹಿತ ಕಟು ಕಠಿನ ವಾತಾವರಣದಲ್ಲೆ ಅವರ ಆತ್ಮ ಅರಳುತ್ತಿತ್ತು. ಅಲ್ಲೇ ಗಾಂಧೀಜೀ ತಮ್ಮ ಅಂತರ್ದೃಷ್ಟಿಯನ್ನು ಬೆಳೆಸಿಕೊಂಡರು; ಒಂದೊಂದು ಸಲ ಸೆರೆಯಿಂದ ಹೊರಗೆ ಬಂದಾಗಲೂ ಅವರಲ್ಲಿ ಏನೋ ಒಂದು ಅವರ್ಣನೀಯ ಬೆಳವಣಿಗೆ ಕಾಣುತ್ತಿತ್ತು.

ಈ ಕಾಲದಲ್ಲಿ ನಡೆದ ಎರಡು ಘಟನೆ ಮಾತ್ರ ನನ್ನ ನೆನಪಿನಲ್ಲಿ ತುಂಬಾ ನಿಚ್ಚಳವಾಗಿದೆ ಮೂರು ತಿಂಗಳ ಜೈಲು ಮುಗಿಸಿ ಬರು

ತ್ತಿದ್ದ ಹಾಗೇ ಹೆಚ್ಚಿನ ಉತ್ಸಾಹದಿಂದ ಗಾಂಧೀಜೀ ತಮ್ಮ ಕೆಲಸಕ್ಕೆ ಕೈಹಾಕಿದರು. ದಿನಕ್ಕೆ ನಾಲ್ಕು ಗಂಟೆ ನಿದ್ರೆ ಮಾಡಿದರೆ ಅದೇ ಹೆಚ್ಚು. ದಿನವೆಲ್ಲಾ ಕೆಲಸ, ಯೋಚನೆ ಒಂದು ರಾತ್ರಿ ದಿನದ ಹಾಗೇ ತಡವಾಗಿ ಮನೆಗೆ ಬಂದು, ಅಡಿಗೆ ಮನೆಯಲ್ಲಿ ಅವರಿಗಾಗೇ ಮಾಡಿಟ್ಟ ಪಾನಕ ಕುಡಿಯಲು ಅಲ್ಲಿಗೆ ಹೋದರು.

ಈ ಸಲದ ಮನೆ ಬಡವರ ಕೇರಿಯಲ್ಲಿತ್ತು. ಸರಳಜೀವನ ನಡೆಸಬೇಕು, ಆದಷ್ಟು ಹಣ ಹೋರಾಟಕ್ಕೆ ಕೊಡಬೇಕು ಎಂಬಾಸೆಯಿಂದ ಈ ಮನೆ ಮಾಡಿದ್ದೆವು. ನಾವಿದ್ದ ಮನೆಯೇನೋ ಆಗಿನ ಕಾಲಕ್ಕೆ ಒಳ್ಳೆಯದೆಂದೇ ಹೇಳಬೇಕು. ಆದರೂ ಹೊಲಸು. ಮೊದಲು ಅಲ್ಲಿ ಸ್ನಾನದ ಮನೆಯೇ ಇರಲಿಲ್ಲ. ನಮಗಿಂತ ಮೊದಲು ಆ ಮನೆಯಲ್ಲಿ ಬಾಡಿಗೆಗೆ ಇದ್ದವರು, ಮೆಟ್ಟಲು ಕೆಳಗೆ ಬೀರುವಿನಂತಿದ್ದ ಕಿರುಮನೆಯನ್ನೇ ಬಚ್ಚಲು ಮನೆಯಾಗಿ ಉಪಯೋಗಿಸುತ್ತಿದ್ದರು. ಗೋಡೆಯಲ್ಲಿ ಒಂದು ತೂತು ಕೊರೆದು, ಕೊಳವಿ ಇಟ್ಟು ನೀರು ಹೋಗಲು ಹಾದಿ ಮಾಡಿದ್ದರು. ಆದರೂ ನೀರೆಲ್ಲಾ ಹೋಗುತ್ತಿರಲಿಲ್ಲ. ಅಲ್ಲದೆ ಕತ್ತಲು; ತೇವ ಆರುತ್ತಲೇ ಇರಲಿಲ್ಲ. ಕತ್ತಲಾಯಿತೆಂದರೆ ಸರಿ ದೊಡ್ಡ ದೊಡ್ಡ ಎರೆ ಹುಳ ಹರಿದಾಡುತ್ತಿದ್ದವು. ಅಡಿಗೆ ಮನೆಗೆ ಹೋಗಬೇಕಾದರೆ ಅದೇ ದಾರಿ.

ಅಡಿಗೆ ಮನೆಗೆ ಹೋಗುತ್ತಾ ದಾರಿಯಲ್ಲಿ ಗಾಂಧೀಜೀ ಈ ಹುಳ ಒಂದನ್ನು ತುಳಿದುಬಿಟ್ಟರು. ಕಾಲಿಗೆ ಮೆತ್ತಗೆ ಏನೋ ತುಳಿದ ಹಾಗಾಯಿತು. ಮೊದಲು ಮಾಂಸಾಹಾರಿಯಾಗಿದ್ದ ಕಸಮುಸರೆ ಹುಡುಗಿ ಮಾಂಸದ ತುಂಡನ್ನೋ ಏನನ್ನೋ ಕೆಡವಿರಬೇಕು ಎಂದುಕೊಂಡರು. ಮರುಗಳಿಗೆಯೇ ನಿಜ ಗೊತ್ತಾಯಿತು. ಗಾಂಧೀಜೀ ಆಗತಾನೇ-ಜೈಲಿನಿಂದ ಹಿಂದಿರುಗಿದ್ದರು. ಈ ಪ್ರಾಣಿಹಿಂಸೆಯಿಂದ ನೊಂದು "ಸದ್ಯ ನಾಳೆ ಜೈಲಿಗೆ ಹೋಗುತ್ತೇನಲ್ಲ" ಎಂದರು ಗಟ್ಟಿಯಾಗಿ, ಅವರ ಸನ್ಯಾಸಿ ಮನಸ್ಸು ಜೀವಹಿಂಸೆಗೆ ಅಷ್ಟು ಹೇಸಿತ್ತು. ಇದನ್ನು ನೆನಸಿಕೊಂಡು ನಾವೆಲ್ಲಾ ಆಗಾಗ ನಗುತ್ತಾ ಇದ್ದೆವು.

ಆದರೂ ಆಗ ಮಾತ್ರ ಏನು ಯೋಚನೆ ಮಾಡಲೂ ಸೆರೆಯೇ ಸರಿಯಾದ ಸ್ಥಳ ಎಂತ ಗಾಂಧೀಜೀ ನಂಬಿದ್ದನ್ನು ನೋಡಿ ನಮ್ಮೆಲ್ಲರ ಮನಸಿಗೂ ತುಂಬಾ ನೋವಾಯಿತು.

೦ ೦ ೦ ೦

ಈ ಸಲ ಸೆರೆಯಿಂದ ಬಂದ ಮೇಲೆ, ನಾನು ರೋಗಿಷ್ಠೆಯಾಗಿದ್ದುದನ್ನು ನೋಡಿ ಗಾಂಧೀಜಿಯ ಮನಸ್ಸಿಗೆ ತುಂಬಾ ಚಿಂತೆಯಾಯಿತು. ಎಷ್ಟೋ ದಿನದಿಂದ ಸರಿಯಾಗಿ ನಿದ್ದೆ ಇಲ್ಲದೆ ಇನ್‌ಸೋಮ್ನಿಯಾ — ಲಕ್ಷಣಗಳೆಲ್ಲವೂ ಕಾಣಿಸುತ್ತಿತ್ತು. ಜೊತೆಗೆ ಇಷ್ಟು ಹೊತ್ತಿಗೆ ಎಂಟು ತಿಂಗಳು ತುಂಬಿದ್ದ ಮಗುವಿಗೆ ಮೊಲೆ ಬಿಡಿಸಲು ಯತ್ನಿಸುತ್ತಿದ್ದೆ. ಅದು ತುಂಬಾ ಕಷ್ಟವಾಗಿತ್ತು. "ಮಗುವನ್ನು ಸ್ವಲ್ಪ ದಿನ ಯಾರಾದರೂ ಮಲಗಿಸಿಕೊಂಡರೆ ನಿನಗೆ ನಿದ್ರೆ ಬಂದೀತೇನು ?' ಎಂತ ಕೇಳಿದರು ಗಾಂಧೀಜೀ.

"ಏನೋ ನನಗೆ ಗೊತ್ತಿಲ್ಲ. ಅಂತೂ ನನ್ನ ಕಥೆಯೇನೋ ಮುಗಿದ ಹಾಗೆ ಇದೆ ಎಂದೆ.

"ಮಗುವನ್ನು ನನ್ನ ವಶಕ್ಕೆ ಒಪ್ಪಿಸುತ್ತೀಯಾ ?"

"ನೀವೇನು ಮಾಡುತ್ತೀರಿ ?"

"ನನ್ನ ಕೈಗೆ ಕೊಡು. ನಾನು ಮೊಲೆ ಹಾಲು ಬಿಡಿಸುತ್ತೇನೆ. ನನ್ನ ಹತ್ತಿರಲೇ ಮಲಗಿಸಿಕೊಳ್ಳುತ್ತೇನೆ."

ನಾನೂ ಇದಕ್ಕೆ ಆಗಲಿ ಎಂದೆ. ಗಾಂಧೀಜೀ ಸಭೆಯಿಂದ ರಾತ್ರಿ ಮನೆಗೆ ಬಂದ ಕೂಡಲೇ ಎಷ್ಟು ಹೊತ್ತಾಗಿರಲಿ - ಹನ್ನೊಂದು ಗಂಟೆಗೇನೂ ಕಡಿಮೆ ಆಗುತ್ತಿರಲಿಲ್ಲ--ಮಗನನ್ನು ಕರೆದುಕೊಂಡು ಹೋಗಿ ಮಲಗಿಸಿಕೊಳ್ಳುವುದು ಎಂತ ಗೊತ್ತಾಯಿತು.

ಒಂದು ದಿನ ರಾತ್ರಿ ಒಂದು ಗಂಟೆಗೆ ಮನೆಗೆ ಬಂದರು ಗಾಂಧೀಜೀ ಬಂದವರೇ ನನ್ನ ಕೋಣೆಯಿಂದ ಮಗುವನ್ನು ಕರೆದುಕೊಂಡುಹೋಗಿ ನೆಲದಮೇಲೆ ಒಂದು ಹಾಸಿಗೆ ಹಾಸಿಕೊಂಡು ತಮ್ಮಪಕ್ಕದಲ್ಲೇ ಮಗು

ವನ್ನು ಮಲಗಿಸಿಕೊಂಡರು. ಮಗುವಿಗೆ ಬಾಯಾರಿಕೆ ಆದರೆ ಇರಲಿ ಎಂದು ಒಂದು ತಂಬಿಗೆ ನೀರು, ಒಂದು ಲೋಟ ಇಟ್ಟುಕೊಂಡರು ಎಲ್ಲರೂ ಮಲಗಿಕೊಂಡರು. ನಾಲ್ಕೈದು ಗಂಟೆಯಾದರೂ ಮಗು ಅತ್ತು ಸದ್ದು ಕೇಳಿಸಲಿಲ್ಲ. ಮಗು ಸುಖವಾಗಿ ಮಲಗಿ ನಿದ್ದೆಮಾಡಿತು. ಎರಡು ವಾರ ಹೀಗೆ ಕಳೆಯಿತು. ಇಷ್ಟು ಹೊತ್ತಿಗೆ ಮಗುವೂ ಮೊಲೆ ಬಿಟ್ಟಿತು. ಅದರ ಆರೋಗ್ಯ ಮೊದಲಿಗಿಂತ ಹೆಚ್ಚು ಸುಧಾರಿಸಿತು

o o o o

ಗಾಂಧೀಜಿಯ ಸಂಗಡ ದಿನವೂ ಒಂದು ಸಲವಾದರೂ ನಾನು ಚರ್ಚಿಸಿ ವಾದಿಸದ ಸಮಸ್ಯೆಯೇ ಇಲ್ಲ. ಬೇಕಂತ ಸಮಸ್ಯೆ ತೆಗೆದುಕೊಂಡು ಕೂತುಕೊಳ್ಳುತ್ತಿರಲಿಲ್ಲ. ಮಾತಿನಲ್ಲಿ ತಾವಾಗಿಯೆ ಸಮಸ್ಯೆಗಳು ತಲೆದೋರುತ್ತಿದ್ದವು. ಅವರು ಹೇಳಿದ ಯಾವುದಾದಾರೂ ಮಾತು ನನಗೆ ಸರಿ ಅನಿಸದಿದ್ದರಾಯಿತು ಚರ್ಚೆ ಆರಂಭವಾಯಿತೆಂತಲೇ. ಒಂದುದಿನ ಪಾದರಿಗಳಲ್ಲಿರಬೇಕಾದ ಬ್ರಹ್ಮಚರ್ಯದ ವಿಚಾರ ಚರ್ಚೆಗೆ ಬಂತು ನಿಜವಾದ ಬೋಧಕರೆನ್ನುವವರೆಲ್ಲಾ ಬ್ರಹ್ಮಚಾರಿಗಳಾಗಿರಬೇಕೆಂಬುದು ಗಾಂಧೀಜಿಯ ಅಭಿಪ್ರಾಯ.

"ಪರಿಪೂರ್ಣತೆಯನ್ನೇ ಗಮನದಲ್ಲಿಟ್ಟುಕೊಂಡು ಅದನ್ನೇ ಸಾಧನೆ ಮಾಡುತ್ತಿರುವವನಿಗೆ ಮಾನವರ ಕಷ್ಟ, ತೊಂದರೆ ಅರ್ಥವಾದೀತೇ? ತಾನು ಪ್ರೀತಿಸುವವರು ಯಾರೂ ಎಂದೂ ಹೊಟ್ಟೆಗಿಲ್ಲದೆ ನರಳಿದ್ದನ್ನು ನೋಡದ ಗುರುವಿಗೆ ಕಳ್ಳತನದ ಸೆಳೆತ ಹೇಗೆ ತಾನೆ ಅರ್ಥವಾದೀತು?

"ಈ ಚಪಲಕ್ಕೆ ಅತೀತ ಎಂದೇ ಅವನಿಗೆ ನೆರವು ನೀಡುವ ಶಕ್ತಿಯಿದೆ. ಮದ್ದು ತರಲು ರೋಗಿಯ ಬಳಿಗೇ ಹೋಗುತ್ತೀಯಾ? ಗಟ್ಟಿಮುಟ್ಟಾಗಿ ದೃಢಕಾಯರ ಬಳಿಗೆ ಅಲ್ಲವೇ."

'ಒಪ್ಪಿದೆ. ಆದರೆ ಮಕ್ಕಳನ್ನು ಹೆರುವುದು ತಪ್ಪು ಎನ್ನುವ ನಿಮ್ಮ ಸೂಚನೆಗೆ ಮಾತ್ರ ನಾನೊಪ್ಪಲಾರೆ.'

“ನಾನಾದರೂ ಅದು ತಪ್ಪೆಂದು ಎಲ್ಲಿ ಹೇಳಿದೆ ?”

‘ಇಲ್ಲ, ನೀವು ಹಾಗೆ ಹೇಳಲಿಲ್ಲ ಆದರೂ ಮಕ್ಕಳನ್ನು ಹೆರುವುದು ಮೈಯ ಭೋಗಕ್ಕೆ ಅನುವುಮಾಡಿ ಕೊಟ್ಟಹಾಗೆ ಎಂತಲೋ ಏನೊ, ಅಂತೂ ಆ ಅರ್ಥಬರುವ ಮಾತು ಹೇಳಿದಿರಿ.’

“ಅದು ಸುಳ್ಳೇ ?”

‘ಸುಳ್ಳೇ ನಾನು ಖಂಡಿತವಾಗಿ ಹೇಳಿದೆ. ‘ಹಾಗೆಂದು ಬಿಟ್ಟರೆ ಮಕ್ಕಳನ್ನು ಹೆರುವುದು ತಪ್ಪಲ್ಲವಾದರೆ ಹೋಗಲಿ, ದುರ್ಬಲತೆ ಎಂದ ಹಾಗಾಗುತ್ತದೆ. ಇದು ತಪ್ಪಾದರೆ ದೇವರೇ ತಪ್ಪಾಗಿರಬೇಕು. ಏಕೆಂದರೆ ಇದನ್ನು ಬಿಟ್ಟು ಮಕ್ಕಳನ್ನು ಹೆರುವ ಬೇರೆ ಉಪಾಯವೇ ಇಲ್ಲವಲ್ಲ. ಇದಿಲ್ಲವಿದ್ದರೆ ಭೂಮಿಯ ಮೇಲೆ ಮಾನವರ ಹೆಸರೇ ಇರುತ್ತಿದ್ದಿಲ್ಲ.”

“ಒಂದುವೇಳೆ ಹಾಗಾಗಿದ್ದರೆ ಏನು ಘೋರವಾಗುತ್ತಿತ್ತು ?”

“ಅದೇನೋ ಅಂತೂ ಮಾನವ ಜಾತಿ ಪರಿಪೂರ್ಣತೆಯ ತುಟ್ಟ ತುದಿಯನ್ನೇರುವವರೆಗೆ ಅವನ ಕುಲ ನಿರರ್ಗಳವಾಗಿ ಬೆಳೆಯಬೇಕು.”

‘ಮಾಡಬೇಕಾದ ಮಹತ್ತರ ಕೆಲಸವಿರವಾಗ ಒಂದು ಪುಟ್ಟ ಸಂಸಾರ ನೋಡಿಕೊಳ್ಳುವುದರಲ್ಲೇ ತನ್ನ ಶಕ್ತಿಯನ್ನೆಲ್ಲಾ ವ್ಯಯ ಮಾಡುವುದು ತಪ್ಪಲ್ಲವೆ ?’

“ ಸರಿ.”

‘ಹಾಗಾದರೆ ಏಕೆ ನನ್ನ ಸಂಗಡ ಜಗಳವಾಡುತ್ತಾ ಇದ್ದಿ?’

‘ನೀವು ಗೃಹಸ್ಥನಿಗಿಂತ ಬ್ರಹ್ಮಚಾರಿಯೇ ಶ್ರೇಷ್ಠ ಎನ್ನುತ್ತೀರಲ್ಲ ಅದಕ್ಕೆ. ಆ ಜೀವನ ಉತ್ತಮವಿರಬಹುದು. ಆದರೆ ಆ ವ್ಯತ್ಯಾಸ ಆಶ್ರಮ ಭೇದದ್ದು, ಗೌರವದ್ದಲ್ಲ.’

○ ○ ○ ○

ತಂದೆ ತಾಯಿಯಾಗುವುದು ಸರಿಯೋ ತಪ್ಪೋ ಈವಿಷಯ ಆಗಾಗ ಚರ್ಚೆಯಾಗುತ್ತಲೇ ಇತ್ತು. ಈ ವಿಷಯ ಯೋಚನೆ ಮಾಡುತ್ತ

ಮಾಡುತ್ತ, ಮಾನವ ಸಂತಾನೋತ್ಪತ್ತಿಯನ್ನು ನಿಲ್ಲಿಸಿಬಿಟ್ಟರೆ, ಅವನಿಗೂ ದೇವರಿಗೂ ಇಬ್ಬರಿಗೂ ಒಳ್ಳೆಯದೆಂಬ ಮಟ್ಟಕ್ಕೆ ಬಂದು ಮುಟ್ಟಿದ್ದರು ಗಾಂಧೀಜೀ. ಮಗುವನ್ನು ಹೆಗುವುದೆಂದರೆ ಪಾಪ ಕಾರ್ಯ ಎಂತ ನನಗೂ ಅನಿಸ ವ ಹಾಗಾಗಿತ್ತು. ಆಗ ಫೀನಿಕ್ಸ್ ಆಶ್ರಮದಲ್ಲಿದ್ದೊಬ್ಬಾಕೆ ಗರ್ಭಿಣಿಯಾಗಿದ್ದಳು. ಎಷ್ಟೋ ದಿನ ನಾನು ಬೇಕೆಂತಲೇ ಸಂತಾನಸಂಯಮದ ಮಾತಿನಲ್ಲಿ ಆಕೆಯ ಹೆಸರೇ ಎತ್ತುತ್ತಿರಲಿಲ್ಲ. ಸ್ವಲ್ಪ ದಿನವಾದ ಮೇಲೆ ಆಕೆ ಹೆತ್ತಳು. ಎರಡು ದಿನದಮೇಲೆ ನಾನೂ ನನ್ನ ಗಂಡ ಇಬ್ಬರೂ ಗಾಂಧೀಜಿಯನ್ನು ನೋಡಲಿಕ್ಕೆ ಹೋದೆವು ಸ್ವಲ್ಪ ಹೊತ್ತು ಎಂದಿನಂತೇ ಮಾತು ನಡೆಯಿತು. ಆಮೇಲೆ ಗಾಂಧೀಜೀ ದುಃಖದ ಧನಿಯಲ್ಲಿ ಮೊನ್ನೆ ಹುಟ್ಟಿದ 'ಮಗುವಿನ ವಿಚಾರ ಏನೂ ಎತ್ತಲೇ ಇಲ್ಲವಲ್ಲ. ಅದರ ವಿಚಾರ ಬೇಡವೇನು ನಿನಗೆ?' ಎಂದರು.

'ಬೇಡವೇನ. ಬೇಕಾದಷ್ಟು ಕೇಳಬೇಕಾದ್ದಿದೆ. ಆದರೆ ನಿಮಗೆ ರುಚಿಸೀತೋ ಇಲ್ಲವೋ ಎಂತ ಕೇಳಲಿಲ್ಲ'.

'ಹಾಗಾದರೆ ಸರಿ, ಬಾ ಹೋಗಿ ನೋಡಿ ಬರೋಣ' ಎಂದರು ಗಾಂಧೀಜೀ.

ಮರುರೋಜನ ಹೋಗಿ ತಾಯಿ ಮಕ್ಕಳನ್ನು ನೋಡಿಕೊಂಡು ಬಂದೆವು

ಮಗುವಿನ ಒಳ್ಳೆತನ, ತಾಯ ಆರೋಗ್ಯದ ಬಗ್ಗೆ ಗಾಂಧೀಜೀ ಉತ್ಸಾಹದಿಂದಲೇ ಮಾತಾಡುತ್ತಿದ್ದರು. ತುಂಬಾ ಸಂತೋಷವಾದ ಹಾಗಿದ್ದರು.

ಸೂತಿಕಾಗೃಹ ಹೊಕ್ಕಾಗ ಗಾಂಧೀಜಿಯ ಕಣ್ಣು ಪ್ರೀತಿತುಂಬಿದ ಆಸಕ್ತಿಯಿಂದ ಮಿನುಗುತ್ತಿತ್ತು. ಮೊದಮೊದಲು ನನಗಿದನ್ನು ನೋಡಿ ಸ್ವಲ್ಪ ದಿಗ್ಭ್ರಾಂತಿಯಾಯಿತು ಕಡೆಗೆ ನನಗೂ ಅರ್ಥವಾಯಿತು: ಗಾಂಧೀಜಿಯೂ ನಿರಾಕಾರ ಸತ್ಯ, ಕಣ್ಣು ಸಾಕಾರ ಪ್ರೇಮವನ್ನೂ ಬೇರೆ ಬೇರೆ ಮಾಡುತ್ತಾರೆ. ಮಾತೃಪ್ರೇಮವೆಂಬೂ

ಗಾಂಧೀಜಿಗೆ ಅತ್ಯಂತ ಸುಂದರವಾದ, ಅತ್ಯಾನಂದದಾಯಕ. ಇದರಿಂದಲೇ ಗಾಂಧೀಜೀ ಎಷ್ಟೋ ಸಲ ತಾಯಲ್ಲಿಲ್ಲದ ಗುಣಗಳನ್ನು ಕೂಡಾ ಆರೋಪಿಸುತ್ತಿದ್ದರು.

'ತಾಯಿಯಾದ ಮಾತ್ರಕ್ಕೆ ಹೆಂಗಸಿಗೆ ಬುದ್ಧಿಯೇನೂ ಹೆಚ್ಚಾಗುವುದಿಲ್ಲ-ಒಂದುಸಲ ನಾನು ಗಾಂಧೀಜಿಗೆ ಹೇಳಿದೆ

'ಇಲ್ಲ ತಾಯಿಯಾದ ಮಾತ್ರಕ್ಕೇ ಬುದ್ಧಿ ಬರುವುದಿಲ್ಲ. ಪ್ರೇಮಮಯಿಯಾದರೆ ಬುದ್ಧಿವಂತಳಾಗುತ್ತಾಳೆ. ನಿಜವಾದ ಪ್ರೇಮ ಯಾವಾಗಲೂ ಬುದ್ಧಿ ಕಲಿಸುತ್ತದೆ. ಮಾನವ ಪ್ರೇಮದ ನೂರು ಮುಖದಲ್ಲಿ ಮಾತೃಪ್ರೇಮಕ್ಕಿಂತ ಮಿಗಿಲಾದುದೇ ಇಲ್ಲ. ಆ ಪ್ರೇಮದ ಮಡಿಲಲ್ಲೇ ಮಹಾತ್ಯಾಗದ ಬೀಜ ಹುದುಗಿದೆ' ಎಂದು ಗಾಂಧೀಜೀ ಉತ್ತರಕೊಟ್ಟರು.

'ಮಗುವಿನ ಮೇಲೆ ಬೇಕಾದಷ್ಟು ಪ್ರೀತಿ ಇದ್ದರೂ ಅದನ್ನು ಬೆಳೆಸುವ ಬುದ್ಧಿವಂತಿಕೆ ತಾಯಿಗೆ ಇರದೆ ಇರಬಹುದು' ಎಂದು ನಾನು ತಕರಾರು ಹಾಕಿದೆ.

"ಪ್ರೀತಿ ಅದನ್ನು ಕಲಿಸುತ್ತದೆ"

"ಎಲ್ಲಾದರೂ ಉಂಟೆ. ಮಗುವಿಗೆ ಹೇಗೆ ಊಟಮಾಡಿಸಬೇಕೆಂಬುದನ್ನು ಕೂಡಾ ಪ್ರೀತಿ ಕಲಿಸದು. ಆ ಪ್ರೀತಿಯಿಂದಲೇ ಹೆಚ್ಚಾಗಿ ತಿನ್ನಿಸಿ ಮಗುವನ್ನು ಕೊಂದುಹಾಕಬಹುದು"

"ಹಾಗಾಗುವುದು ನಿಜವಾದ ಪ್ರೇಮವರಿತ ತಾಯಂದಿರಿಂದಲ್ಲ. ನಿಮ್ಮ ನಾಗರಿಕತೆ ಪಟ್ಟಣವಾಸಗಳು ತಾಯ್ತನದಿಂದ ಬರಬೇಕಾದ ಬುದ್ಧಿಯನ್ನು ಹಾಳುಮಾಡಿಬಿಟ್ಟಿವೆ ನಿನ್ನ ಮಗುವನ್ನು ಹೇಗೆ ನೋಡಿಕೊಳ್ಳಬೇಕೆಂಬುದು ನಿನಗೆ ಗೊತ್ತಿಲ್ಲವೇ?

"ಈಗಿನ ಅನುಭವದಿಂದ ಕಲಿಯುತ್ತಿದೇನೆ. ನನ್ನೊಳಗೇ ಆ ಶಕ್ತಿ ಇದೆ ಎಂಬುದು ನನಗಷ್ಟು ನಂಬಿಕೆಯಾಗಿಲ್ಲ"

"ಪ್ರೇಮವನ್ನು ನಂಬು. ಅದು ಎಂದೂ ತಪ್ಪುಹಾದಿ ತುಳಿಸುವುದಿಲ್ಲ. ಸುಮ್ಮನೆ ಮೆದುಳಿಗೆ ಸವಾಲು ಹಾಕುವ ಪ್ರಯತ್ನ ಮಾಡಬೇಡ" ಎಂದು ಮಾತು ಮುಗಿಸಿದರು ಗಾಂಧೀಜೀ.

೯

ಒಂದು ದಿನ ಸಂಜೆ ಜೋಹಾನ್ಸ್‌ಬರ್ಗಿನ ಮಸಾನಿಕ್ ಮಂದಿರದಲ್ಲಿ ಭಾರತೀಯರ, ಅವರ ಬಗ್ಗೆ ಸಹಾನುಭೂತಿಯುಳ್ಳವರ ದೊಡ್ಡ ಸಭೆ ಸೇರಿತ್ತು. ಒಳಗೆ ಸ್ಥಳ ಸಾಲದೆ ಎಷ್ಟೋ ಜನ, ಬಾಗಿಲಿನಲ್ಲಿ, ಕೈಸಾಲೆಯಲ್ಲಿ ಕಿಕ್ಕಿರಿದು ತುಂಬಿದ್ದರು. ಗಾಂಧೀಜಿಯೆ ಆ ದಿನದ ಮುಖ್ಯ ಭಾಷಣಕಾರರು. ಅವರು ಎಲ್ಲಿ ಹೋದರೂ ಅಷ್ಟೆ, ಜನರ ಗುಂಪೋಗುಂಪು! ಭಾಷಣ ಮುಗಿದ ಮೇಲೆ ಗಾಂಧೀಜೀ ವೇದಿಕೆಯಿಂದ ಕೆಳಗಿಳಿದು ಒಂದಿಬ್ಬರ ಹತ್ತಿರ ಸ್ವಲ್ಪಹೊತ್ತು ಮಾತಾಡಿದರು. ಆಮೇಲೆ ಇಬ್ಬರೂ ಜೊತೆಗೇ ಹೊರ ಹೊರಟೆವು. ಹೊರ ಬಾಗಿಲ ಹತ್ತಿರ, ಬಾಗಿಲಪಕ್ಕದಲ್ಲಿ ಯಾರೋ ಒಬ್ಬರು ನಿಂತಿದ್ದುದು ಕಾಣಿಸಿತು. ಗಾಂಧೀಜಿಯ ಕಣ್ಣಿಗೂ ಬಿತ್ತು. ಅವರು ಕೂಡಲೇ ಅವನ ಹತ್ತಿರಹೋಗಿ ತೋಳಲ್ಲಿ ತೋಳು ಸೇರಿಸಿ, ತುಂಬಾ ಆಸಕ್ತಿಯಿಂದ ಅವನನ್ನು ಮಾತಾಡಿಸಲಾರಂಭಿಸಿದರು ಆತ ಒಂದು ಘಳಿಗೆ ಸಂಶಯಪಟ್ಟ. ಆಮೇಲೆ ಗಾಂಧೀಜಿಯ ಜೊತೆಯಲ್ಲಿ ಹೊರಟು ಹೋದ. ನಾನು ರಸ್ತೆ ಮಗ್ಗುಲಲ್ಲಿ ಅವರ ಜೊತೆಗೇ ಹೆಜ್ಜೆ ಹಾಕುತ್ತಿದ್ದೆ. ರಸ್ತೆಯ ಕೊನೆಯವರೆಗೂ ಹಾಗೇ ನಡೆದೆವು. ಅವರೇನು ಮಾತನಾಡುತ್ತಿದ್ದರೋ ನನಗೆ ಅರ್ಥವೂ ಆಗಲಿಲ್ಲ; ಕೇಳಿಸಲೂ ಇಲ್ಲ. ಇಬ್ಬರೂ ಅಷ್ಟು ಕೆಳ ದನಿಯಲ್ಲಿ ಮಾತಾಡುತ್ತಿದ್ದರು. ರಸ್ತೆಯ ಕೊನೆಗೆ ಬಂದಾಗ ಆ ಮನುಷ್ಯ ಗಾಂಧೀಜಿಯ ಕೈಗೆ ಏನನ್ನೋ ಕೊಟ್ಟು ಹೊರಟುಹೋದ. ಈ ವ್ಯವಹಾರ ನನಗೇನೇನೂ ಅರ್ಥವಾಗಲಿಲ್ಲ. ಆತ ಹೋದ ಕೂಡಲೇ ಆತನಿಗೆ ಏನು ಬೇಕಾಗಿತ್ತು ಎಂತ ವಿಚಾರಿಸಿದೆ. ಏನಾದರೂ ಬೇಕಾಗಿತ್ತೇನು?

'ಹೂ. ನನ್ನನ್ನು ಕೊಲ್ಲುವುದು ಬೇಕಾಗಿತ್ತು' ಎಂದರು ಗಾಂಧೀಜೀ.

'ನಿಮ್ಮನ್ನು ಕೊಲ್ಲುವುದು. ಅಬ್ಬ! ಅವನಿಗೇನು ಹುಚ್ಚೇ?'

'ಅಲ್ಲ. ನಮ್ಮ ಜನರಿಗೆ ನಾನು ದ್ರೋಹ ಮಾಡುತ್ತಿದೇನೆಂದು ಅವನಿಗೆ ಅನಿಸಿದೆ. ಸರ್ಕಾರದ ಜೊತೆಗೆ ಸೇರಿಕೊಂಡು ಕೆಲಸ ಮಾಡುತ್ತಿದ್ದೂ, ಜನರ ಸ್ನೇಹಿತ ನಾಯಕ ಎಂತ ನಟಿಸುತ್ತಿದೇನೆ ಅಂತ ಅವನಿಗೆ ನನ್ನ ಮೇಲೆ ಸಿಟ್ಟು.'

ಛೀ, ಇದೆಲ್ಲಾ ತುಂಬಾ ದುಷ್ಟತನ, ಭೀಕರವಾದ್ದು, ಇಂಥ ಮನುಷ್ಯನನ್ನು ಹೀಗೇ ಬಿಟ್ಟುಬಿಡಬಾರದು ದಸ್ತಗಿರಿ ಮಾಡಬೇಕು. ಸುಮ್ಮನೆ ಏಕೆ ಬಿಟ್ಟುಬಿಟ್ಟಿರಿ? ಖಂಡಿತ ಅವನಿಗೆ ಹುಚ್ಚಿರಬೇಕು' ಎಂದೆ ನಾನು

'ಊಹು. ಅವನಿಗೇನೂ ಹುಚ್ಚಿಲ್ಲ! ತಪ್ಪು ತಿಳಿವಳಿಕೆ. ನಾನವನ ಕೈಲಿ ಮಾತಾಡಿದ ಮೇಲೆ ಕೊಲ್ಲಲೆಂದು ತಂದ ಚೂರಿಯನ್ನು ನನ್ನ ಕೈಗೆ ಕೊಟ್ಟು ಹೋದ ನೋಡು' ಎಂದರು ಗಾಂಧೀಜೀ.

'ಹಾಗಾದರೆ ಕತ್ತಲಲ್ಲಿ ನಿಮ್ಮನ್ನು ಇರಿದೇ ಬಿಡುತ್ತಿದ್ದ. ನಾನು...........'

ಗಾಂಧೀಜೀ ನನ್ನನ್ನು ತಡೆದು ಹೇಳಿದರು. 'ಸುಮ್ಮನೆ ಅದರ ತೊಂದರೆ ಹಚ್ಚಿಕೊಳ್ಳಬೇಡ. ನನ್ನನ್ನು ಕೊಲ್ಲುವ ಆಸೆ ತನಗಿದೆ ಎಂದುಕೊಂಡಿದ್ದ. ಆದರೆ ಆ ಕೆಲಸ ಮಾಡಲು ಧೈರ್ಯವಿರಲಿಲ್ಲ. ಅವನಂದುಕೊಂಡಷ್ಟೇ ನಾನು ಕೆಟ್ಟವನಾಗಿದ್ದರೆ, ನಾನು ಸಾಯುವುದೇ ಯೋಗ್ಯ. ಇನ್ನು ಸಾಕು ಆ ವಿಚಾರ. ಹೆಚ್ಚು ತಲೆ ಕೆಡಿಸಿಕೊಳ್ಳುವುದು ಬೇಡ ಇನ್ನೊಂದು ಸಲ ಅವನೀ ಕೆಲಸಕ್ಕೆ ಕೈ ಹಾಕುವುದಿಲ್ಲ. ನಾನೇನಾದರೂ ಅವನನ್ನು ದಸ್ತಗಿರಿ ಮಾಡಿಸಿದ್ದರೆ ಅವನು ನನ್ನ ಶತ್ರುವಾಗುತ್ತಿದ್ದ. ಅದೇ ಈಗ ಗೆಳೆಯನಾದ.'

ಒಂದು ದಿನ ನಾನು, ನನ್ನ ಗಂಡ, ಗಾಂಧೀಜೀ ಒಬ್ಬ ಯೂರೋಪಿಯನ ಅತಿಥಿ-ನಾಲ್ಕು ಜನ ಕೂತು ಆಹಾರದ ವಿಷಯ ಮಾತಾ

ಡುತ್ತ ಇದ್ದೆವು. ಆಹಾರ ಪದಾರ್ಥಗಳನ್ನು ಬೇಯಿಸಬೇಕೇ ಅಥವಾ ಹಸಿಯಾಗೇ ತಿನ್ನಬೇಕೆ? ತೀರಾ ಬೇಯಿಸದಿದ್ದರೂ ಅರೆಬರೆ ಬೇಯಿಸಿ ತಿಂದರೆ ಹೇಗೆ? ಹಣ್ಣು ತರಕಾರಿಯನ್ನು ಓಟಿ ಬಿಟ್ಟು ಸಿಪ್ಪೆ ಸಹಿತ ತಿನ್ನಬೇಕೇ-ಹೀಗೆ ನಡೆದಿತ್ತು ಚರ್ಚೆ.

ನನಗೂ ಗಾಂಧೀಜಿಗೂ ಈ ವಿಷಯದಲ್ಲಿ ಬೇಕಾದಷ್ಟು ಚರ್ಚೆಯಾಗುತ್ತಾ ಇತ್ತು. ಯೂರೋಪಿಯನ್ ಅತಿಥಿ ಗಾಂಧೀಜಿಯ ಹೊಸ ಶಿಷ್ಯ; ಪೂರಾ ಪ್ರಯೋಗ ಮಾಡಿ ನೋಡಿಬಿಡಬೇಕೆಂಬ ಉತ್ಸಾಹಿ.

'ಟೊಮೆಟೋ ಹಣ್ಣನ್ನು ಯಾವಾಗಲೂ ಸಿಪ್ಪೆ ಸಹಿತವಾಗಿಯೇ ತಿನ್ನಬೇಕು' ಎಂದ ನನ್ನ ಗಂಡ, ತೀರ್ಮಾನ ಕೊಡುವ ಹಾಗೆ.

'ಸಿಪ್ಪೆ ತುಂಬಾ ಒರಟಾಗಿರದಿದ್ದರೆ ನನ್ನದೇನೂ ತಕರಾರಿಲ್ಲ' ಎಂದೆ ನಾನು.

'ಮೈಗೆ ಬೇಕಾದ ಒರಟುತನಕ್ಕೆ ಸಿಪ್ಪೆ ಅಗತ್ಯ. ಅಲ್ಲದೆ ಭೇದಿಗೂ ಅನುಕೂಲ ಆಲೂಗಡ್ಡೆಯಲ್ಲೂ ಅಷ್ಟೆ. ಉಪಯುಕ್ತ ಲವಣಗಳೆಲ್ಲಾ ಸಿಪ್ಪೆಯ ಅಡಿಯಲ್ಲೇ ಇರುತ್ತವೆ ಅದಕ್ಕೇ ಬೇಯಿಸುವಾಗ ಸಿಪ್ಪೆ ಸಹಿತವಾಗೇ ಬೇಯಿಸಬೇಕು; ತಿನ್ನುವಾಗ ಸಿಪ್ಪೆಯನ್ನು ಕೂಡ ತಿನ್ನಬೇಕು' ಎಂದರು ಗಾಂಧೀಜೀ ನಡುವೆ ಬಾಯಿ ಹಾಕಿ. "ಬೇಯಿಸಿದರೆ ಪರವಾಯಿಲ್ಲ, ಸಿಪ್ಪೆ ತಿನ್ನಬಹುದು. ರುಚಿಯಾಗಿರುತ್ತದೆ" ಎಂದೆ ನಾನು.

'ಕೋಸುಗಡ್ಡೆಯ ಸಾರವೆಲ್ಲಾ ಇರುವುದು ಅದನ್ನು ಬೇಯಿಸಿದ ನೀರಿನಲ್ಲಿ ಬರೀ ಆ ನೀರೇ ಕುಡಿದು ಕೋಸುಗಡ್ಡೆಯನ್ನು ಕೂಡಾ ಬಿಸಾಡಿಬಿಡಬಹುದು' ಎಂದರು ಗಾಂಧೀಜೀ.

'ಆಲೂಗಡ್ಡೆ ಸಿಪ್ಪೆಯನ್ನು ಚೆನ್ನಾಗಿ ತೊಳೆದುಹಾಕಿ ಹುಳಿ ಮಾಡಿದರೆ ರುಚಿಯಾಗಿರಬಹುದಲ್ಲವೇ?' ಎಂತ ನನ್ನ ಕಡೆ ಆಶೆ ತುಂಬಿದ ಕಣ್ಣಿನಿಂದ ನೋಡಿದ ಅತಿಥಿ.

'ಉಪ್ಪಿಲ್ಲದೆ ಕೋಸುಗಡ್ಡೆ ನೀರು ಕುಡಿದು ನೋಡಿದ್ದಾಯಿತು. ಹೆನ್ರಿಯೇನೊ ತುಂಬಾ ಚೆನ್ನಾಗಿದೆ ಅಂತ ಒಂದು ದಬರಿಯಷ್ಟು ಕುಡಿದ. ಆಮೇಲೆ ಆಫೀಸಿಗೆ ಹೋಗದ ಹಾಗಾಗಿ ಹಾಸಿಗೆ ಹಿಡಿದ. ನನಗಂತೂ ಆಲೂಗಡ್ಡೆ ಸಿಪ್ಪೆ ಸೇರುವುದಿಲ್ಲ, ಅದರ ಸಾರೂ ಸೇರು ವುದಿಲ್ಲ' ಎಂದೆ ನಾನು.

'ಆಗಲೇ ತಿಂದು ನೋಡಿದೀಯೇನು?' ಗಾಂಧೀಜೀ ಕೇಳಿದರು.

'ಬೇಯಿಸಿದ ಆಲೂಗಡ್ಡೆ ಸಿಪ್ಪೆ ಸಹಿತವಾಗಿಯೇ ತಿಂದೆ, ನೈಗಾಗಲಿಲ್ಲ.'

'ನೈಗೆ ಅದರಿಂದ ಹೇಗೆ ಕೆಡುಕಾದೀತು?' ಎಂದರು ಗಾಂಧೀಜೀ ನಗುತ್ತ.

'ನಿಮಗೇನು ಗೊತ್ತು, ತಿಂದು ಅನುಭವಿಸಿದವಳು ನಾನು; ನಾ ಬಲ್ಲೆ. ನನಗಂತೂ ಅಂಥದು ಬೇಕಿಲ್ಲ.'

'ಇಂದಿನ ಜೀವನದಲ್ಲಿ ನಮ್ಮ ರುಚಿ ಕೂಡಾ ಕೆಟ್ಟುಹೋಗಿದೆ· ಸಿಪ್ಪೆ ಬಿಸುಟು, ಒಳ್ಳೆ ಆಹಾರವನ್ನೆ ತಿಪ್ಪೆಗೆಸೆಯುತ್ತಿದೇವೆ' ಎಂದರು ಅತಿಥಿ, ಆತುರವಾಗಿ.

'ನಿಜ ನಿಜ. ಸಹಜವಾಗಿ ಹೇಗೆ ಜೀವಿಸಬೇಕೋ ಅದನ್ನು ಬಿಟ್ಟು ನವೀನ ನಾಗರಿಕತೆಯ ನೂರು ರೋಗಗಳಿಗೆ ಗುರಿಯಾಗು ತ್ತಿದೇವೆ ನಾವು' ಎಂದರು ಗಾಂಧೀಜೀ.

'ಹಾಗಾದರೆ ನಾವು ಹೆಚ್ಚು ಸಹಜ ಸ್ವಭಾವದವರಾಗಿದ್ದಾಗ, ನಾವು ಸಿಪ್ಪೆ ಸಮೇತ ತಿನ್ನುತ್ತಿದ್ದೆವೇನು' ನಾ ಕೇಳಿದೆ ತೋರಿಕೆಯ ಸೌಮ್ಯತೆಯಿಂದ.

ನಮ್ಮ ಅತಿಥಿ ನನ್ನ ಕಡೆ ತುಸು ಕರುಣೆ ತಿರಸ್ಕಾರ ಬೆರೆತ ದೃಷ್ಟಿಯಲ್ಲಿ ನೋಡುತ್ತಾ 'ಖಂಡಿತವಾಗಿಯೂ' ಎಂದರು.

ನನ್ನನ್ನು ಚೆನ್ನಾಗಿ ಬಲ್ಲ ಗಾಂಧೀಜೀ ನಾನು ಮುಂದೆ ಮತ್ತಾವ ಪ್ರಶ್ನೆ ಹಾಕುತ್ತೇನೋ ಎಂಬ ನನ್ನ ಕಡೆಯೇ ನೋಡುತ್ತಿದ್ದರು.

"ಹಾಗಾದರೆ ಕೋತಿಗಳು ಸೇಬು, ಗೆಜ್ಜಲುಗಡ್ಡೆಗಳ ಸಿಪ್ಪೆ ಜಗಿದು ಉಗಿಯುತ್ತವೆಯಲ್ಲಾ ಏಕೆ?"

'ಹಾಗಲ್ಲ' ಎಂದರು ಅತಿಥಿ ಜೋರಾಗಿ ತಮ್ಮ ತಲೆಯ ಲ್ಲಾಡಿಸುತ್ತಾ.

'ಅದು ಹಾಗೇ ಅಲ್ಲವೆ ಗಾಂಧೀಜೀ? ಕೋತಿಗಳು ಎಂದೂ ಸಿಪ್ಪೆ ತಿನ್ನುವುದಿಲ್ಲವಲ್ಲವೆ? ನಾನು ನಡುವೆ ಬಾಯಿಹಾಕಿ ಕೇಳಿದೆ.

ಈ ಮೂಢ ನಂಬಿಕೆಯನ್ನಿಟ್ಟುಕೊಂಡಿದ್ದಕ್ಕಾಗಿ ಗಾಂಧೀಜಿ ಯಿಂದ ನನಗೆ ಚೆನ್ನಾಗಿ ಛೀಮಾರಿಯಾಗುವುದೆಂಬ ನಂಬಿಕೆಯಿಂದ ಅತಿಥಿಯು ಗಾಂಧೀಜಿಯ ಕಡೆ ನೋಡಿದರು.

'ಮಿಲ್ಲಿ ಹೇಳಿದ್ದು ಸರಿ' ಎಂದರು ಪಂಚಾಯತರು-ಗಾಂಧೀಜೀ.

ಸ್ವಲ್ಪ ಹೊತ್ತು ಮೌನ. ಆಮೇಲೆ ನಾನೇ ಹೇಳಿದೆ- ಹುಟ್ಟಿ ದಾಗ ಇದ್ದ ಹಾಗೇ ಇರುವ ಪ್ರಾಣಿಗಳು ಹಸೀ ಆಹಾರ ತಿನ್ನುತ್ತವೆ ಎಂದರೆ, ಅದರಿಂದ ಅವು ಅಡಿಗೆ ಮಾಡುವುದನ್ನು ಕಲಿತಿಲ್ಲವೆಂದು ಅರ್ಥವಾಗುತ್ತದೆಯೇ ವಿನಾ ಮತ್ತೇನೂ ಇಲ್ಲ. ಅದೇ ಅವಕ್ಕೆ ಬೇಯಿ ಸಿದ ಪದಾರ್ಥ ಕೊಟ್ಟು ನೋಡಿ: ಆನೆಗೆ ಕಡುಬು, ಹಂದಿಗಂತೂ ಏನಾ ದರೂ ಸರಿಯೆ, ಕೋತಿಗೂ ಅಷ್ಟೆ-ಸಂತೋಷವಾಗಿ ತಿನ್ನುತ್ತವೆ. ಆಮೇಲೆ ಏನಾಗುತ್ತದೆ? ಬೇಯಿಸಿದ ಆಹಾರ ತಿನ್ನಬಾರದೆಂದು ಕಲಿಸಿದ ಪ್ರಕೃತಿ ಇಲ್ಲೇಕೆ ತಪ್ಪಿದಳು ಮತ್ತೆ?

ಯಾರೂ ಮಾತಾಡಲಿಲ್ಲ. ಗಾಂಧೀಜೀ ಮಾತ್ರ ಮೃದುವಾಗಿ ನಗುತ್ತಿದ್ದರು. ಅತಿಥಿ ನನ್ನ ಕಡೆ ನೋಡುತ್ತಿದ್ದರು.

ಗಾಂಧೀಜಿಗೆ ಇಂಥ ಚರ್ಚೆ ತುಂಬ ಪ್ರಿಯವಾಗಿತ್ತೆಂದು ಎಷ್ಟೋಸಲ ನನಗೆ ಅನಿಸಿದೆ ಇದರಲ್ಲಿ ಹುರುಳಿತ್ತು ಎಂದಲ್ಲ; ಆ ವಿಷಯದ ಬಗ್ಗೆ ಎಷ್ಟು ತರದ ಅಭಿಪ್ರಾಯವಿದೆ ಎಂದು ಗೊತ್ತಾಗು

ತ್ತಿತ್ತು. ಅಲ್ಲದೆ ನನ್ನ ಮಾತು ಒಪ್ಪಿಗೆಯಾಗದಿದ್ದರೂ ನಾನು ಜೋರಾಗಿ ಮಾತಾಡುವುದನ್ನು ಕೇಳುವುದು ಅವರಿಗೆ ಇಷ್ಟ. ಒಂದು ಸಲ ಕೇಳಿದರು: 'ಯಾರಾದರೂ ಸರಿಯೆ, ಅವರು ಹೇಳುವುದು ತೀರಾ ಸರಿ ಎಂತ ನಿನಗನಿಸಿದೆಯೆ ?'

'ಊಹುಂ, ಇಲ್ಲ ಹಾಗಾಗಬೇಕೆಂದರೆ ಅವರು ದೇವರಷ್ಟು ಬುದ್ಧಿವಂತರಾಗಿರಬೇಕು : ಅಷ್ಟು ಬುದ್ಧಿ ಯಾರಿಗೆ ಇದೆ ?'

'ಅಂದರೆ ನೀನು ಯಾರ ಮಾತಿಗೂ ಒಪ್ಪುವುದಿಲ್ಲ ಎನ್ನು, ಅವರ ಕಣ್ಣಿನಲ್ಲಿ ನಗೆ ಮಿನುಗುತ್ತಿತ್ತು.

'ಇಲ್ಲ ನನ್ನ ಬುದ್ಧಿಯನ್ನು ಯಾರ ಕಾಲ ಕೆಳಗೂ ಹಾಗೆ ಹಾಸಲಾರೆ ?' ಎಂದೆ.

'ಹಾಗಾದರೆ ಯಾರನ್ನೂ ಗುರುವೆನ್ನುವುದಿಲ್ಲ' ನಗುತ್ತಾ ಕೇಳಿದರು ಗಾಂಧೀಜೀ.

'ಹಾಗೆಂದರೆ ಅಹಂಕಾರವಾದೀತು ಆದರೂ ನಾನು ಸತ್ಯವನ್ನು ಹುಡುಕುತ್ತಿದೇನೆ ಸತ್ಯ ಯಾರೊಬ್ಬರ ಸ್ವತ್ತೂ ಅಲ್ಲ.

'ನಿನಗೆಂದಾದರೂ ಸತ್ಯ ಕಂಡೀತೆಂದು ಅನಿಸುತ್ತಿದೆಯೇನು ?

'ಇಲ್ಲ. ಸತ್ಯ ನನಗೆ ಕಂಡೀತೆನಿಸಿದರೆ ಅದು ಸತ್ಯವಲ್ಲವೆಂದೇ ಅರ್ಥ. ನನ್ನ ಮಿದುಳಿಗೆ ಅನಂತವಾದುದನ್ನು ಅರಿತುಕೊಳ್ಳುವ ಶಕ್ತಿಯೇ ಇಲ್ಲ ಇನ್ನು ಸತ್ಯವನ್ನೇನು ಕಂಡೇನು ?'

'ಹಾಗಾದರೆ ನಿನಗೆ ಶಾಂತಿಯೇ ಇಲ್ಲ' ಎಂದರು ಗಾಂಧೀಜೀ. ಅವರ ಮಾತಿನಲ್ಲಿ ನೋವಿತ್ತು.

o o o o

ಇನ್ನೊಂದು ಸಲ ಗಾಂಧೀಜೀ ಮಕ್ಕಳ ಬೆಳವಣಿಗೆ, ಸ್ವಾಭಾವಿಕ ಜೀವನದ ಬಗ್ಗೆ ಮಾತಾಡುತ್ತಿದ್ದಾಗ ಕೇಳಿದೆ: 'ಸ್ವಾಭಾವಿಕ ಎಂದರೇನು ? ನನಗಂತೂ ಅರ್ಥವಾಗಿಲ್ಲ.'

'ಅರ್ಥವಾಗದೆ ಏನು ? ಪ್ರಕೃತಿ ನಮ್ಮ ಎದೆಯ ಭಾವಗಳ

ಮೂಲಕ ಮಾತಾಡುತ್ತಾಳೆ. ಕೇಳಲು ನಮಗೆ ಕಿವಿ ಇರಬೇಕು:' ಎಂದರು ಗಾಂಧೀಜೀ.

'ನಾನು ಒಪ್ಪುವುದಿಲ್ಲ, ಅದು ಸುಳ್ಳೆಂತ ನನ್ನ ಬುದ್ಧಿ ಹೇಳುತ್ತಾ ಇತ್ತು. ಈಗ ನನ್ನ ಅನುಭವ ಅದನ್ನೇ ನಿಜವೆಂದು ತೋರಿಡೆ. ನಮ್ಮ ಇಡೀ ಶೈಶವ, ಯೌವ್ವನ, ಎಲ್ಲಾ ನಮ್ಮ ಸಹಜ ಬುದ್ಧಿಯನ್ನು ಮೀರಿ ಬೆಳೆವ ಅಭ್ಯಾಸ, ಸಾಧನೆ.'

'ಅಲ್ಲೇ ನೀನು ತಪ್ಪುತ್ತಿರುವುದು.' ಎಂದರು ಗಾಂಧೀಜೀ

ಅವರ ಪಾಡಿಗೆ ಅವರನ್ನು ಬೆಳೆಯಗೊಟ್ಟರೆ, ಮಕ್ಕಳು ಯಾವ ಸಮಾಜಕ್ಕೂ ತಕ್ಕ ಸದಸ್ಯರಾಗಲಾರರು ; ಅವರ ಸಹಜ ಕರ್ಮ ಗಳನ್ನು ತಿದ್ದಿ ಬೆಳೆಸಬೇಕು ಶಿಕ್ಷಣ, ಪ್ರೋತ್ಸಾಹ ಕೊಡದೆ ಅವರು ಸರಿಯಾದ ದಾರಿಯಲ್ಲಿ ನಡೆಯಲಾರರು.'

'ಖಂಡಿತ ನಡೆಯುತ್ತಾರೆ. ಸರಿಯಾದ ದಾರಿಯಲ್ಲಿ ನಡೆಯು ವುದೇ ಮನುಷ್ಯನಿಗೆ ಸ್ವಾಭಾವಿಕ' ಗಾಂಧೀಜೀ ವಾದಿಸಿದರು.

"ನಿಮ್ಮ ಮಾತಿನ ಅರ್ಥದಲ್ಲಿ ಅದು ಸ್ವಾಭಾವಿಕವೆಂದು ನನಗನಿ ಸುವುದಿಲ್ಲ. ಮನುಷ್ಯ ಆ ರೀತಿ ಮಾಡಬಹುದಾದ್ದು ಸ್ವಾಭಾವಿಕವೇ ಆಗಲಿ, ಮಕ್ಕಳು ಮಂಗಗಳಿದ್ದಹಾಗೆ. ಸರಿಯಾಗಿ ತರಪೇತು ಮಾಡದೆ ಹೋದರೆ ಎಲ್ಲಾ ಕುಲಗೆಡಿಸಿಬಿಡುತ್ತಾರೆ. ಮೊನ್ನೆತಾನೆ ಬ್ಲೋಯರ್‌ಫಾರಂನಿಂದ ಮಂಗ ಕದ್ದುಕೊಂಡುಹೋದ ಮಗುವಿನ ಕಥೆ ಕೇಳಿದೀರಲ್ಲ ಆ ಮಗು ಮಂಗನಹಾಗೇ ನಡೆಯುತ್ತಿತ್ತು. ಕಲಿಸದೆ ಮಕ್ಕಳು ಮಾತನಾಡಲಾರವು ; ಸುಮ್ಮನೆ ಮೂಕಸನ್ನೆ, ಅರ್ಥವಿಲ್ಲದ ಸದ್ದು ಮಾಡುತ್ತವೆ."

"ನೀನು ತುಂಬಾ ಉತ್ಪ್ರೇಕ್ಷೆ ಮಾಡುತ್ತೀ. ನೀನು ಹೇಳುವುದ ನ್ನೆಲ್ಲಾ ನೀನೇ ನಂಬುವುದಿಲ್ಲ" ಎಂದರು ಗಾಂಧೀಜೀ.

"ನನ್ನ ಮಾತು ತರ್ಕಸಿದ್ಧವಾಗಿದೆಯೆಂತಲೇ ನಾನಾಡುತ್ತಿರು ವುದು ನಿಜ. ಮನುಷ್ಯರಿಗೆ ಸಹಜವಾದ ಭಾವಗಳೆಲ್ಲವೂ ನನ್ನ ಮಗು

ವಿಗೆ ಇವೆ. ಆದರೂ ಭಾವ ಹೊರಬೀಳುವ ರೀತಿಯನ್ನು ನಾನದಕ್ಕೆ ಕಲಿಸಬೇಕು. ಶೈಶವಾವಸ್ಥೆಯಲ್ಲಿ ಮಗುವನ್ನು ಸಾಕುವ ಪ್ರತಿಯೊಬ್ಬ ತಾಯಿಗೂ ದಾದಿಗೂ ತಾನು ಮಗುವಿನ ಹುಟ್ಟಿನಿಂದ್ಲೇ ಬಿಡಿಸುತ್ತಿ ದೇನೆ ಎಂಬುದು ? ಒಂದೇ ಮಾತು ನೋಡಿ : ಏನು ಸಿಕ್ಕಿದರೂ ಮಗು ಅದನ್ನೆಲ್ಲಾ ಬಾಯಿಗೆ ಹಾಕಿ ಕೊಳ್ಳುತ್ತದೆ. ಹಾಗೆ ಹಾಕಿಕೊಂಡದ್ದು ವಿಷವಾದರೆ ಸತ್ತೇಹೊಗುತ್ತದೆ. ವಿಷದ ಹಣ್ಣು, ಇದ್ದಲು ಇದ ನ್ನೆಲ್ಲಾ ತಿನ್ನಬೇಡವೆಂತ ಪ್ರಕೃತಿ ಕಲಿಸುವುದಿಲ್ಲ. ಜವನು......."

"ಸ್ವಾಭಾವಿಕ ಜೀವನದಲ್ಲಿ ಮಗುವಿನ ಕೈಗೆ ಇದ್ದಲು ಸಿಕ್ಕು ವುದೇ ಇಲ್ಲ" ಎಂದರು ಗಾಂಧೀಜೀ ಸಾವುಕ್ತ.

"ಇದ್ದಲಿಲ್ಲವಾದರೆ ಹೋಗಲಿ, ವಿಷವಂತೂ ಸುಲಭವಾಗಿ ಸಿಗುತ್ತದಲ್ಲ" ನಾನು ಬೇಗ ಉತ್ತರಕೊಟ್ಟೆ

"ನಿನ್ನ ತರ್ಕವೇ ಸುಳ್ಳು. ನಿನ್ನ ಮಾತು ನಿಜವಾದರೆ ನಾವು ಮನುಷ್ಯರಾಗಿ ಉಳಿಯುತ್ತಲೇ ಇರಲಿಲ್ಲ ಪ್ರಕೃತಿಯೇ ನಮ್ಮನ್ನು ಸರಿಯಾದ ದಾರಿಯಲ್ಲಿ ನಡೆಸಿ ಕಾಪಾಡುತ್ತಾಳೆ"

"ಹೂಂ. ಮನುಷ್ಯನ ಮನಸ್ಸಿನ ಮೂಲಕ ಪ್ರಕೃತಿ ನಡೆಸು ತ್ತಾಳೆಯೋ ಮನುಷ್ಯನ ಮನಸ್ಸೂ ಪ್ರಕೃತಿಯೇ ತಾನೆ. ಇದು ಪ್ರಕೃತಿ, ಇದು ಅಲ್ಲ ಎಂತ ಅಡ್ಡಗೆರೆ ಎಳೆಯಲು ಸಾಧ್ಯವಿದೆಯೆ ?"

"ಕೃಪಾಪೂರ್ಣವಾದ ಪ್ರಕೃತಿ ಕಾರ್ಯಕ್ಕೂ, ಮಾನವನ ಮನಸ್ಸು ಮಾಡುವ ಕೆಲಸಕ್ಕೂ ನಡುವೆ ಒಂದು ಅಡ್ಡಗೆರೆ ಇದ್ದೇ ಇದೆ" ಎಂದರು ಗಾಂಧೀಜೀ ಮಾತು ಮುಗಿಸಿ.

○ ○ ○ ○

ನಾಲ್ಕಾರು ವಾರ ಕಳೆಯಿತು ಒಂದು ದಿನ ಮತ್ತೆ ಮಕ್ಕಳ ಶಿಕ್ಷಣದ ವಿಷಯ ಮಾತಾಡುತ್ತಿದ್ದೆವು ಮೂರು ಹೊತ್ತೂ ಆ ವಿಷಯವೇ. ಕಾರಣ-ನನ್ನ ಮಗು, ಅದರ ಶೀಘ್ರ ಬೆಳವಣಿಗೆ. ಮಗುವಿಗೆ ಇಷ್ಟ ಬಂದಂತೆ ಬಿಡುವ ಪ್ರಯೋಗ ನನಗಷ್ಟು ತೃಪ್ತಿಕರ

ವಾಗಿ ಕಂಡುಬರಲಿಲ್ಲ. ನಾನವನಿಗೆ ಕುರ್ಚಿಯಲ್ಲಿ ಕೂತು ಚಮಚಾ ದಿಂದ ತಿನ್ನುವುದನ್ನು ಕಲಿಸುತ್ತಿದ್ದೆ. ಒಂದುದಿನ ಅವನು ತಟ್ಟೆ ಯನ್ನು ತಲೆಕೆಳಗುಮಾಡಿ, ಒಂದು ಕೈಯಲ್ಲಿ ಹಾಲು ಬ್ರೆಡ್ಡು ತಿನ್ನುತ್ತಾ, ಚಮಚದಿಂದ ಹಾಲನ್ನು ಹೊಡೆದು ಮೇಜಿನ ಮೇಲೆಲ್ಲಾ ಹೊಲಸು ಮಾಡುತ್ತಿದ್ದ. ನಾನವನನ್ನು ತಿದ್ದಲು ಹೋದೆ; ಅವನು ಕೇಳಲಿಲ್ಲ ಗಾಂಧೀಜಿಯೂ ಅಲ್ಲೇ ಇದ್ದರು.

'ನೋಡಿದಿರಾ ಇದು ಇವನ ಹುಟ್ಟುಬುದ್ಧಿ. ಇವನು ನಮ್ಮ ಜನರ ಜೊತೆಯಲ್ಲಿರಬೇಕು ಎಂದರೆ ಅವರ ಹಾಗೆ ಉಂಡು ಉಡು ವುದನ್ನು ಇವನಿಗೆ ಕಲಿಸಬೇಕು. ಅದಕ್ಕೇ ಈ ಹುಟ್ಟುಬುದ್ಧಿಯನ್ನು ಮರೆಸಬೇಕು' ಎಂದೆ

'ಹಸಿವಾದಾಗ ಊಟ ಮಾಡುವುದು ಹುಟ್ಟುಬುದ್ಧಿ; ಅವನಿಗೆ ಬೇಡವಾದಾಗ ಊಟ ಮಾಡಲು ಬಲವಂತ ಮಾಡಬೇಡ ಎಂದರು ಗಾಂಧೀಜೀ.

'ಅವನಿಗೆ ಊಟ ಬೇಡವೆಂತಲ್ಲ; ಸಧ್ಯಕ್ಕೆ ಬೇಡ ಆದರೆ ನೆಲದ ಮೇಲೆ ಚೆಲ್ಲಿಬಿಟ್ಟರೆ, ಮತ್ತೆ ಅದು ಉಣ್ಣಲು ಬಾರದು ಎನ್ನುವುದು ಅವನಿಗೆ ಗೊತ್ತಿಲ್ಲ. ನೆಲದ ಮೇಲೆ ಬಿದ್ದುದನ್ನು ಆರಿಸಿಕೊಂಡು ತಿನ್ನುವುದಕ್ಕೆ ಹೇಗೆ ತಾನೆ ಬಿಡಲಿ?'

'ಹೇಗೆ ಊಟಮಾಡಬೇಕು ಎನ್ನುವುದು ಬರೀ ಸಂಪ್ರದಾಯ. ಕೈಯಿಂದ ಊಟ ಮಾಡವುದು ಮಗುವಿನ ಹುಟ್ಟುಬುದ್ಧಿ. ಹಾಗೆ ಮಾಡಬಾರದೆಂದು ನೀನೇನೋ ಕಲಿಸಬಹುದು. ಆದರೂ ಚಮಚ, ಛರ್ಜ ಹೋದ ಗಳಿಗೆಯೇ ಮತ್ತೆ ಅನ್ನಕ್ಕೆ ಕೈಹಾಕುತ್ತದೆ ಮಗು. ಅಲ್ಲವೇ?'

'ಅದೆಲ್ಲಾ ಸಂಪ್ರದಾಯ, ಕುಲಾಚಾರ ಸರಿಯೆ. ಕಾಡಿ ನಲ್ಲಿದ್ದರೆ ನಾವೂ ಪಶುಗಳ ಹಾಗೆ ಇರುತ್ತೇವೆ. ಬಲ್ಲೆ, ಅಷ್ಟೇ ಅಲ್ಲ, ಅಲ್ಲಿ ಹಾಗಿರುವುದೇ ಸರಿ. ಆದರೆ ಕಾಡಿನಲ್ಲಿದ್ದಾಗ ಹೇಗಿರುತ್ತಾನೋ

ಹಾಗೇ ಮನುಷ್ಯ ನಾಗರಿಕ ಸಮಾಜದಲ್ಲಿರುವಾಗಲೂ ಇರಬೇಕೆಂಬುದನ್ನು ನಾನು ಒಪ್ಪುವುದಿಲ್ಲ'

'ಕಾಡಿನಲ್ಲಾದರೂ ಆ ಹುಟ್ಟುಗುಣಗಳು ಅವನಿಗೆ ಸರಿ ಎಂದು ಒಪ್ಪುತ್ತೀ ತಾನೆ?'

'ಹೂ, ಒಪ್ಪುತ್ತೇನೆ. ಕಾಡಿನಲ್ಲಿರುವವರೆಗೆ ಹಾಗಿರುವುದು ಸರಿ. ಕಾಡು ಬಿಟ್ಟು ಬಂದರೆ ಅದು ಸರಿಯಲ್ಲ, ಅದು ತಪ್ಪು.'

'ಹಾಗಾದಾಗ ತಪ್ಪು ಹುಟ್ಟುಬುದ್ಧಿಯದಲ್ಲ, ಸುತ್ತಲ ಸನ್ನಿವೇಶದ್ದು. ಹಿಂದುಸ್ಥಾನದಲ್ಲಿರುವ ಎಷ್ಟೋ ಜನ ಮಾಡುತ್ತಿರುವ ತಪ್ಪೂ ಇದೇ; ಅವರ ಹುಟ್ಟಿನ ರೀತಿ ಹಳ್ಳಿಗಳಿಗೆ ಸರಿಹೋಗುವಂಥದು, ಪಟ್ಟಣಕ್ಕಲ್ಲ.'

'ಹಾಗಾದರೆ ಹುಟ್ಟುಬುದ್ಧಿಯೇ ಸರಿಯಾದ ಗುರು ಎನ್ನುತ್ತೀರೇನು?' ನಾ ಕೇಳಿದೆ.

'ಮಾತಿನ ನಿಟ್ಟೇ ಬದಲಾಯಿಸುತ್ತಿದೆ. ನಾವು ಮಾತಾಡುತ್ತಿದ್ದುದು ಮಕ್ಕಳ ತರಪೇತಿನ ವಿಷಯ' ಗಾಂಧೀಜೀ ಉತ್ತರ ಕೊಟ್ಟರು.

'ನಿಜ. ನೀವು ಮಕ್ಕಳು ಹುಟ್ಟುಬುದ್ಧಿಯನ್ನೇ ನೆಚ್ಚಿ ಬೆಳೆಯಬೇಕು. ಶಿಕ್ಷಣ ಕೊಟ್ಟರೆ ಕೆಟ್ಟುಹೋಗುತ್ತಾರೆ ಎನ್ನುತ್ತೀರಲ್ಲಾ?'

'ಅದಲ್ಲ ನನ್ನ ಮಾತಿನ ಅರ್ಥ, ನನ್ನ ವಾದ ಇಷ್ಟೆ: ಮಗುವಿನಲ್ಲಿ ದೇವರ ಅಂಶವಿದೆ; ಸಮಾಜ ಅದಕ್ಕೆ ಮುಸುಕುಹಾಕಿ ಎಷ್ಟೋ ಸಲ ಕೊಂದೇ ಬಿಡುತ್ತದೆ.'

ಆದರೆ ಮಗುವಿಗೆ ಮನಬಂದ ಹಾಗೆ ಆಡಲು ಅವಕಾಶ ಕೊಡದಿದ್ದ ಮಾತ್ರಕ್ಕೆ ಆ ದೇವರ ಅಂಶ ಸಾಯದು. ಚಮಚದಿಂದ ಊಟ ಮಾಡಿದರೆ, ಸಾಬೂನು ಹಾಕಿಕೊಂಡು ಮೈತೊಳೆದುಕೊಂಡರೆ, ಉಗುರು ಕತ್ತರಿಸಿಕೊಳ್ಳಲು ಕಲಿತರೆ, ಒಳಗಿರುವ

ದೇವರನ್ನು ಮರೆಯುತ್ತಾನೆಯೇ? ಮಹಾತ್ಮರಾದವರೆಲ್ಲಾ ಹಿಮಾಲಯದಲ್ಲಿ ಹುಟ್ಟಿದವರಲ್ಲ, ನಾಗರಿಕ ಸಮಾಜದಲ್ಲೂ ಹುಟ್ಟಿದಾರೆ.'

' ನಾಗರಿಕ ಸಮಾಜದಲ್ಲಿ ಹುಟ್ಟಿ ಮಹಾತ್ಮರಾದ್ದಲ್ಲ, ಅವರ ಹಿರಿಮೆ, ನಾಗರಿಕ ಸಮಾಜದಲ್ಲಿ ಹುಟ್ಟಿಯೂ ಕೂಡಾ ಅವರು ಮಹಾತ್ಮರಾದರೆಂಬುದು' ಎಂದರು ಗಾಂಧೀಜೀ.

' ಪ್ರಕೃತಿಗೇ ಬಿಟ್ಟುಬಿಟ್ಟರೆ ಮಕ್ಕಳು ತೋಟದಲ್ಲಿ ಹೂ ಬೆಳೆದ ಹಾಗೆ ನಿಷ್ಕಳಂಕವಾಗಿ ಬೆಳೆದಾರೇನು? ನನಗಂತೂ ಹಾಗನಿಸುವುದಿಲ್ಲ. ಒಳ್ಳೆ ಹೂ ಕೂಡ ಮಾಲಿಯ ಕೆಲಸದ ಫಲ. ಸಾಕಿ ಬೆಳೆಸಿದರೆ ಚೆನ್ನಾಗಿ ಬೆಳೆಯುತ್ತವೆ, ಮೊದಲಿಗಿಂತ ಎಷ್ಟೋ ವ್ಯತ್ಯಾಸವಾಗುತ್ತದೆ.'

' ನಿಜ, ಬೇಕಾದಷ್ಟು ಬದಲಾಗುತ್ತದೆ. ಕಣ್ಣು ಸೆಳೆವ ಬಣ್ಣ, ರೂಪು ಬರುತ್ತದೆ. ಆದರೆ ಅದರ ಆತ್ಮ, ಪರಿಮಳ ಮಾತ್ರ ಅಷ್ಟು ಹೊತ್ತಿಗೆ ಏನೂ ಉಳಿದಿರುವುದಿಲ್ಲ.'

o o o o

ನನ್ನ ಗೆಳತಿಯೊಬ್ಬಳಿಗೆ ಯಾವುದೋ ಒಂದು ಕೆಲಸ ಕಲಿಯಲು ತುಂಬಾ ಆಶೆಯಿತ್ತು. ಅದಕ್ಕಾಗಿ ಬಲು ಕಷ್ಟಪಡುತ್ತಿದ್ದಳು. ದುಡ್ಡಿಲ್ಲದೆ ತುಂಬಾ ತೊಂದರೆಯಾಗಿತ್ತು. ಗಾಂಧೀಜಿಗೂ ಅವಳ ಪರಿಚಯವಿತ್ತು. ಒಂದು ದಿನ ಅವರ ಹತ್ತಿರ ಮಾತನಾಡುವಾಗ ಅವಳ ವಿಚಾರವಾಗಿ 'ನನಗೆ ತುಂಬಾ ಯೋಚನೆಯಾಗಿದೆ. ನನ್ನ ಹತ್ತಿರ ಸ್ವಲ್ಪ ದುಡ್ಡಿದ್ದಿದ್ದರೆ ಅವಳಿಗೆ ಸಾಲ ಕೊಡಬಹುದಾಗಿತ್ತು. ಅವಳಿಗೆ ಕಾಲಿಗೆ ಬೂಟಿಲ್ಲ, ಕಾಲುಚೀಲವಿಲ್ಲ; ತುಂಬಾ ಅವಸ್ಥೆ. ಇದೊಂದು ವರ್ಷ ಹೇಗಾದರೂ ಕಳೆದರೆ ಆಮೇಲೆ ಪರವಾಯಿಲ್ಲ, ಹೇಗಾದರೂ ಮಾಡುತ್ತಾಳೆ. ಈಗಿನದೇ ತುಂಬಾ ಕಷ್ಟ' ಎಂದೆ.

' ಅವಳ ವಿಚಾರವಾಗಿ ಅಷ್ಟು ಯೋಚನೆ ಹಚ್ಚಿಕೊಳ್ಳಬೇಡ.

ತುಂಬಾ ಒಳ್ಳೇ ಹುಡುಗಿ; ಇಂಥ ಕಷ್ಟಕ್ಕೆಲ್ಲಾ ಸೋಲುವುದಿಲ್ಲ. ಹೇಗೋ ಪಾರಾಗುತ್ತಾಳೆ' ಎಂದರು.

ಇದಾದ ಸ್ವಲ್ಪ ದಿನದ ಮೇಲೆ ನನ್ನ ಗೆಳತಿಯನ್ನೊಂದು ದಿನ ನೋಡಿದೆ! ಅವಳು ಹೇಳಿದಳು-ಗಾಂಧೀಜೀ ಗೆಳೆತನದ ಕಾಣಿಕೆ ಯೆಂದು ಅವಳಿಗೆ ಎರಡು ಪೌಂಡು ಕಳಿಸಿದ್ದರಂತೆ. ಈ ಮಾತು ಕೇಳಿ ಅವಳಿಗಾದಷ್ಟೇ ನನಗೂ ಆಶ್ಚರ್ಯವಾಯಿತು. ಅಂತೂ ನನ್ನ ಗೆಳತಿಗೆ ಬೂಟು, ಕಾಲುಚೀಲ ಸಿಕ್ಕಿ ನಮ್ಮೆಲ್ಲರಿಗೂ ಸಮಾಧಾನ ವಾಯಿತು. ಆದರೂ ಗಾಂಧೀಜೀ ಮಾತ್ರ ಈ ವಿಷಯವಾಗಿ ಎಂದೂ ನನ್ನ ಮುಂದೆ ಒಂದು ಮಾತೂ ಹೇಳಲಿಲ್ಲ.

೦ ೦ ೦ ೦

ಕೆಲವು ವಸ್ತುಗಳಿಗೆ ನಾವೆಷ್ಟು ಗುಲಾಮರಾಗಿ ಹೋಗುತ್ತೇವೆ ಎಂಬುದರ ಬಗ್ಗೆ ಗಾಂಧೀಜೀ ಮಾತಾಡುತ್ತಿದ್ದರು. ನಾ ಹೇಳಿದೆ:

"ಜನರನ್ನು ಈ ದಾಸ್ಯದಿಂದ ತಪ್ಪಿಸುವುದು ಸಾಧ್ಯವೇ ಇಲ್ಲ ವೆಂದು ನೀವು ಹೇಳುವುದನ್ನು ನಾನೊಪ್ಪುವುದಿಲ್ಲ. ಈ ಗುಲಾಮ ಗಿರಿ ತಪ್ಪಿಸಬಹುದು. ಅಷ್ಟೆ ಅಲ್ಲ; ಇದರಿಂದ ಅವರಿಗೂ ಹೆಚ್ಚೇನೂ ನೋವಾಗದು."

"ಹಾಗಾದರೆ ಅಂಥ ವಸ್ತುಗಳನ್ನಿಟ್ಟುಕೊಳ್ಳಲು ಅವರು ಅಷ್ಟು ಹೋರಾಡಲೇಕೆ?" ಎಂದು ಕೇಳಿದರು ಗಾಂಧೀಜೀ.

"ಕೆಲವು ಜನರಿಗೆ ಇಂಥ ವಸ್ತುಗಳನ್ನಿಟ್ಟುಕೊಂಡು ಕಾಪಾಡು ವುದೂ ವಿಚಿತ್ರವಾಗಿಯೇ ಕಂಡರೂ ಒಂದು ಬಗೆಯ ಶಿಸ್ತು. ವಂಶದ ಆಸ್ತಿ ಎಂತ, ಗೆಳೆಯರ ಪ್ರೀತಿಯ ಕಾಣಿಕೆ ಎಂತ, ಕೆಲವು ವಸ್ತುಗಳು ಬಂದಿರುತ್ತವೆ. ಅವನ್ನು ಕಾಪಾಡುವುದು ತಮ್ಮ ಕರ್ತವ್ಯವೆಂದೇ ತಿಳಿದುಕೊಳ್ಳುತ್ತಾರೆ ಆ ಜನ."

"ನಾನು ಹೇಳಿದ್ದೂ ಅದೇ. ಯಾವುದನ್ನೋ ಕರ್ತವ್ಯವೆಂದು ಕೊಂಡು ತಮ್ಮ ಬದುಕು ಕೆಡಿಸಿಕೊಳ್ಳುತ್ತಾರೆ. ಕಟ್ಟಿಕೊಂಡು

ಒದ್ದಾಡುವುದಕ್ಕಿಂತ ಸುಮ್ಮನೆ ಬಿಟ್ಟುಬಿಡಬಾರದೆ' ಎಂತ ಸವಾಲು ಹಾಕಿದರು ಗಾಂಧೀಜೀ.

"ಎಷ್ಟೋ ಜನ ಇಂಥ ಆಸ್ತಿ ಇಟ್ಟುಕೊಂಡು ಸುಖವಾಗಿದಾರೆ; ನಾ ನೋಡಿದೇನೆ ಬೇಕೆಂದರೆ ನೊಂದುಕೊಳ್ಳದೆಯೆ ಅವರು ಅದ ನ್ನೆಲ್ಲಾ ಬಿಟ್ಟು ಬಿಡಬಲ್ಲರು. ಇನ್ನು ಕೆಲವರಿದಾರೆ; ಇರುವುದೆಲ್ಲಾ ಕೆಲಸಕ್ಕೆ ಬಾರದ ನಾಲ್ಕು ಸಾಮಾನು. ಆದರೂ ಎಷ್ಟು ಜಂಭ! ಇದಕ್ಕಾಗಿ ತಮ್ಮ ಆತ್ಮವನ್ನೇ ಮಾರಿಕೊಳ್ಳುತ್ತಾರೆ. ಅಂಥವರನ್ನೂ ಕಂಡಿದೇನೆ. ಇದಕ್ಕೆ ಪರೀಕ್ಷೆ, ಎಷ್ಟಿದೆ ಎಂಬುದಲ್ಲ; ಅದಕ್ಕೆ ನಾವೆಷ್ಟು ಬೆಲೆ ಕೊಡುತ್ತೇವೆ ಎಂಬುದು. ಅಲ್ಲವೆ?" ನಾನು ಪ್ರಶ್ನೆ ಹಾಕಿದೆ.

"ನೀನು ಹೇಳುವುದು ನಿಜ. ನಮ್ಮಲ್ಲಿ ಇಂಥದೇ ಒಂದು ಕಥೆ ಇದೆ. ಒಬ್ಬ ದೊರೆ ಇದ್ದ. ಒಂದು ದಿನ ಒಬ್ಬ ಸನ್ಯಾಸಿ ಬಂದ ಈ ದೊರೆಯ ಹತ್ತಿರಕ್ಕೆ. ಸನ್ಯಾಸಿಯ ಹತ್ತಿರ ಇದ್ದುದೆಲ್ಲಾ ಅವನ ಲಂಗೋಟಿಯೊಂದೇ. ದೊರೆಗೆ ಈ ಸನ್ಯಾಸಿಯ ವೈರಾಗ್ಯವನ್ನು ಪರೀಕ್ಷಿಸಬೇಕೆಂದು ಆಸೆಯಾಯಿತು. ತನ್ನ ದಿವ್ಯ ಶಕ್ತಿಯ ಬಲ ದಿಂದ ಅರಮನೆಗೇ ಬೆಂಕಿ ಹತ್ತಿಸಿ ಬಿಟ್ಟ ಅರಸ. ಅರಮನೆಯೆಲ್ಲಾ ಸುಟ್ಟು ಹೋಯಿತು; ಸನ್ಯಾಸಿಯ ಲಂಗೋಟಿ ಕೂಡ. ತನ್ನ ಲಂಗೋಟಿ ಹೋದದ್ದಕ್ಕೆ ಸನ್ಯಾಸಿಗೆ ಹೇಳಲಾರದಷ್ಟು ವ್ಯಥೆಯಾ ಯಿತು. ಆಗ ದೊರೆ ಹೇಳಿದ: "ನಿನ್ನ ಹತ್ತಿರ ಇದ್ದುದೆಲ್ಲಾ ಒಂದು ಲಂಗೋಟಿ. ಬೇಕೆಂದರೆ ಇನ್ನೊಂದು ತರಬಹುದು. ನನ್ನ ಸುಂದ ರವಾದ ಅರಮನೆ, ಅದರಲ್ಲಿದ್ದ ಅಮೂಲ್ಯ ವಸ್ತುಗಳೆಲ್ಲಾ ಸುಟ್ಟು ಹೋದವು. ಎಷ್ಟು ಕಷ್ಟಪಟ್ಟರೂ ಇವು ಹಿಂದಕ್ಕೆ ಬರಲು ಸಾಧ್ಯವೆ? ಒಂದು ಲಂಗೋಟಿಗಿಷ್ಟು ವ್ಯಥೆಯೆ ನಿನಗೆ? ಇದೇನೆ ನಿನ್ನ ವೈರಾಗ್ಯ?" —ಸನ್ಯಾಸಿ ನಾಚಿ ನೀರಾಗಿ ಹೋದ

೧೧

ದಕ್ಷಿಣ ಆಫ್ರಿಕಾದಲ್ಲಿ ಗಾಂಧೀಜೀ ಎಷ್ಟೋ ಪ್ರಯೋಗ ಮಾಡಿದರು; ಎಷ್ಟೋ ನಿರಾಶೆಗಳೂ ಆದವು. ಆದರೆ ಎಲ್ಲಕ್ಕಿಂತ

ದೊಡ್ಡ ನಿರಾಶೆ, ದಕ್ಷಿಣ ಆಫ್ರಿಕಾದಲ್ಲಿ ಒಂದು 'ಶುಶ್ರೂಷಾಲಯ' ಸ್ಥಾಪಿಸಲಾಗಡಿದ್ದುದು. ಅದರ ಬಗ್ಗೆ ಎಷ್ಟೋ ಆಸೆ ಇಟ್ಟುಕೊಂಡಿದ್ದರು. ರೋಗಿಗಳಿಗೆ ಶುಶ್ರೂಷೆ ಮಾಡುವ ಪ್ರೇಮ ಗಾಂಧೀಜೀಗೆ ಹುಟ್ಟುಗುಣ. ಆರೋಗ್ಯದ ಮುಖ್ಯ ಸೂತ್ರಗಳು ಅವರಿಗೆ ಅಭ್ಯಾಸವಿಲ್ಲದೆಯೆ ಗೊತ್ತಾಗಿದ್ದವು. ಇದೇ ಗುಣಗಳನ್ನೇನಾದರೂ ಗಾಂಧೀಜೀ ಬೆಳೆಸಿಕೊಂಡಿದ್ದರೆ ಅವರೊಬ್ಬ ಜಗದ್ವಿಖ್ಯಾತ ವೈದ್ಯರಾಗಬಹುದಿತ್ತು. ಆದರೆ ರಾಜಕೀಯ ಸಾಮಾಜಿಕ ಸಮಸ್ಯೆಗಳ ಚಕ್ರತೀರ್ಥದಲ್ಲಿ ಸಿಲುಕಿಕೊಂಡ ಅವರಿಗೆ, ಈ ವಿದ್ಯೆಯನ್ನು ಬೆಳೆಸಿಕೊಳ್ಳಲು ಅವಕಾಶವೆಲ್ಲಿ? ಅವರ ಬಾಳಿಗೆ ನೂರು ಕಣ್ಣು, ಸಾವಿರ ನೋಟ. ಆದರೂ ಎಷ್ಟೋ ಜನ ಐರೋಪ್ಯರೂ ಭಾರತೀಯರೂ ಕಾಯಿಲೆಯಾದಾಗ ಗಾಂಧೀಜಿಯ ಬಳಿಗೆ ಸಹಾಯ, ಸಲಹೆಗೆಂದು ಬರುತ್ತಿದ್ದರು. ಗಾಂಧೀಜೀ ಕೊಟ್ಟ ಮದ್ದಿನಿಂದ ಗುಣವಾದವರೂ ಎಷ್ಟೋ ಜನ. ನಾನು ಗಾಂಧೀಜಿಯನ್ನು ಮೊದಲ ಬಾರಿ ಕಂಡಾಗ ಅವರಿಗೆ ಕೂನಿ ಪದ್ಧತಿಯಲ್ಲಿ ತುಂಬಾ ನಂಬಿಕೆಯಿತ್ತು. ಮನೆಯಲ್ಲೇ ಒಂದು ತುರ್ಕಿ ಸ್ನಾನ ಗೃಹ, ಒಂದು ತಣ್ಣೀರಿನ ತೊಟ್ಟಿ, ಆಸನಕ್ಕೊಂದು ತೊಟ್ಟಿ-ಮೊದಲಾದ ಚಿಕಿತ್ಸಾ ಸಾಧನಗಳನ್ನೆಲ್ಲ ಇಟ್ಟಿದ್ದರು.

ನಾನು ಕಂಡ ರೋಗಿಗಳಲ್ಲಿ ಸಿ- ಗಾಂಧೀಜಿಯ ಐರೋಪ್ಯ ಮಿತ್ರರೊಬ್ಬರ ನೆಂಟರು. ಅಪೆಂಡಿಸೈಟಿಸ್‌ನಿಂದ ನರಳುತ್ತಾ ಇದ್ದರು. ವೈದ್ಯ, ಚಿಕಿತ್ಸೆ ಆಗಿತ್ತು. ಕಡೆಗೆ ಇದೆಲ್ಲಾ ಉಪಯೋಗವಿಲ್ಲ, ಆಪರೇಷನ್ ಆಗಲೇಬೇಕೆಂದರು ವೈದ್ಯರು. ಆ ಗೆಳೆಯರು ನೆಟ್ಟಗೆ ಗಾಂಧೀಜಿಯ ಹತ್ತಿರ ಬಂದು ಈ ವಿಷಯ ಹೇಳಿದರು. ಇವರಿಬ್ಬರ ನಡುವೆ ಮಾತು ಕಥೆ ಏನಾಯಿತೋ ನನಗೆ ಗೊತ್ತಿಲ್ಲವಾಗಲಿ ಅದರ ಪರಿಣಾಮ ಬಲ್ಲೆ. ಮಾತು ಮುಗಿದ ಹೊತ್ತಿಗೆ ರಾತ್ರಿ ೧೧ ಘಂಟೆಯಾಗಿತ್ತು. ಡ—ನೆಟ್ಟಗೆ ತಮ್ಮ ಗೆಳೆಯನ ಮನೆಗೆ ಹೋಗಿ, ಆತನನ್ನು ಹೆಗಲ ಮೇಲೆ ಹೊತ್ತುಕೊಂಡು ಬಂದರು ನಮ್ಮ ಮನೆಗೆ.

ಅಲ್ಲಿಗೂ ಇಲ್ಲಿಗೂ ಒಂದು ಮೈಲಿ ದೂರ. ಗಾಂಧೀಜೀ ತಮ್ಮ ಪದ್ಧತಿಯ ಪ್ರಕಾರ ಅವರಿಗೆ ಉಪವಾಸ, ಜಲಚಿಕಿತ್ಸೆ ಮಾಡಿದರು. ಬಲವಾಗಿದ್ದ ರೋಗ ಇಳಿಮುಖಕ್ಕೆ ಬಂತು ಪರವಾಯಿಲ್ಲ ಎಂದು ಗಾಂಧೀಜಿಗೆ ಅನಿಸಿದ ಕೂಡಲೆ ಅವರಿಗೆ ಲಘುವಾದ ಶಾಖಾಹಾರ ಕೊಡಲಾರಂಭಿಸಿದರು ಆತನೂ ಬಲವಾಗುತ್ತಾ ಬಂದ ಇದಾದ ಎಷ್ಟೋ ವರ್ಷಗಳ ಮೇಲೆ ನಾನು ಸಿ-ಯನ್ನು ನೋಡಿದ್ದೆ ಆಗಲೂ ಆತ ಗಾಂಧೀಜೀ ಹೇಳಿದ ಆಹಾರ, ಅಂತರಂಗ ಪರಿಶುದ್ಧಿಯನ್ನು ತಪ್ಪಿಸಿರಲಿಲ್ಲ. ಅದಕ್ಕೆ ಸರಿಯಾಗಿ, ಜೀವಕ್ಕೆ ಹೊಂಚು ಹಾಕಿದ್ದ ಆ ಖಾಯಿಲೆ ಮತ್ತೆಂದೂ ಆತನ ಬಳಿ ಸುಳಿಯಲೇ ಇಲ್ಲ. ಈಗ ಎಷ್ಟೋ ವೈದ್ಯ ಸಂಘಗಳೂ ವೈದ್ಯರೂ ಅನುಸರಿಸುತ್ತಿರುವ ಚಿಕಿತ್ಸಾ ವಿಧಾನವನ್ನು ಗಾಂಧೀಜೀ ಈಗ ಇಪ್ಪತ್ತೈದು ವರ್ಷದ ಹಿಂದೆಯೆ ಮಾಡುತ್ತಿದ್ದರು. ಈ ಹೊತ್ತು ಮಾಂಸ ತಿನ್ನದಿರುವುದೂ ಒಂದು 'ಫ್ಯಾಷನ್'; ಗೌರವದ ಗುರುತು ಎಷ್ಟೋ ಆರೋಗ್ಯ ಪತ್ರಿಕೆಗಳನ್ನೋದಿದರೆ, ಮಲಬದ್ಧತೆಗೆ ಮೂಲ-ಮಾಂಸಾಹಾರವೆಂಬುದು ಈ ಹೊತ್ತೆ ಗೊತ್ತಾಯಿತೇನೋ ಅನಿಸುತ್ತದೆ. ಆದರೆ ಎಷ್ಟೋ ವರ್ಷಗಳ ಹಿಂದೆಯೊ ಗಾಂಧೀಜಿಗೆ ಇದು ಗೊತ್ತಿತ್ತು ಅಂತೇ ಅವರು ಅಂತರಂಗ ಶುದ್ಧಿ ಮಾಡಿ, ಶುದ್ಧ ಆಹಾರ ಕೊಟ್ಟು ಅಂಥ ರೋಗಗಳನ್ನು ಗುಣಪಡಿಸುತ್ತಿದ್ದರು.

o o o o

ಗಾಂಧೀಜೀ ಗುಣಪಡಿಸಿದ ರೋಗಗಳಲ್ಲೆಲ್ಲಾ ಕಸ್ತೂರಿ ಬಾಗೆ ಬಂದದ್ದೇ ತುಂಬಾ ದೊಡ್ಡದು. ಭಾರತೀಯರ ಚಳುವಳಿ ಆರಂಭವಾದಾಗಿನಿಂದ ಕಸ್ತೂರಿಬಾ ಹಾಸಿಗೆ ಹಿಡಿದೇ ಇದ್ದರು. ಅವರಿಗಾಗಲೇ ನಲವತ್ತರ ಇಳಿವಯಸ್ಸು; ಜೊತೆಗೆ ಈ ರೋಗ. ದಿನದಿನಕ್ಕೆ ಬಡವಾಗುತ್ತ ನಡೆದಿದ್ದರು ಬಾ ಕಡೆಗೆ ಡಾಕ್ಟರು ಇದು ರಕ್ತಕ್ಷಯ ಎಂದು ಹೇಳಿದರು ಆಗ ಬಾ ಫೀನಿಕ್ಸ್ ಆಶ್ರಮದಲ್ಲಿದ್ದರು; ಗಾಂಧೀಜೀ ಜೊಹಾನೆಸ್‌ಬರ್ಗಿನಲ್ಲಿ; ನಾನೂ ನನ್ನ ಗಂಡ

ಇಬ್ಬರೂ ದರ್ಬಾನಿನಲ್ಲಿ. ಒಂದು ದಿನ ರಾತ್ರಿ ಆಶ್ರಮದಿಂದ ಒಬ್ಬ ಆಳು ಓಡಿಬಂದ. ವೈದ್ಯರನ್ನು ಕರೆದುಕೊಂಡು ಬನ್ನಿ ಎಂದು ಹೇಳಲು ಫೀನಿಕ್ಸ್ ಕಡೆ ಹೋಗುವ ಕಡೆ ರೈಲಿನಲ್ಲಿ ನಾವಿಬ್ಬರೂ ಆಶ್ರಮಕ್ಕೆ ಹೊರಟೆವು. ಆಶ್ರಮ ತಲಪುವ ಹೊತ್ತಿಗೆ ನಡುರಾತ್ರಿಯಾಗಿತ್ತು. ರೋಗಿಯ ಸ್ಥಿತಿ ತುಂಬಾ ಚಿಂತಾಜನಕವಾಗಿತ್ತು

ಬಾ ಕೊನೆಯುಸಿರು ಬಿಡುವ ವಿಷಘಟ್ಟಕ್ಕೆ ಬಂದು ಮುಟ್ಟಿದ್ದರು. ಡಾಕ್ಟರು ಏನೇನೋ ಮದ್ದು ಕೊಡುತ್ತಿದ್ದರು. ನಾವೆಲ್ಲಾ ಉಸಿರು ಬಿಗಿ ಹಿಡಿದು ಕಾಯುತ್ತಿದ್ದೆವು, ಯಾವ ಗಳಿಗೆಗೆ ಏನಾಗುವುದೋ ಎಂತ. ರಾತ್ರಿ ಹಾಗೂ ಹೀಗೂ ಕಳೆಯಿತು. ಆದಷ್ಟು ಬೇಗ ಹೊರಟು ಬರುವಂತೆ ಗಾಂಧೀಜಿಗೆ ತಂತಿ ಕಳಿಸಿದೆವು. ಬಾ ಕಡೆವರೆಗೂ ಬಾಪೂಜಿಗೆ ತೊಂದರೆ ಕೊಡಕೂಡದೆಂದು ಹಟ ಹಿಡಿದಿದ್ದರು; ಎಚ್ಚರವಿರುವವರೆಗೂ ತಡೆದರು. ಎಚ್ಚರದಪ್ಪಿದ ಕೂಡಲೇ ಗಾಂಧೀಜಿಗೆ ತಂತಿ ಹೋಯಿತು. ಮಾರುದಿನವೇ ಗಾಂಧೀಜೀ ಬಂದರು. ಅಷ್ಟು ಹೊತ್ತಿಗೆ ಸ್ಥಿತಿ ಸ್ವಲ್ಪ ಉತ್ತಮವಾಗಿತ್ತು. ಆದರೂ ಬದುಕುವ ಆಶೆಯೇನೂ ಇರಲಿಲ್ಲ. ಹೆಚ್ಚೆಂದರೆ ಒಂದು ವಾರ, ಇನ್ನೂ ಹೆಚ್ಚೆಂದರೆ ಎರಡುವಾರ—ಅಷ್ಟೆ.

ಗಾಂಧೀಜೀ ಉಳಿದೆಲ್ಲ ಕೆಲಸವನ್ನೂ ಬದಿಗಿರಿಸಿ, ಆಕೆಯ ಉಪಚಾರ ಮಾಡತೊಡಗಿದರು. ಒಂದು ಸಲ ಬಾಗೆ ಸ್ವಲ್ಪ ಎಚ್ಚರ ಬಂದಾಗ 'ನನ್ನಲ್ಲಿ ಪೂರಾ ನಂಬಿಕೆಯಿದೆಯೋ ನಿನಗೆ' ಎಂತ ಬಾಪೂಜೀ ಆಕೆಯನ್ನು ಕೇಳಿದರು. ಆಕೆ 'ಹೂ' ಎಂದರು. 'ಹಾಗಾದರೆ ನಾನೇ ಔಷಧ ಕೊಡುತ್ತೇನೆ, ತಗೋತೀಯಾ' ಎಂತ ಕೇಳಿದರು. ಬಾ ಅದಕ್ಕೂ ಒಪ್ಪಿದರು. ತಮ್ಮ ಜೀವದ ಪೂರಾ ಭಾರವನ್ನು ಗಾಂಧೀಜಿಯ ಮೇಲೇ ಹಾಕಿಬಿಟ್ಟರು. ಗಾಂಧೀಜೀ ವೈದ್ಯರು ಕೊಟ್ಟ ಔಷಧಿ, ಮಾಂಸಕಷಾಯ ಮೊದಲಾದವನ್ನೆಲ್ಲಾ ಬಿಸಾಟುಬಿಟ್ಟರು. ವೈದ್ಯರಿಗೂ ಗಾಂಧೀಜಿಗೂ ದೊಡ್ಡ ವ್ಯಾಜ್ಯವೇ

ಆಗಿಹೋಯಿತು. ಆದರೆ ಗಾಂಧೀಜೀ ಶಕ್ತಿಯನ್ನೂ ಕದಲಲಿಲ್ಲ. ಏನಾದರೂ ಮಾಡಿಕೊಳ್ಳಿ ಎಂದು ವೈದ್ಯರೂ ಸುಮ್ಮನಾಗಿಬಿಟ್ಟರು.

ಮುಂದಿನ ಎರಡು ವಾರ ಗಾಂಧೀಜೀ ರೋಗಿಯ ಪಕ್ಕ ಬಿಟ್ಟು ಕದಲಲೇ ಇಲ್ಲ. ಆಗಾಗ ನಿಂಬೆಹಣ್ಣಿನ ರಸ ಕುಡಿಸುತ್ತಿದ್ದರು; ಅಷ್ಟೆ. ಮತ್ತೇನೂ ಆಹಾರ ಕೊಡಲೇ ಇಲ್ಲ. ಗಾಂಧೀಜೀ ಬಾಗೆ ಧೈರ್ಯ ಹೇಳುತ್ತಾ, ತೀರ ನಿಶ್ಶಕ್ತಳಾದ ಹೆಣ್ಣು ರೋಗಿಗೆ ಮಾಡಬೇಕಾದ ಸೇವೆಯನ್ನೆಲ್ಲಾ ತಾವೇ ಮಾಡುತ್ತಿದ್ದರು; ಅದರಲ್ಲಿ ಮತ್ತಾರಿಗೂ ಅವಕಾಶಕೊಡಲಿಲ್ಲ. ಈ ಎರಡು ವಾರದ ಕಾಲ ಆಕೆಯ ಜೀವ ಸಾವು ಬದುಕಿನ ಮಧ್ಯೆ ತೊಳಲಾಡುತ್ತಿತ್ತು. ಎರಡನೆ ವಾರದ ಕೊನೆಯ ಹೊತ್ತಿಗೆ, ಸ್ಪಷ್ಟವಾಗಿಯೇ ಗುಣವಾಗುವ ಸೂಚನೆ ಕಂಡಿತು. ಹೆಚ್ಚು ಹೊತ್ತು ವೇದನೆಗೆ ಎಚ್ಚರವಿರುತ್ತಿತ್ತು. ನಿದ್ದೆ ಹೆಚ್ಚು ಸ್ವಾಭಾವಿಕವಾಗಿತ್ತು. ಜಲೋದರ ಸಂಬಂಧವಾಗಿದ್ದ ಕಣ್ಣುಬ್ಭ್ರಸಾದಷ್ಟು. ಅಲ್ಲಿಂದ ನಿಧಾನವಾಗಿ ಸ್ವಲ್ಪ ಸ್ವಲ್ಪ ಹಣ್ಣು, ಹಾಲು, ಆಮೇಲೆ ಮಸಾಲೆ ಹಾಕದ ತರಕಾರಿ, ತಿಳಿ ಸಾರು ಕೊಡುತ್ತಾ ಬಂದರು. ರೋಗ ಒಂದು ಸಾರಿಯೂ ಮರುಕಳಿಸದೆ, ಬಾ ದಿನದಿನಕ್ಕೆ ದೃಢವಾಗುತ್ತಾ ಬಂದರು. ಇಲ್ಲಿಗೆ ಸುಮಾರು ೨೦ ವರ್ಷವಾಗಿದೆ. ಬಾ ತುಂಬಾ ಕಠಿಣವಾದ ಬಾಳು ಬದುಕಿದಾರೆ. ಆದರೆ ಒಂದು ಸಲವಾದರೂ ಹಾಸಿಗೆ ಹಿಡಿದಿಲ್ಲ. ಗಾಂಧೀಜಿಯ ವೈದ್ಯದ ಪ್ರಭಾವ ಅಂಥದು!

ಆ ಕಾಲಕ್ಕೆ ಬಾಗೆ ಗುಣವಾದದ್ದು ಒಂದು ಪವಾಡ! ರಕ್ತಕ್ಷಯ ಬಂತೆಂದರೆ ಸಾವಿನ ಔತಣ ಬಂದಂತೆಯೇ. ಬದುಕುತ್ತಿದ್ದವರು ಬಲು ಕಡಮೆ. ಅಷ್ಟೇ ಇಲ್ಲ, ಇದುವರೆಗೂ ಆ ರೋಗವನ್ನು ಯಾರೂ ನಿಂಬೆಹಣ್ಣಿನ ರಸ, ಮಾನಸಿಕ ಚಿಕಿತ್ಸೆಯಿಂದ ಗುಣಪಡಿಸಿರಲಿಲ್ಲ. ಈ ಸಂಗತಿ ಕೇಳಿದ ವೈದ್ಯರಿಗೆಲ್ಲಾ ಆಶ್ಚರ್ಯವೇ ಆಶ್ಚರ್ಯ!

ಗಾಂಧೀಜಿಯ ಎಲ್ಲ ವೈದ್ಯ ಪ್ರಯೋಗಗಳೂ ಇಷ್ಟೇ ಗುಣಕಾರಿಯಾಗಿರಲಿಲ್ಲ. ಎಷ್ಟೋ ವ್ಯರ್ಥ ಪ್ರಯೋಗಗಳನ್ನೂ ಮಾಡಿದರು ಇಂಥದೊಂದು ಪ್ರಯೋಗ ನನ್ನ ಮಗುವಿನ ಮೇಲೆ ಆಯಿತು ಆರು ವಾರದ ಹಾಲು ಹಸುಳೆಯ, ಹೊಟ್ಟೆಗೆ ಪಚನಕಾರ್ಯ ಸರಿಯಾಗಿ ನಡೆಯಲೆಂದು ಗಾಂಧೀಜೀ ತಣ್ಣನೆ ಕೆಸರಿನ ಪೋಟ್ಲೀಸು ಹಾಕಿದ್ದರು. ಮಗು ಚಳಿಗೆ ಬೆಚ್ಚಿ ಕೈಕಾಲು ಝಾಡಿಸಿ ಕಿರಿಚಿ ಮುದರಿಕೊಂಡಿತು ನಾನು ಕೂಡಲೇ ಆ ಕೆಸರಿನ ಪಟ್ಟಿ ಕಿತ್ತುಹಾಕಿ, ನನ್ನ ಮೈಯಲ್ಲಿ ಮಗುವನ್ನು ಹುದುಗಿಸಿಕೊಂಡು ಅದರ ಮೈ ಬೆಚ್ಚಗೆ ಮಾಡಿದೆ. ಪುಣ್ಯಕ್ಕೆ ಕೂಸು ಬದುಕಿತು! ಇದಕ್ಕೇನೋ ಹೀಗಾಯಿತಾಗಲಿ, ಎಷ್ಟೋ ಜನ ಬೆಳೆದ ಹುಡುಗರಿಗೆ ಕೈಕಾಲು ಊದಿಕೊಂಡಾಗ, ಏಟು ಬಿದ್ದು ರಕ್ತ ಗಡ್ಡೆ ಕಟ್ಟಿದಾಗ, ಗಾಂಧೀಜೀ ಕೆಸರಿನ ಪಟ್ಟಿಹಾಕಿ ಗುಣ ಪಡಿಸಿದುದನ್ನೂ ನಾ ಬಲ್ಲೆ.

ಂ ಂ ಂ ಂ

ದಕ್ಷಿಣ ಆಫ್ರಿಕಕ್ಕೆ ನಾ ಹೋದ ಹೊಸದರಲ್ಲಿ ಒಂದು ಘಟನೆ ನಡೆಯಿತು ಇದು ಗಾಂಧೀಜಿಗೆ ಸಾಂಪ್ರದಾಯಿಕ ವೈದ್ಯರಲ್ಲಿದ್ದ ತಿರಸ್ಕಾರವನ್ನು ಹೆಚ್ಚಿಸಿರಬೇಕು ಎನ್ನಿಸುತ್ತದೆ, ಈಗ ಅದನ್ನು ಯೋಚಿಸಿದರೆ. ಗಾಂಧೀಜಿಯ ಹಿಂದೀ ಮಿತ್ರರ ಪೈಕಿ ಒಬ್ಬರ ಮಗ-ಹತ್ತು ಹನ್ನೆರಡು ವರ್ಷದ ಹುಡುಗನಿಗೆ ಯಾವುದೋ ರೋಗಕ್ಕೆ ವೈದ್ಯರು ಆಪರೇಷನ್ ಆಗಬೇಕು ಎಂದರು. ಮೊದಮೊದಲು ಆಪರೇಷನ್ ಮಾಡಿಸಲು ಹುಡುಗನ ತಂದೆ ತಾಯಿಗಳು ಹೆದರಿದರೂ ಆಪರೇಷನ್ ದೊಡ್ಡದಲ್ಲವಾದ್ದರಿಂದಲೂ ತೀರಾ ಅಗತ್ಯವಾದ್ದರಿಂದಲೂ, ಕಡೆಗೆ ಆಪರೇಷನ್ ಆಗುವಾಗ ಹುಡುಗನನ್ನು ನೋಡಿಕೊಳ್ಳಲು ಗಾಂಧೀಜೀ ಅವನ ಪಕ್ಕದಲ್ಲೇ ಇರುವುದಾದರೆ ಆಗಬಹುದು ಎಂದು ಒಪ್ಪಿದರು. ಗಾಂಧೀಜೀ ಹುಡುಗನ ಪಕ್ಕದಲ್ಲಿದ್ದರೆ ಸಾಕು, ಅವನಿಗೇನೂ ಅಪಾಯವಾಗದು! ಎಂಬುದು ಆ ತಂದೆತಾಯಿಗಳ ಮನಸ್ಸು; ಗಾಂಧೀಜೀ ಎಂದರೆ ಅವರಿಗೆ ಅಷ್ಟು ನಂಬಿಕೆ.

ದುರದೃಷ್ಟವಶಾತ್ ಆಪರೇಷನ್ ಸರಿಯಾಗಿ ಆಗಲಿಲ್ಲ. ಆಪರೇಷನ್ ಮೇಜಿನ ಮೇಲೇ ಮಗು ಸತ್ತು ಹೋಯಿತು. ಆ ವೈದ್ಯ ಏನೂ ತಿಳಿಯದ ಪ್ರಜ್ಞೆಯಿಲ್ಲದ ಅಜ್ಞ. ತಂದೆ ತಾಯಿಗಳ ದುಃಖವಂತೂ ಸಮಾಧಾನಕ್ಕೆ ಮೀರಿತ್ತು. ನಿರಪರಾಧಿಯಾದ ಮಗುವನ್ನು ತಮ್ಮ ಕಣ್ಣೆದಿರಿಗೆ ಕೊಲ್ಲುತ್ತಿದ್ದರೂ ಬಿಡಿಸಿಕೊಳ್ಳಲು ತಾವು ಲೇಶ ಮಾತ್ರವೂ ಪ್ರಯತ್ನವನ್ನು ಮಾಡಲಿಲ್ಲವೆನಿಸಿತು ಗಾಂಧೀಜಿಗೆ. ಆ ದುಃಖಕ್ಕೆ ತಾವೇ ಕಾರಣ ಎಂಬ ನೋವು; ತಾವೇ ಅವರಿಗೆ ಮೋಸ ಮಾಡಿದಷ್ಟು ನಾಚಿಕೆ. ತುಂಬಾ ಚಿಂತಾಕುಲರಾಗಿ, ದುಃಖ ತುಂಬಿದ ಎದೆಯಿಂದ ಮನೆಗೆ ಬಂದರು. ಗಾಂಧೀಜಿಯ ಮುಖದಿಂದ ನಾಲ್ಕಾರು ದಿನ, ಈ ದುಃಖದ ಮೋಡ ಕವಿದದ್ದು ಚೆದರಲೇ ಇಲ್ಲ.

o o o o

ದೈಹಿಕ ಶಿಕ್ಷೆಯೆಂದರೆ ಗಾಂಧೀಜಿಗೆ ಸ್ವಾಭಾವಿಕವಾಗಿಯೆ ಹೇಸಿಗೆ ಮಕ್ಕಳ ವಿಷಯಕ್ಕಂತೂ ಕೂಡಲೇ ಕೂಡದು; ಶುದ್ಧ ತಪ್ಪು. ಎಂಥ ಬೇಸರ ಬರಿಸುವ ತುಂಟ ಹುಡುಗನಾದರೂ ಅವನ ತಪ್ಪು ಅವನಿಗೇ ತಿಳಿಯುವಂತೆ ಮಾಡಿ, ಒಳ್ಳೇ ಮಾತಿನಲ್ಲೇ ಹಾದಿಗೆ ತರಬಹುದು ಎಂದು ಗಾಂಧೀಜೀ ನಂಬಿದ್ದರು. ಆದರೂ ಕೆಲವರು ಹುಡುಗರಿಗೆ ಈ ಹೃದಯವೆಂಬುದು, ತನ್ನ ತಪ್ಪು ತಿಳಿದುಕೊಳ್ಳುವ ಒಳ್ಳೆತನ ಇರುವುದೇ ಇಲ್ಲ. ಶುದ್ಧ ನೀತಿಯನ್ನು ನಂಬಿದವರು, ಮಾನವ ಸ್ವಭಾವದೊಂದಿಗೆ ಪ್ರಯೋಗ ಮಾಡುವಾಗ ಇಂಥ ಹುಡುಗರು ತಂದೊಡ್ಡುವ ಸಮಸ್ಯೆಗಳು ಬ್ರಹ್ಮಗಂಟುಗಳಿದ್ದಂತೆ.

ಒಮ್ಮೆ ಹದಿನಾಲ್ಕು ವರ್ಷದ ಹುಡುಗನೊಬ್ಬ ಗಾಂಧೀಜಿಯ ಆಶ್ರಯಕ್ಕೆ ಬಂದ. ಆ ಹುಡುಗ ಗಾಂಧೀಜಿಗೆ ಪೂರಾ ತೊಂದರೆ ಕೊಟ್ಟ. ಅವನೋ ಹುಟ್ಟು ಮೋಸಗಾರ, ಕಲ್ಲೆದೆಯ ಹುಡುಗ. ಗಾಂಧೀಜಿಯ ದೃಷ್ಟಿಯಲ್ಲಿ ಇವೆರಡಕ್ಕಿಂತ ಹೆಚ್ಚಿನ ತಪ್ಪೇ ಇರಲಿಲ್ಲ. ಇದನ್ನು ತಪ್ಪಿಸಲೆಂದು ಅವರು ಉಳಿದವರಿಗಿಂತ ಆ ಹುಡುಗನ ಮೇಲೆ ಹೆಚ್ಚು ಪ್ರೀತಿ ತೋರಿಸುತ್ತಿದ್ದರು; ಒಳ್ಳೆ ಮಾತಾಡಿ ದಾರಿಗೆ

ತರಲು ಪ್ರಯತ್ನಿಸಿದರು. ಆದರೇನು? ಗೋರ್ಕಲ್ಲ ಮೇಲೆ ಮಳೆ ಸುರಿದಂತೆ! ಇತರ ಹುಡುಗರನ್ನು ಪ್ರಾಣಿಗಳನ್ನು ಹಿಂಸಿಸುವುದೂ, ಸುಳ್ಳಿಗೆ ಸುಳ್ಳು ಪೋಣಿಸುವುದು ನಡೆದೇ ಇತ್ತು. ಕಡೆಗೆ ಒಂದು ದಿನ ನನ್ನ ಗಂಡ, ಆ ಹುಡುಗನನ್ನು ಹೀಗೆ ಲಂಗು ಲಗಾಮಿಲ್ಲದೆ ಬೆಳೆಸುತ್ತಿರುವುದಕ್ಕಾಗಿ ಗಾಂಧೀಜಿಯ ಮೇಲೆ ರೇಗಿದ. ಗಾಂಧೀಜೀ ಏನೇನೋ ನೆಪ ಹೇಳಿದರು. ನನ್ನ ಗಂಡ ಕೇಳಲಿಲ್ಲ. ಸರಿಯಾಗಿ, ಅವನಿಗೆ ಅರ್ಥವಾಗುವ ರೀತಿಯಲ್ಲಿ ಬುದ್ಧಿ ಕಲಿಸದಿದ್ದರೆ ಹೀಗೇ ಹಾಳಾಗುತ್ತಾನೆಂದು ಹೇಳಿದ. ಕಡೆಗೆ ದಂಡಪ್ರಯೋಗವೇ ಸರಿಯಾದ ವಸ್ತು ಎಂದು ಗಟ್ಟಿಯಾಗಿ ಹೇಳಿಬಿಟ್ಟ. ಒಂದು ದಿನ ಗಾಂಧೀಜೀ ನೋಡುತ್ತಿದ್ದ ಹಾಗೆ, ಇನ್ನೊಬ್ಬ ಹುಡುಗನನ್ನು ಕ್ರಿಕೆಟ್ಟು ಬ್ಯಾಟಿನಿಂದ ಆ ಹುಡುಗ ಹೊಡೆದ; ಪುಣ್ಯಕ್ಕೆ ಗುರಿ ತಪ್ಪಿತು. ಗಾಂಧೀಜೀ ನನ್ನ ಗಂಡನಿಗೆ ಹೇಳಿದರು 'ಚೆನ್ನಾಗಿ ನಾಲ್ಕೇಟು ಬಿಗಿದು ಹುಡುಗನಿಗೆ ಬುದ್ಧಿ ಕಲಿಸು' ಎಂತ. ನನ್ನ ಗಂಡ ಗಾಂಧೀಜೀ ಹೇಳಿದ ಹಾಗೆ ಮಾಡಿದ. ಹುಡುಗನೂ ಸ್ವಲ್ಪ ಸುಧಾರಿಸಿದ. ಇತರರಿಗೆ ತಾನು ಹೊಡೆದಾಗ ಅವರಿಗೆ ಹೇಗಾಗುತ್ತದೆಂಬುದು ತನಗೇ ಏಟು ಬಿದ್ದಾಗ ಅವನಿಗೆ ಅರ್ಥವಾಯಿತು. ಮತ್ತೆ ಮೊದಲಿನಷ್ಟು ತುಂಟತನಕ್ಕೆ ಹೋಗಲಿಲ್ಲ.

ಇದಾದ ಸ್ವಲ್ಪ ದಿನದಲ್ಲೇ ಆ ಹುಡುಗ ತನ್ನ ತಂದೆತಾಯಿಗಳ ಬಳಿಗೆ ಹಿಂದಿರುಗಿದ; ಗಾಂಧೀಜಿಯ ಪುಟ್ಟ ಶಾಲೆಯೂ ಮುಚ್ಚಿತು. ಆ ಮೇಲೆ ಆ ಹುಡುಗ ಏನಾದನೋ ಗೊತ್ತಾಗಲಿಲ್ಲ. ಅಂತೂ ಆ ಹುಡುಗ ಮೃದುವಾದ ಮಾತಿಗೆ, ನಯವಾದ ರೀತಿಗೆ ಬಗ್ಗದೆ, ಏಟು ಬಿದ್ದಾಗ ಬುದ್ಧಿ ಕಲಿತದ್ದು, ನಿಜವಾಗಿಯೂ ಗಾಂಧೀಜಿಗೆ ತುಂಬಾ ನೋವುಂಟಾಗಿರಬೇಕು; ನಿರಾಶೆಯೂ ಆಗಿರಬೇಕು.

೧೨

ಇಂಗ್ಲೆಂಡಿಗೆ ಹೋದ ನಾನು ಮತ್ತೆ ದಕ್ಷಿಣ ಆಫ್ರಿಕಾಕ್ಕೆ ಬಂದದ್ದು ಮೂರು ವರ್ಷದ ಮೇಲೆ. ನನ್ನ ಗಂಡ ಇಂಗ್ಲೆಂಡಿಗೇ

ಬಂದು ನಾಲ್ಕಾರು ತಿಂಗಳು ಅಲ್ಲೇ ನನ್ನ ಜೊತೆಯಲ್ಲಿದ್ದ. ಆಮೇಲೆ ನಾವಿಬ್ಬರೂ ಕೂಡಿ ಹಿಂದುಸ್ಥಾನಕ್ಕೆ ಹೋದೆವು; ಅಲ್ಲಿ ಒಂದ ವರ್ಷ ಕಾಲ ಇದ್ದೆ.

ದರ್ಬಾನಿಗೆ ಬಂದಾಗ, ನಾವು ಅಲ್ಲೇ ಇರಲು ಎಲ್ಲ ಏರ್ಪಾಟೂ ಆಗಿತ್ತು. ನನ್ನ ಗಂಡ ನೇಟಾಲಿನಲ್ಲಿ ತನ್ನ ಲಾಯರಿ ಕೆಲಸ ಮುಂದುವರಿಸುತ್ತಾ ಎಂದಿನಂತೆ ಫೀನಿಕ್ಸ್ ಆಶ್ರಮವನ್ನು ನೋಡಿಕೊಳ್ಳಬೇಕು. ಗಾಂಧೀಜೀ ಜೋಹಾನೆಸ್ ಬರ್ಗಿನಲ್ಲಿದ್ದುಕೊಂಡು ಆಗಾಗ ಫೀನಿಕ್ಸ್ ಆಶ್ರಮಕ್ಕೆ ಹೋಗಿಬರುತ್ತಾ ಇದ್ದು, ತಮ್ಮ ಕನಸನ್ನು ಕಾರ್ಯರೂಪಕ್ಕೆ ತರಲು ಯತ್ನಿಸಬೇಕು ಎಂದು ಗೊತ್ತಾಗಿತ್ತು.

ನಾನಿಲ್ಲಿಂದ ಹೋದಾಗ್ಗೂ ಈಗ್ಗೂ ಫೀನಿಕ್ಸ್ ಆಶ್ರಮ ತುಂಬಾ ಬದಲಾಯಿಸಿತ್ತು. ಎಷ್ಟೋ ಜನ ಹಿಂದಿದ್ದ ಆಶ್ರಮವಾಸಿಗಳು ಹೋಗಿ ಹೊಸಬರು ಬಂದಿದ್ದರು ಹೊಲಗಳೂ ಚೆನ್ನಾಗಿದ್ದವು ಎಂಥದೋ ಅಂತೂ ಬೇಲಿಗಳು ಬಂದಿದ್ದವು. ಆಶ್ರಮವಾಸಿಗಳೆಲ್ಲಾ ತಮಗೆ ಬೇಕಾದ ತರಕಾರಿ ತಾವೆ ಬೆಳೆದುಕೊಳ್ಳುತ್ತಿದ್ದರು ಹುಲುಸಾದ ಭೂಮಿಯಾದ್ದರಿಂದ ತರಕಾರಿ ಚೆನ್ನಾಗಿ ಬೆಳೆಯುತ್ತಿತ್ತು; ಮೆಂತೆ ಸೊಪ್ಪು, ಒಳ್ಳೆ ಜಾತಿಯ ಅನಾನಸ ಹಣ್ಣೂ ಸೊಗಸಾಗಿ ಬೆಳೆಯುತ್ತಿದ್ದವು.

ಆಶ್ರಮದಲ್ಲಿದ್ದ ಒಂದೆರಡು ಮನೆಗಳನ್ನು ಮೊದಲಿಗಿಂತಲೂ ದೊಡ್ಡದಾಗಿ ಕಟ್ಟಿದ್ದರು. ಕುರ್ಚಿ ಮೇಜುಗಳೂ ಮೊದಲಿಗಿಂತ ಹೆಚ್ಚಾಗಿದ್ದವು. ಕಿಟಕಿಗಳಿಗೆ ಅಂದವಾದ ತೆರೆ ಕೂಡಾ ! ಶಾಲೆಗಾಗಿ ದೊಡ್ಡದೊಂದು ಭವಂತಿ ಕಟ್ಟಿಸಿದ್ದರು. ಆಶ್ರಮಕ್ಕೆ ಹೊಸದಾಗಿ ಬಂದ ಆಂಗ್ಲ ಮಹಿಳೆಯೊಬ್ಬಳು ಆಶ್ರಮದ ಹುಡುಗರಿಗೆ ಪಾಠ ಕಲಿಸುತ್ತಿದ್ದರು. ಆಕೆಗೆ ಹಿಂದೆ ಪಾಠಕಲಿಸಿದ ಅನುಭವವೇನೂ ಇರಲಿಲ್ಲ; ಗಾಂಧೀಜೀಗೆ ಅದೆಲ್ಲಾ ಬೇಕೂ ಆಗಿರಲಿಲ್ಲ. ಆಕೆ ಹೃದಯ ಒಳ್ಳೆಯದು. ಮನಸ್ಸೂ ಹಾಗೆಯೇ ಇರಬೇಕು ; ಇದು ಅವರ ವಾದ.

ಏಳರಿಂದ ಹದಿನೈದು ವರ್ಷದವರೆಗಿನ ಹತ್ತು ಹದಿನೈದು ಜನ ಹುಡುಗ-ಹುಡುಗಿಯರು ಈ ಶಾಲೆಯಲ್ಲಿ ಕಲಿಯುತ್ತಿದ್ದರು. ಕೆಲವರು ಗಾಂಧೀಜೀಯ ಸ್ವಂತ ಜವಾಬ್ದಾರಿಗೆ, ಇದೇ ಅವರ ಪಾಲಿಗೆ ಹೊಸ ದೊಂದು ಸಮಸ್ಯೆಯಾಯಿತು. ಹುಡುಗರು ಹರೆಯಕ್ಕೆ ಬಂದವರು; ಬಲಿಯುತ್ತಿದ್ದ ಅವರ ವಿಷಯಜೀವನವನ್ನು ಗಮನವಿಟ್ಟು ನೋಡ ಬೇಕಾಗಿತ್ತು. ಎಷ್ಟೋ ಚಿಂತಿಸಿದರು, ಹುಡುಗರಿಗೆ ದಾಂಪತ್ಯಜ್ಞಾನ ಕಲಿಸಿ, ಅವರಲ್ಲಿ ಪಾವಿತ್ರ್ಯತೆಗೆ ಬಲವಾದ ತಳಹದಿ ಹಾಕೋಣ ಎಂದು ಯೋಚನೆ ಮಾಡಿದರು. ಕಡೆಗೆ 'ಹುಡುಗನಿಗೆ ಏನೇನು ಗೊತ್ತಿರ ಬೇಕು ?' ಎಂಬ ಪುಸ್ತಕ ಮಾಲೆಯನ್ನ ತರಿಸಿ, ಅವನ್ನೆಲ್ಲಾ ಓದಿ ನೋಡಿ, ನಿನಗೆ ಒಳ್ಳೆಯವೆಂದು ಹುಡುಗರಿಗೆ ಓದಲು ಕೊಡು ಎಂದು ನನಗೆ ಹೇಳಿದರು. ಎಷ್ಟು ಆಶೆಯಿದ್ದರೇನು, ಎಷ್ಟು ತತ್ವಕಲಿತರೇನು: ಯಾವುದೂ ಆಶ್ರಮದಲ್ಲಿ ನಡೆದ ಒಂದು ದುಃಖಕರವಾದ ಘಟನೆ ಯನ್ನು ತಪ್ಪಿಸಲಿಲ್ಲ ವಿದ್ಯಾರ್ಥಿನಿಯೊಂದಿಗೆ ಹಿರಿಯ ವಿದ್ಯಾರ್ಥಿ ಯೊಬ್ಬ "ಅತಿಚಾರ" ಮಾಡಿದ್ದನ್ನು ಕೇಳಿ ಗಾಂಧೀಜಿಗೆ ತುಂಬಾ ನೋವಾಯಿತು. ಬಲವಾದ ಏಟು ಆದು ಅವರಿಗೆ.

ಆ ಹುಡುಗಿಯ ತಂದೆಗೆ ಸಹಜವಾಗಿ ತುಂಬಾ ಸಿಟ್ಟು ಬಂತು. ಮತ್ತೆ ಆ ಶಾಲೆಗೆ ಹುಡುಗಿಯನ್ನು ಕಳಿಸುವುದಿಲ್ಲವೆಂದು ಖಡಾ ಖಂಡಿ ತವಾಗಿ ಹೇಳಿಬಿಟ್ಟರು. ಅವರು ಆ ಆಶ್ರಮದಲ್ಲಿರುವವರೆಗೂ ಆ ಹುಡುಗಿಗೆ ಸರ್ಪಕಾವಲು. ಯಾರ ಹತ್ತಿರಲೂ ಮಾತಾಡಲು ಕೂಡಾ ಬಿಡುತ್ತಿರಲಿಲ್ಲ. ಇದನ್ನೆಲ್ಲಾ ನೋಡಿದರೆ ಈ ಹೇಯವಾದ ಘಟನೆಗೆ ಗಾಂಧೀಜಿಯೇ ಕಾರಣವೇನೋ ಎಂಬಹಾಗಿತ್ತು. ಹುಡು ಗನನ್ನೇ 'ಹೀಗೇಕೆ ಮಾಡಿದ' ಎಂತ ಕೇಳಿದ್ದಕ್ಕೆ 'ನಾನೇನು ಮಾಡಲಿ ಕೈ ಮೀರಿಬಿಟ್ಟಿತು' ಎಂದ. ಆ ಹುಡುಗನನ್ನು ಮೂರು ಹೊತ್ತೂ ತಮ್ಮ ಕಣ್ಣಿನ ಕಾವಲಿನಲ್ಲೆ ಇಟ್ಟುಕೊಳ್ಳದೆ, ಆತನನ್ನು ನೋಡಿಕೊ ಳ್ಳುವುದು ಅಸಾಧ್ಯವೆಂಬುದು ಅರ್ಥವಾಯಿತು. ಆದರೆ ಸದಾ ಅವ ನನ್ನು ನೋಡುತ್ತಿರುವುದು ಅವರಿಗೆಲ್ಲಿ ಸಾಧ್ಯ? ಎಂತಲೇ ಹುಡುಗ ನನ್ನು ಅವನ ತಂದೆಯ ಬಳಿಗೆ ಕಳಿಸಿಬಿಟ್ಟರು. ಆ ಘಟನೆ ಅಲ್ಲಿಗೆ

ಮುಗಿಯಿತು. ಆದರೇನು, ಅದು ಆಶ್ರಮದಲ್ಲಿ ತನ್ನ ವಿಷವಾಯುವನ್ನು ಬೀರಿತು. ಅಪಸ್ವರ ಮೂಡಿಸಿತು.

ಶಾಲೆಗೊಂದು ಕಟ್ಟಡವಾಯಿತೆಂದ ಕೂಡಲೆ, ಸಭೆಗಳಿಗೆ ಒಂದು ಯೋಗ್ಯಭವನ ನಿರ್ಮಾಣವಾಯಿತು ಅನಿಸಬಹುದು; ಆದರೆ ಗಾಂಧೀಜಿಯ ಮನೆಯಲ್ಲಿದ್ದ ವಿಶಾಲವಾದ ಕೋಣೆಯೇ ಆಶ್ರಮದ ಸಭಾ ಭವನವಾಗಿತ್ತು. ಇಲ್ಲಿ ಪ್ರತಿ ಭಾನುವಾರವೂ ಸಾಯಂಕಾಲ ಆಶ್ರಮವಾಸಿಗಳೆಲ್ಲರೂ ಭಜನೆ ಪ್ರಾರ್ಥನೆಗೆ ಸೇರುತ್ತಿದ್ದರು. ಇಲ್ಲಿ ನಡೆಯುತ್ತಿದ್ದ ಪ್ರಾರ್ಥನೆ, ಪೂರ್ವಪಶ್ಚಿಮದ ಕೀರ್ತನೆಗಳ ಸಮ್ಮಿಲನ. ಒಳ್ಳೆ ಆರ್ಗನ್-ಪಿಯಾನೋ ಜಾತಿಯ ಇನ್ನೊಂದು ವಾದ್ಯವೊಂದು ಆಶ್ರಮದಲ್ಲಿತ್ತು. ಅಲ್ಲಿದ್ದ ಒಂದಿಬ್ಬರು ಆಂಗ್ಲರಿಗೆ ಸುಮಾರಾಗಿ ಅದನ್ನು ನುಡಿಸಲೂ ಗೊತ್ತಿತ್ತು. ಪ್ರಾರ್ಥನೆಯಲ್ಲಿ ಎಲ್ಲಕ್ಕೂ ಮೊದಲು ಗಾಂಧೀಜೀ 'ಭಗವದ್ಗೀತೆ' ಬೈಬಲಿನ 'ಹೊಸ ಒಡಂಬಡಿಕೆ' ಗಳಿಂದ ಕೆಲಭಾಗ ಓದುತ್ತಿದ್ದರು. ಆಮೇಲೆ ಒಂದೆರಡು ಇಂಗ್ಲಿಷ್ ಪ್ರಾರ್ಥನಾ ಗೀತೆಗಳನ್ನು ಎಲ್ಲರೂ ಒಟ್ಟಾಗಿ ಹಾಡುತ್ತಿದ್ದರು. ಅದಾದಮೇಲೆ ಗುಜರಾತಿ ಗೊತ್ತಿದ್ದವರು, ಆ ಭಾಷೆಯ ಕೀರ್ತನೆಗಳನ್ನು ಹೇಳುತ್ತಿದ್ದರು. ಹಾಡುವುದರಲ್ಲಿ ಎಲ್ಲರೊಡನೆ ಗಾಂಧೀಜಿಯೂ ಕೊರಲು ಕೂಡಿಸುತ್ತಿದ್ದರು; ಪ್ರಾರ್ಥನೆಗಳನ್ನು ಹಾಡುವುದೆಂದರೆ ಅವರಿಗೆ ಎಷ್ಟೋ ಸಂತೋಷ. ನಮ್ಮ ಪ್ರಾರ್ಥನೆಗೆಂದೇ ಅಲ್ಲಲ್ಲಿಂದ ಆರಿಸಿದ ಹದಿನೆಂಟು ಗೀತೆಗಳಿದ್ದ ಭಜನಾವಲಿಯೊಂದನ್ನು ಫೀನಿಕ್ಸ್ ಆಶ್ರಮದ ಮುದ್ರಣಾಲಯದಲ್ಲಿ ಮುದ್ರಿಸಿಕೊಂಡಿದ್ದೆವು.

ಇಂಗ್ಲಿಷ್ ಪ್ರಾರ್ಥನಾ ಗೀತೆಗಳೆಂದರೆ ಗಾಂಧೀಜಿಗೆ ಪ್ರಾಣ. ಅದರಲ್ಲೂ ಎರಡು ಅವರ ತೀರಾ ಅಚ್ಚುಮೆಚ್ಚಾಗಿದ್ದವು. ನಾನಿದಷ್ಟು ವರ್ಷ ನೋಡಿದೇನೆ; ಒಂದು ದಿನವಾದರೂ ಗಾಂಧೀಜಿ ಅವನ್ನು ಬೇಡ ಎನಲಿಲ್ಲ; ಅವನ್ನು ಹಾಡುವಾಗ ಬೇಸರ ತೋರಿಸಲಿಲ್ಲ ಮೊದಲನೆಯದು ಈ ನಿವೇದನ ಸ್ತೋತ್ರ:

## ೧೦೦

ನನ್ನ ಬಾಳನಿದೊ ಸ್ವೀಕರಿಸು
ನಿನ್ನಡಿಗೆ ಮೀಸಲಿದು ಪ್ರಭುವೆ
ಬದುಕೆನ್ನ ಒಂದೊಂದು ಚಣ ಕೂಡ
ನಿನ್ನ ಅನಂತ ಧ್ಯಾನದಲಿ ಹರಿಯುತಿರಲಿ

ನನ್ನ ಕೈಗಳಿದೊ-ಸ್ವೀಕರಿಸು
ನಿನ್ನೊಲವಿನಲಿ ಚಲಿಸಲಿವು
ಎನ್ನ ಪಾದಗಳು ಬಾಗಿಣವು ದೇವ
ನಿನಗಾಗಿ ವೇಗದಲಿ ಓಡಲಿವು

ನನ್ನ ವಾಣಿ ಇದು ಕೂಡ ನಿನಗಾಗೆ
ನಿನ ನಾಮ ಹಾಡುವೆನು ದೊರೆಯೆ
ನನ್ನ ತುಟಿಗಳಲಿ ಎಂದೆಂದು
ನಿನ ಸಂದೇಶ ಪಲುಕುತಿರಲಿ

ಬಂಗಾರ ಬೆಳ್ಳಿ ಎಲ್ಲವನು ಅರ್ಪಿಸಿಕೊ
ಏನೊಂದು ಬಿಡಬೇಡ ನನಗೆಂದು
ನನ್ನ ಬುದ್ಧಿಯನು ನೀನೆ ತೆಗೆದುಕೊ ದೇವ
ಎನ್ನೆಲ್ಲ ಶಕ್ತಿಯನು ಆಯ್ದುಕೋ ನೀನೆ

ಎನ್ನ ಚಿತ್ರವನು ನಿನ್ನದಾಗಿಸಿಕೊ
ಇನ್ನು ಅದು ನನ್ನದಾಗಿರಲಿ
ಎನ್ನ ಎದೆ; ತೆಗೆದುಕೋ ನಿನ್ನದಿದು
ನಿನ್ನ ಸಿಂಹಾಸನವಿದು ತಿಳಿಯೈ

ಸುರಿಯುವೆನು ನನ್ನೊಲವ ಸ್ವೀಕರಿಸು
ಪ್ರೇಮ ಭಂಡಾರವನು ನಿನ್ನ ಪಾದದಡಿ
ನನ್ನನೇ ನೀ ಮುಡಿದುಕೋ ದೇವ
ನಿನಗಾಗೆ, ನಾ ಉಸಿರಿಡುವೆ

ಬಹುಶಃ ಜಗತ್ತಿನ ಮತ್ತಾವ ಭಾಗದಲ್ಲೂ ಈ ಸ್ತೋತ್ರವನ್ನು ಇಲ್ಲಿಯಷ್ಟು ಭಕ್ತಿಪೂರ್ಣವಾಗಿ ಯಾರೂ ಹಾಡಿರಲಿಕ್ಕಿಲ್ಲ ಮನಸು ಮಸಕ್ಕಾಗಿ ದೀಪದ ಬೆಳಕು ಹರಡಿದ ತಗಡಿನ ಕೋಣೆಯಲ್ಲಿ ಸುಮಾರು ಇಪ್ಪತ್ತು ಜನ ಆಂಗ್ಲರೂ, ಭಾರತೀಯರೂ ಸೇರಿ ಪ್ರಾರ್ಥನೆಗೆ ಸೇರುತ್ತಿದ್ದರು. ಪ್ರಾರ್ಥನೆ ಹಾಡುವುದರಲ್ಲಿ ಎಷ್ಟು ಭಕ್ತಿ. ಹಾಡುವಾಗ ಅರ್ಥ ತುಂಬಿಬರುತ್ತಿತು.

ಇನ್ನೊಂದು ಸ್ತೋತ್ರವನ್ನು ಗಾಂಧೀಜೀ ತಮ್ಮ ಸುತ್ತಲೂ ಕಷ್ಟದ ಕೋಟೆ ಕಟ್ಟಿದೆ ಎನಿಸಿದಾಗ ಹೇಳುತ್ತಿದ್ದರು. ಅದು

"ಕರುಣಾಳು ಬಾ ಬೆಳಕೆ, ಮುಸುಕಿದೀ ಮಬ್ಬಿನಲಿ,
ಕೈ ಹಿಡಿದು ನಡೆಸೆನ್ನನು

ಇರುಳು ಕತ್ತಲೆಯ ಗವಿ; ಮನೆದೂರ; ಕನಿಕರಿಸಿ,
ಕೈಹಿಡಿದು ನಡಸೆನ್ನನು

ಹೇಳಿ ಕನ್ನಡಿಯಿಸು; ಬಲು ದೂರ ನೋಟವನು
ಕೇಳಿದೊಡನೆಯೆ ಸಾಕು ತನಗೊಂದು ಹೆಜ್ಜೆ.

ಮುನ್ನ ಇಂತಿರದಾದೆ; ನಿನ್ನ ಬೇಡದೆ ಹೋದೆ,
ಕೈ ಹಿಡಿದು ನಡೆಸು ಎನುತ.

ನನ್ನ ದಾರಿಯ ನಾನೆ ನೋಡಿದೆನು; ಇನ್ನು,
ಕೈಹಿಡಿದು ನಡೆಸು ನೀನು

ಮಿರುಗು ಬಣ್ಣಕೆ ಬೆರೆತು, ಭಯ ಮರೆತು, ಕೊಬ್ಬಿದ್ದೆನು,
ಮರೆದಾಯ್ತು; ನೆನೆಯದಿರು ಹಿಂದಿನದೆಲ್ಲ.

ಇಷ್ಟು ದಿನ ಸಲಹಿರುವೆ ಮೂರ್ಖನನು ಮುಂದೆಯೂ
ಕೈ ಹಿಡಿದು ನಡೆಸದಿಹೆಯಾ ?

ಕಷ್ಟದಡವಿಯ ಕಳೆದು, ಬೆಟ್ಟ ಹೊಳೆಗಳ ಹಾದು,
ಇರುಳನ್ನು ನೂಕದಿಹೆಯಾ ?

ಬೆಳಗಾಗ ಹೊಳೆಯದೇ, ಹಿಂದೊಮ್ಮೆ ನಾನೋಲಿದ
ಈ ನಡುವೆ ಕಳೆದುಕೊಂಡ ದಿವ್ಯ ಮುಖ ನಗುತ?"

ಎಲ್ಲರಿಗೂ ಈ ಭಾನುವಾರದ ಪ್ರಾರ್ಥನೆಯೆಂದರೆ ತುಂಬಾ ಪ್ರೀತಿ. ಅದಾದಮೇಲೆಎಂದಿಗಿಂತ, ಒಬ್ಬರಿಗೊಬ್ಬರುಹತ್ತಿರ ಬಂದಂತಾಗುತ್ತಿತ್ತು; ಏನೋ ಒಂದು ಪವಿತ್ರ ಶಾಂತಿ, ಆನಂದ ಎದೆ ತುಂಬುತ್ತಿತ್ತು, ಆ ಹೊತ್ತಿನಲ್ಲಿ, ಎಲ್ಲರಲ್ಲೂ.

೦ ೦ ೦ ೦

೧೩

ದಕ್ಷಿಣ ಆಫ್ರಿಕದ ಶಾಂತಿಯುಪಾಲಿಗೆ ಮಾರಿಯಾಗಿ ಬಂದು, ಶಾಸನವಾಗಲಿದ್ದ ಏಷಿಯಾಟಿಕ್ ಮಸೂದೆಯ ಬಾಣಕ್ಕೆ ಬಲಿಯಾದವರು ಭಾರತೀಯರೊಬ್ಬರೇ ಅಲ್ಲ; ಸಣ್ಣಪುಟ್ಟ ಅಂಗಡಿ ಇಟ್ಟುಕೊಂಡು ಕಿರಾಣಿ ವ್ಯಾಪಾರ ಮಾಡುತ್ತಿದ್ದ ಬೇಸಾಯ ಮಾಡುತ್ತಿದ್ದ ಚೀನೀಗಳಿಗೂ ಇದರ ಕಾವು ತಗಲಿತು. ಅವರೂ ಕೂಡಾ ಗಾಂಧೀಜಿಯ ಸಲಹೆಯಂತೆ, ಅವರ ನೇತೃತ್ವದಲ್ಲೇ ಸತ್ಯಾಗ್ರಹ ಆರಂಭಿಸಿದರು. ಭಾರತೀಯರ ಪಾಲಿಗೆ ಗಾಂಧೀಜೀ ಇದ್ದಂತೆ, ಚೀನೀಗಳಿಗೂ ಅವರವನೇ ಒಬ್ಬ ನಾಯಕನಿದ್ದ; ತುಂಬಾ ಬುದ್ಧಿವಂತ. ಆಗಾಗ ಭಾರತೀಯ ನಾಯಕರ ಸಲಹೆ ಪಡೆದು ಕೆಲಸಮಾಡುತ್ತಿದ್ದ ಎಂತಲೇ ಗಾಂಧೀಜೀ, ಜನರಲ್ ಸ್ಮಟ್ಸ್ ಜೊತೆಯಲ್ಲಿ ಮಾತಿನ ಒಪ್ಪಂದ ಮಾಡಿಕೊಂಡಾಗ ಈತನೂ ಅದೇ ಷರತ್ತಿನ ಮೇಲೆ ಒಪ್ಪಂದಮಾಡಿಕೊಂಡ. ಮುಂದೆ ಸ್ಮಟ್ಸ್ ಆ ಒಪ್ಪಂದದ ಮುಖ್ಯ ಷರತ್ತನ್ನೇ ತಳ್ಳಿ ಹಾಕಿದಾಗ, ಭಾರತೀಯರು ಗಾಂಧೀಜಿಯ ಮೇಲೆ ಕಿಡಿಕಿಡಿಯಾದಂತೆ, ಈ ಚೀನೀ ನಾಯಕನ ಅನುಯಾಯಿಗಳೂ ಕೆಲವರು ರೇಗಿ, ಆತನನ್ನು ಕೊಂದೇ ಹಾಕುತ್ತೇವೆಂದು ಹೆದರಿಸಿದರು. ಅದು ಜೊಳ್ಳು ಬೆದರಿಕೆಯಲ್ಲವೆಂದು ಚೀನೀ ನಾಯಕನಿಗೆ ಗೊತ್ತಿತ್ತು. ಎಂತಲೇ ಎಷ್ಟೋ ದಿನ ಎಲ್ಲಿ ನೆಲೆ ಸಿಕ್ಕರೆ ಅಲ್ಲಿ, ತಲೆ ಮರೆಸಿಕೊಳ್ಳಬೇಕಾಯಿತು. ಗಾಂಧೀಜಿಯೇನೋ ತಮ್ಮ ಮೇಲೆ ರೇಗಿದ್ದವರನ್ನು ಸಮಾಧಾನ ಮಾಡಿ

ಹಕೋಟೆಗೆ ತಂದರು ಆದರೆ ಚೀನೀ ನಾಯಕ ಲಿಯಾಂಗ್ ಕ್ವಿಗೆ ಅದು ಸಾಧ್ಯವಾಗಲಿಲ್ಲ.

ಅವನ ಜೀವನಕ್ಕೆ ಎಲ್ಲಿ ಅಪಾಯವಾದೀತೋ ಎಂದು ನಮಗೆಲ್ಲಾ ತುಂಬಾ ಯೋಚನೆಯಾಗಿತ್ತು. ಈ ವಿಷಯ ಎಷ್ಟೋ ಸಲ ನಮ್ಮ ನಮ್ಮಲ್ಲಿ ಚರ್ಚೆಯಾಗುತ್ತಿತ್ತು. ಒಂದು ದಿನ ಅತನಿಗೆ ನಮ್ಮ ಮನೆಯಲ್ಲೇ ಬಂದು ಇರುವಂತೆ ಹೇಳಿಕಳಿಸಿದುದಾಗಿ ಗೊತ್ತಾಯಿತು. ಇದನ್ನು ಕೇಳಿ ನನಗೇನು ಅಷ್ಟು ಸಂತೋಷವಾಗಲಿಲ್ಲ ನಾನು ಮಗುವಿನೊಂದಿಗೆ ಒಬ್ಬಳೇ ಅಸಹಾಯಕಳಾಗಿರುವಾಗ, ರೇಗಿದ ಜನ ಗುಂಪು ಕಟ್ಟಿಕೊಂಡು ಬಂದು ಮನೆಯೊಳಗೆ ನುಗ್ಗಿ ಚೀನೀ ನಾಯಕನ ಕೊಲೆಮಾಡುವಾಗ ಕಣ್ಣಾರೆ ಅದನ್ನು ನಿಂತು ನೋಡಬೇಕಾಗುವ ಘೋರ ಚಿತ್ರ ಮನಸ್ಸಿಗೆ ಬಂದೊಡನೆ ಮೈ ನಡುಗುತ್ತಿತ್ತು. ಆದರೆ ಕ್ವಿ ನಮ್ಮ ಆಶ್ರಯದ ಆಹ್ವಾನವನ್ನು ನಿರಾಕರಿಸಿದ್ದರಿಂದ ಈ ಕಷ್ಟವೆಲ್ಲಾ ಸದ್ಯ ಹಾಗೇ ಮಾಯವಾಯಿತು. ಚೀನೀಗಳ ಅಶಾಂತಿಯೂ ತಗ್ಗಿತು. ಆದರೆ ಈ ಬಗ್ಗೆ ಸ್ವಾರಸ್ಯವಾದ ಮಾತುಕಥೆ ಮಾತ್ರ ಬೇಕಾದಷ್ಟು ನಡೆಯಿತು.

ಒಂದು ದಿನ ನಾನು ಗಾಂಧೀಜಿಯನ್ನು ಕೇಳಿದೆ; 'ಕ್ವಿ ನಿಮ್ಮ ಆಹ್ವಾನ ಅಂಗೀಕರಿಸಿ ಇಲ್ಲಿಗೆ ಬಂದು ನಮ್ಮ ಮನೆಯಲ್ಲಿ ಅಡಗಿಕೊಂಡರು ಅಂತಲೇ ಇಟ್ಟುಕೊಳ್ಳಿ ಆಗ ಅವರ ಶತ್ರುಗಳು ಬಂದು ಕೇಳಿದರೆ 'ಅ ಗೂಡಿನಲ್ಲಿದಾರೆ' ಎಂತ ತೋರಿಸಿಬಿಡಬೇಕೋ ಅಥವಾ ಏನಾದರೂ ಸುಳ್ಳುಹೇಳಿ ಇವರನ್ನು ಉಳಿಸಬೇಕೋ ? '

'ಹೇಗೆ ಮಾಡುವುದು ಸರಿ ಎಂತ ನಿನಗೆ ತೋರುತ್ತದೆ?' ಎಂದು ಗಾಂಧೀಜೀ ಮರು ಪ್ರಶ್ನೆ ಮಾಡಿದರು.

'ಏನಾದರೂ ಸುಳ್ಳು ಹೇಳಿ ಕಳಿಸುವುದೇ ಸರಿ ಎನಿಸುತ್ತದೆ ನನಗೆ.'

'ಮನೆಯಲ್ಲಿದಾರಲ್ಲಾ ಕ್ವಿ, ಎಲ್ಲಿದಾರೆ? ಎಂತ ಸ್ಪಷ್ಟವಾಗಿ ಕೇಳಿಬಿಟ್ಟರೆ ಆಗ ಹೇಗೆ ಮಾಡುತ್ತಿ ?'

'ಇಲ್ಲ ಎಂತಲೇ ಹೇಳಿಬಿಡುತ್ತೇನೆ. ಅದೇ ಸೂಕ್ತವಾದದ್ದಲ್ಲವೇ ?'

'ಅಂದರೆ ಸುಳ್ಳು ಹೇಳಿದ ಹಾಗಾಗುತ್ತದಲ್ಲ?'

'ನಿಜ. ಆದರೂ ಇದರಿಂದ ಬರಬಹುದಾದ ಪಾಪ, ಮರಿ ಹೊಕ್ಕವನ ಮರಣಕ್ಕೆ ಅವಕಾಶ ಕೊಡುವ ಘಾತಕದಷ್ಟು ಘೋರವಲ್ಲ.

'ನಿನ್ನದು 'ಜೆಸುಟ' ರೀತಿದ ಒಳ್ಳೇ ಕೆಲಸ ಮಾಡಲು ಎಂಥ ಕೆಟ್ಟದಾರಿ ಹಿಡಿದರೂ ಸರಿ ಎನ್ನುತ್ತೀಯೆ.'

'ನನ್ನನ್ನು ನೀವು 'ಜೆಸುಟ್' ಅಂದರೂ ತನಗೇನೂ ಕೆಡಕೆನಿಸುವುದಿಲ್ಲ. ಎಷ್ಟೋ ಸಲ ಯಾವುದು ಸರಿ, ಯಾವುದು ತಪ್ಪು ಎಂತ ನಿರ್ಧರಿಸುವುದು ತುಂಬಾ ಕಷ್ಟವಾಗುತ್ತದೆ ಇನ್ನೂ ಎಷ್ಟೋ ಸಲ ಹೀಗೆ ಮಾಡಿದರೂ ತಪ್ಪು, ಹಾಗೆ ಮಾಡಿದರೂ ತಪ್ಪೆ. ಎರಡರಲ್ಲಿ ಯಾವುದಾದರೊಂದನ್ನು ಮಾಡಬೇಕಾಗುತ್ತದೆ. ಅಂಥ ಸಂದರ್ಭದಲ್ಲಿ, ತಪ್ಪಿನಲ್ಲೇ ಎರಡರ ಪೈಕಿ ಉತ್ತಮವಾದನ್ನೆ ಮಾಡುತ್ತೇವೆ.'

"ಹೀಗೆ ತಪ್ಪು ಮಾಡಿದರೆ ಅದರಿಂದ ಎಂದೂ ಒಳ್ಳೆಯದಾಗದು" ಗಾಂಧೀಜೀ ಮಾತು ಮುಗಿಸಿದರು.

ಇನ್ನೂ ಒಂದು ಸಲ ಈ ಒಳಿತು ಕೆಡಕಿನ ವಿಚಾರ ಚರ್ಚೆಗೆ ಬಂತು. ಗಾಂಧೀಜೀ ಶುದ್ಧ ಸತ್ಯದ ಕತ್ತಿಯ ತುದಿಯ ಮೇಲೆಯೆ ನಡೆಯಬೇಕು ಎಂದರು.

'ದೇವರ ಅನಂತ ಗುಣಗಳಲ್ಲಿ ಸತ್ಯ ಒಂದು ಮಾತು. ದೇವರಿಗೆ ಇನ್ನೂ ಎಷ್ಟೋ ಗುಣಗಳಿವೆ ಎಂದೆ.'

'ನಿಜ. ಹಾಗೆ ಒಂದು ನಿಯಮವನ್ನು ಮುರಿದರೆ ಎಲ್ಲವನ್ನೂ ಮುರಿದ ಹಾಗೆ' ಗಾಂಧೀಜೀ ಉತ್ತರವಿತ್ತರು.

'ಯಾವುದನ್ನು ನಾವು ದೈವ ನಿಯಮವೆನ್ನುತ್ತೇವೆಯೋ ಅದನ್ನೇ ಮುರಿವುದರಿಂದ, ನಾವು ಪ್ರೀತಿಸುವವರಿಗೆ ಸಹಾಯವಾಗು

ವಂತಿದ್ದರೆ, ಆ ಶಾಸನೋಲ್ಲಂಘನೆಯ ಶಿಕ್ಷೆಯನ್ನು ನಾವೇ ಅನುಭವಿಸಬೇಕಾದರೂ, ಅದೊಂದು ಮಹಾ ತ್ಯಾಗವೇ ಆಗಬಹುದಲ್ಲವೇ?'

'ನೀನು ತಪ್ಪು ಮಾಡಿ, ಅದರಿಂದ ಇನ್ನೊಬ್ಬರನ್ನು ಉಳಿಸಬಹುದು ಎನಿಸುತ್ತದೇನು ನಿನಗೆ?'

'ಅದು ಹೀಗೇ ಎಂದು ಶುದ್ಧವಾಗಿ ಹೇಳಲಾರೆ. ಹಾಗಾಗದೆ ಇರಬಹುದು. ಎಲ್ಲರೂ ಪಾಪದ ಬಗ್ಗೆ ನಿಮ್ಮ ಹಾಗೇ ಯೋಚನೆ ಮಾಡುವುದಿಲ್ಲ. ಒಬ್ಬೊಬ್ಬರ ತರ್ಕ ಒಂದೊಂದು ರೀತಿ. ತಾನು ನರಕಕ್ಕೆ ಹೋಗಬೇಕಾಗಿ ಬಂದರೂ ಸರಿಯೆ, ಹೆಣ್ಣು, ತಾನೊಲಿದವರ ಪಾಪದ ಭಾರವನ್ನು ತನ್ನ ಹೆಗಲ ಮೇಲೆ ಹೊರಲು ಸಿದ್ಧಳಾಗಿರುತ್ತಾಳೆ. ದೇವರೇ ಬಂದು ಯಾರು ಈ ಪಾಪಕಾರ್ಯ ಮಾಡಿದವರು ಎಂತ ಕೇಳಿದರೆ 'ಪ್ರಭೂ, ನಾನೇ' ಎಂದೂ ಹೇಳಿಯಾಳು. ಆ ಭಾರ ಹೊರುವುದೂ ಆಕೆಗೆ ಸಂತೋಷವೇ, 'ಪ್ರಭೂ ನಾನು ಯಾರನ್ನು ಪ್ರೀತಿಸಿದೆನೋ ಅವನು ಈ ಪಾಪ ಮಾಡಿದ' ಎಂತ ಸತ್ಯಪಾಲನೆಗಾಗಿ ಆಕೆ ಹೇಳಿಯಾಳು ಎಂದು ನಿಮಗನಿಸುತ್ತಿರಬಹುದಲ್ಲವೆ?'

'ನೀನು ತುಂಬಾ ಉತ್ಪ್ರೇಕ್ಷೆ ಮಾಡುತ್ತಿದೀಯೆ!' ಗಾಂಧೀಜೀ ನಗುತ್ತಾ ಹೇಳಿದರು. 'ನನ್ನ ಅರ್ಥ ಅದಲ್ಲ. ನಮ್ಮ ಮಟ್ಟವನ್ನು ನಾವು ಸರಿಯಾಗಿಟ್ಟುಕೊಳ್ಳಬೇಕು. ಇಲ್ಲವಾದರೆ ಸದಾ ಕೆಸರಿನಲ್ಲೇ ಒದ್ದಾಡುತ್ತಿರಬೇಕಾದೀತು'

ನಮ್ಮ ಮಟ್ಟವನ್ನು ನಾವು ಸರಿಯಾಗಿಟ್ಟುಕೊಳ್ಳಬೇಕು: ಈ ವಾಕ್ಯ ಗಾಂಧೀಜಿಯ ನಿತ್ಯಪಾರಾಯಣದ ಮಾತು.

೦ ೦ ೦ ೦

ಇನ್ನೊಂದು ಸಲ ಹೀಗೆ ನಡೆದ ಚರ್ಚೆಯಿಂದ ನಾವೊಂದು ಒಳ್ಳೆಯ ಪಾಠ ಕಲಿತೆ. ನಮ್ಮಿಬ್ಬರ ಗೆಳತಿಯೊಬ್ಬಳು ತಮಗೆ ಸುಳ್ಳು

ಹೇಳಿ ಮೋಸ ಮಾಡಿದ್ದು ಗಾಂಧೀಜಿಗೆ ಗೊತ್ತಾಯಿತು. ಇದರಿಂದ ಅವರಿಗೆ ನಿರಾಸೆಯೂ ಆಯಿತು; ತುಂಬಾ ನೋವೂ ಆಯಿತು. ಅದನ್ನೆ ನನ್ನ ಮುಂದೆ ಹೇಳಿದರು. ನನಗೂ ಇದನ್ನು ಕೇಳಿ ದುಃಖ ವಾಯಿತು. ಗಾಂಧೀಜಿಗಿಂತ ಹೆಚ್ಚಾಗಿ ನನ್ನ ಗೆಳತಿಯ ಬಗ್ಗೆ ದುಃಖವಾಯಿತು ಆಕೆಗೆ ಗಾಂಧೀಜಿಯಲ್ಲಿ ತುಂಬಾ ಆದರ; ಅವರ ಕೈಲಿ ಒಳ್ಳೆಯವಳು ಎನಿಸಿಕೊಳ್ಳಬೇಕೆಂಬ ಆಸೆ. ಆದರೆ ಮಾಡುತ್ತಾಳೇನು? ಗಾಂಧೀಜೀ ಕೆಟ್ಟದೆನ್ನುವಂತ ಕೆಲವು ಕೆಲಸ ಮಾಡುವುದು ಆಕೆಗೆ ಸ್ವಭಾವವಾಗಿ ಹೋಗಿತ್ತು. ಸಾಧ್ಯ ವಾದರೆ ಅವನ್ನು ಅವರಿಗೆ ತಿಳಿಯದಂತೆ ಮುಚ್ಚಿಡಬೇಕೆಂದೂ ಯತ್ನಿ ಸುತ್ತಿದ್ದಳು. ಗಾಂಧೀಜೀ ಆಕೆಯನ್ನು ಕೆಟ್ಟವಳೆಂದು ದೂರಮಾಡಿ ಬಿಟ್ಟರೆ ಆಕೆಯ ಹೃದಯಕ್ಕೆ ಎಂದೂ ಮಾಯದಂಥ ಗಾಯವಾಗು ತ್ತಿತ್ತು

'ಆಕೆ ಮಾಡಿದ್ದು ತಪ್ಪು ನಾನು ಒಪ್ಪಿಕೊಳ್ಳುತ್ತೇನೆ. ಆದರೆ ನೀವು ಎಲ್ಲರಿಂದಲೂ ತುಂಬಾ ಹೆಚ್ಚಿನ ನಡತೆ ನಿರೀಕ್ಷಿಸುತ್ತೀರಿ. ಅವರಿಗೆ ಅಸಾಧ್ಯವಾದದ್ದನ್ನು ಅವರಿಂದ ಬೇಡುತ್ತೀರಿ. ಅದಕ್ಕಾಗೇ ಅವರು ಮೋಸಮಾಡಲು ಯತ್ನಿಸುತ್ತಾರೆ; ಅದು ತಮ್ಮನ್ನು ತಾವು ಉಳಿಸಿಕೊಳ್ಳಲು. ನಿಮ್ಮ ಬಗ್ಗೆ ಅವಳಿಗೆ ಅಷ್ಟು ಗೌರವವಿಲ್ಲದಿದ್ದಲ್ಲಿ, ನಿಮಗೆ ಈ ಮೋಸಮಾಡುವ ಪ್ರಸಂಗವೇ ಬರುತ್ತಿರಲಿಲ್ಲ' ನಾನು ಹೇಳಿದೆ.

'ಒಂದೇ ಸಮನಾಗಿ ನನಗೆ ಸುಳ್ಳು ಹೇಳುತ್ತಿದಾಳೆ ಆಕೆ ಕಡೆ ಗಮ ನನಗೆ ಗೊತ್ತಾಯಿತು. ಎಂತ ತಿಳಿದ ಮೇಲೆ ಏನೇನೋ ನೆಪ ಹೇಳಿದಳು' ಎಂದರು ಗಾಂಧೀಜೀ.

'ಅದೆಲ್ಲಾ ನಾನೂ ಒಪ್ಪಿಕೊಳ್ಳುತ್ತೇನೆ. ಆದರೆ ಇಷ್ಟೆ. ಇದೆಲ್ಲಾ ತಿಳಿಯದೆ ಮಾಡಿದ ತಪ್ಪು. ನಿಮ್ಮ ಸ್ನೇಹವೆಂದರೆ ಅವಳಿಗೆ ಪ್ರಪಂಚಕ್ಕಿಂತ ಹೆಚ್ಚು. ನೀವು, ಅವಳು ಕೆಟ್ಟವಳು ಎನ್ನಬಾರದು ಎಂತ ತುಂಬಾ ಆಶೆ.'

'ಹಾಗೆಂತಲೇ ಸತ್ಯ ಹೇಳಿ ನನ್ನನ್ನು ನಂಬುವುದಕ್ಕಿಂತ, ಸುಳ್ಳು ಹೇಳಿ ಮೋಸಮಾಡುವುದೇ ಮೇಲು ಎನಿಸಿತೇನು ಆಕೆಗೆ? ಊಹು, ಇಂಥ ನೆಪಗಳಿಂದ ಏನೂ ಪ್ರಯೋಜನವಿಲ್ಲ.' ದುಃಖ ದಿಂದಲೇ ಕೇಳಿದರು ಗಾಂಧೀಜೀ.

'ಏಕಿಲ್ಲ! ಅವಳು ಯಾವುದನ್ನು ಮಾಡುತ್ತಿದ್ದಳೋ ಅವನ್ನು ಒಳ್ಳೆಯದೆಂದೇ ಮಾಡುತ್ತಿದ್ದಳು. ನಿಮಗೆ ತಾನು ಮೋಸಮಾಡು ತ್ತಿದೇನೆಂಬುದು ಆಮೇಲೆ ಅವಳಿಗೇ ಗೊತ್ತಾಯಿತು. ಆದರೆ ಅದೂ ತಪ್ಪಲ್ಲವೆಂದೇ ಅವಳಿಗೆ ಅನಿಸಿತ್ತು. ನೀವೇ ಎಷ್ಟೋ ಸಲ ಹೇಳಿ ದ್ದೀರಿ: ಕೃತಿ ಕೆಟ್ಟದಾಗುವುದು ಒಳ್ಳೆಯದಾಗುವುದು, ಅದನ್ನು ಮಾಡುವಾಗಿನ ಮನೋಭಾವದಿಂದ ಎಂತ. ಅಂದ ಮೇಲೆ ನಾವು ಮಾಡುತ್ತಿರುವುದು ಒಳ್ಳೆಯದು ಎಂತಲೇ ನಮಗನಿಸುತ್ತಿದ್ದರೆ ಅದು ಕೆಟ್ಟದಾಗುವುದು ಹೇಗೆ? ತಾನು ಮಾಡುತ್ತಿರುವುದು ಸ್ವಲ್ಪ ಬುದ್ಧಿ ಗೇಡಿತನದ ಕೆಲಸವಾದರೂ ಕೆಟ್ಟದಲ್ಲವೆಂದೇ ಆಕೆ ನಂಬಿದ್ದಳು. ಆಕೆ.... ...'

'ಹಾ' ಗಾಂಧೀಜೀ ಅಡ್ಡ ಬಂದು ಹೇಳಿದರು. 'ನಿನ್ನ ಮಾತಿನಲ್ಲಿ ನೀನೇ ಅವಳ ಕಾರ್ಯವನ್ನು ತಿರಸ್ಕಾರ ಮಾಡಿದೀಯೆ. ಕೆಟ್ಟ ಕೆಲಸ ಮಾಡುವುದು, ಕೆಟ್ಟದು ಎಂತ ಗೊತ್ತಿರುವುದು ಒಂದು; ಆತನಿಗೆ ಯಾವುದು ಸರಿ, ಯಾವುದು ತಪ್ಪು, ಯಾವುದು ಒಳ್ಳೆಯದು ಯಾವುದು ಕೆಟ್ಟದು ಎಂಬುದೂ ಗೊತ್ತಿದೆ ಎಂದು ಹೇಳಿದ ಹಾಗಾಯಿತು. ತಪ್ಪೆಂದು ತಿಳಿದೂ ತಪ್ಪು ಮಾಡುವವನಿಗೆ ಉದ್ಧಾರ ವಾಗುವ ಆಸೆ, ತೀರಾ ಸ್ವಲ್ಪವಾದರೂ, ಇದೆ. ಆದರೆ ತಿಳಿಯದೆ ತಪ್ಪು ಮಾಡುವವನಿಗೆ ಮಾತ್ರ ಮೋಕ್ಷವೇ ಇಲ್ಲ ತಪ್ಪು ಮಾಡಿ, ಅದನ್ನು ತಿಳಿದುಕೊಂಡು ಪಶ್ಚಾತ್ತಾಪಪಟ್ಟು, ಮತ್ತೆ ಅಂಥ ತಪ್ಪು ಮಾಡದ ನಿರ್ಧಾರ ಮಾಡಬಹುದು ಮನುಷ್ಯ. ಆದರೆ ಒಳಿತು ಕೆಡಕುಗಳ ಅರಿವೇ ಇರದಿದ್ದರೆ, ಆ ಜ್ಞಾನವೇ ಅವನಿಗಿರದಿದ್ದರೆ, ಅವನಲ್ಲಿರುವ ದೇವರ ಅರಿವೇ ಅವನಿಗಿಲ್ಲವೆಂದು ಅರ್ಥವಾಗುತ್ತದೆ. ಅಂಥ ಜನಕ್ಕೂ

ಪಶುವಿಗೂ ಏನೂ ವ್ಯತ್ಯಾಸವಿಲ್ಲ. ನೈತಿಕ ಬೆಲೆ ತಿಳಿಯದ ಮನುಷ್ಯ ಬರೀ ಪಶು, ಅಷ್ಟೆ."

ಅದಕ್ಕೆ ಉತ್ತರ ಹೇಳಲು ನನಗೆ ತೋಚಲಿಲ್ಲ; ಸುಮ್ಮನಾದೆ ಗಾಂಧೀಜಿಯ ಮಾತಿನ ಸತ್ಯ ನನ್ನ ಮೇಲೆ ತುಂಬಾ ಪರಿಣಾಮವನ್ನುಂಟುಮಾಡಿತು. ಅಂದಿನಿಂದ ನಾನು ಇದನ್ನು ತಿಳಿಯದೆ ಮಾಡಿದೆ ಎಂದು ಹೇಳಿ, ತಪ್ಪನ್ನು ಸರಿಎನಿಸಿಕೊಳ್ಳುವ ಪ್ರಯತ್ನ ಮಾಡುವುದನ್ನು ಬಿಟ್ಟುಬಿಟ್ಟೆ ಗಾಂಧೀಜೀ ಆಹೊತ್ತು ಒಂದು ಮಹಾ ಸತ್ಯವನ್ನು ಉಸುರಿದರೆಂದು ನನಗೆ ಗೊತ್ತಾಯಿತು. ವಿಕಾಸದ ಏಣಿಯಲ್ಲಿ ನಮ್ಮನಮ್ಮ ಒಳ್ಳೆ ಕೆಟ್ಟದರ ಪರಿಜ್ಞಾನದ ತೂಕಕ್ಕನುಸಾರವಾಗಿ ಸ್ಥಾನಮಾನ. ಪಶು ಅರಣ್ಯ ಜೀವನ ನಡಸಿದರೆ ಗಾಂಧೀಜೀ ಏನೂ ಅನ್ನುತ್ತಿರಲಿಲ್ಲ ಅದು ಹೇಳಿ ಕೇಳಿ ಪಶು; ಹಾಗೆ ಮಾಡುವುದೇ ಸರಿ. ಮಾನವ ಕಾಲದ ಹಳುಳಿಗಳು ಸ್ವಾತಂತ್ರರಾಗಿ ಆಚರಿಸಿದರೂ ಗಾಂಧೀಜೀ ಏನೂ ಅನ್ನುತ್ತಿರಲಿಲ್ಲ. ಆದರೆ ನಾವು ಉತ್ತಮ ಶ್ರೇಣಿಗೆ ಸೇರಿದವರು ಎಂದುಕೊಂಡವರು ಅದಕ್ಕೆ ತಕ್ಕಹಾಗೆ ನಡೆಯಬೇಕು. ಆ ಜೀವನಕ್ಕೆ ಸತ್ಯ ಮತ್ತು ಮರ್ಯಾದೆ ತುಂಬಾ ಅಗತ್ಯ.

ಂ ಂ ಂ ಂ

ನಾ ಮೊದಲೇ ಹೇಳಿದ ಹಾಗೆ ತಾವು ನಂಬಿದವರು ತಮ್ಮನ್ನು ಬೇಕೆಂದೇ ಮೋಸಮಾಡಿದ್ದು ಗೊತ್ತಾದರೆ ಗಾಂಧೀಜೀ ತುಂಬಾ ನೊಂದುಕೊಳ್ಳುತ್ತಿದ್ದರು. ತಾವು ಗೆಳೆಯರೆಂದುಕೊಂಡವರು ತಮ್ಮನ್ನು ಮನಸಾರೆ ತಪ್ಪು ದಾರಿ ಹಿಡಿಸಿದರೆಂದು ನಂಬುವುದೇ ಅವರಿಗೆ ತುಂಬಾ ಕಷ್ಟವಾಗುತ್ತಿತ್ತು. ಈ ಮನೋಭಾವದಿಂದ, ದೃಷ್ಟಿಕೋಣದಿಂದ ಬೇರೆಯವರ ಮೇಲೆ ಪರಿಣಾಮ ಏನೇ ಆಗಲಿ, ಆಗಾಗ ನನಗಂತೂ ತುಂಬಾ ಕಷ್ಟವಾಗುತ್ತಿತ್ತು. ನನ್ನ ಗಂಡ ಯಾರಾದರೊಬ್ಬರನ್ನು ಬಾಯಿತುಂಬಾ ಹೊಗಳುತ್ತಿದ್ದಾಗ, ನಾ ಸುಮ್ಮನಿದ್ದರೆ ಅವರ ಬಗ್ಗೆ ಏನೋ ಸಂಶಯ, ಅನುಮಾನ, ಇಲ್ಲವೆ ಅಸೂಯೆ ತಾಳಿದಂತೆ ಗಾಂಧೀಜೀ ತಿಳಿದುಕೊಳ್ಳುತ್ತಿದ್ದರು. ಇದು ನನಗೂ

ಗೊತ್ತಿತ್ತು. ನನ್ನ ಈ ಮೌನ ಅವರ ಪಾಲಿಗೆ ಸಮಸ್ಯೆಯಾಗಿಬಿಡು ತ್ತಿತ್ತು.

ಗಾಂಧೀಜಿಗೆ ಎಷ್ಟೋ ಜನ ಉತ್ಸಾಹೀ ಯುವಕ ಶಿಷ್ಯರಿದ್ದರು. ಅವರ ಪೈಕಿ ಎಷ್ಟೋ ಜನ ನನಗೂ ಚೆನ್ನಾಗಿ ಪರಿಚಿತರು. ನನ್ನನ್ನು ನೋಡಲು ಬರುತ್ತಿದ್ದರು. ಯಾವಾಗಾದರೂ ಸಭೆ ಸಮಿತಿಗಳಲ್ಲಿ ಸೇರಿದಾಗಲಾದರೂ ಒಬ್ಬರನ್ನೊಬ್ಬರು ನೋಡಿ ಆ ದಿನದ ವಿಷಯದ ಬಗ್ಗೆ ಚರ್ಚಿಸುತ್ತಿದ್ದೆವು ಅವರಿಗೆ ನನ್ನ ವಿಮರ್ಶೆಯ ಹೆದರಿಕೆ ಇಲ್ಲದ್ದರಿಂದ ತಮ್ಮ ಬಗ್ಗೆ, ಇತರರ ಬಗ್ಗೆ ಎದೆಬಿಚ್ಚಿ ಮಾತಾಡುತ್ತಿ ದ್ದರು. ಇತರರಿಗೆ ಘೋರ ಹೋರಾಟವಾದ ಚಳುವಳಿ ಅವರ ಪಾಲಿಗೆ ಸಂತೋಷದ ಸಾಹಸವಾಗಿತ್ತು ಯುವಕರಿಗೇ ಹಾಗೆ; ಎಷ್ಟೆಂದರೂ ಬಿಸಿ ರಕ್ತ. ಇವರಿಗೆ ನನ್ನಲ್ಲಿ ತುಂಬಾ ನಂಬಿಕೆ. ಎಂತಲೇ ತಮ್ಮ ಗುಟ್ಟುಗಳನ್ನೆಲ್ಲಾ ನನ್ನ ಮುಂದೆ ಹೇಳುತ್ತಿದ್ದರು. ನಾನೂ ಅದನ್ನು ಇತರರಿದುರು ಹೇಳುವಹಾಗಿರಲಿಲ್ಲ. ಎಷ್ಟಾದರೂ ಗುಟ್ಟು ಗುಟ್ಟೆ !

ಚಳುವಳಿಯ ಕೊನೆಯ ದಿನಗಳಲ್ಲಿ, ಜೊಹಾನೆಸ್‌ಬರ್ಗಿಗೆ ದಕ್ಷಿಣಕ್ಕೆ ಇಪ್ಪತ್ತುಮೈಲಿ ದೂರದಲ್ಲಿ ಹೊಸದೊಂದು ಆಶ್ರಮ-ಟಾಲ್ ಸ್ಟಾಯ್ ಆಶ್ರಮ-ಸ್ಥಾಪಿತವಾಯಿತು ಆಶ್ರಮವಿದ್ದ ಹೊಲ ಶೈತ- ಶಿಲ್ಪಿ ಹರ್ಮನ್‌ಕಾಲೆನ್‌ಬಾಕರಿಗೆ ಸೇರಿದ್ದು. ಅವರು ಅದನ್ನು ಆತ್ಮೋ ದ್ಧಾರ ಪ್ರಯತ್ನದಲ್ಲಿ ಸೆರೆ ಸೇರಿದವರ ಸಂಸಾರಗಳಿರುವುದಕ್ಕಾಗಿ ಆಶ್ರಮ ಸ್ಥಾಪಿಸಲು ಗಾಂಧೀಜಿಯ ವಶಕ್ಕೆ ಕೊಟ್ಟರು. ಬೇರೆ ಕಡೆ ಮಾಡಿದ ಹಾಗೆ ಇಲ್ಲೂ ಗಾಂಧೀಜೀ ತಮ್ಮ ಪ್ರೀತಿಯ ಕೆಲವು ತತ್ತ್ವಗ ಳನ್ನು ಆಚರಣೆಗೆ ತರಲು ಯತ್ನಿಸಿದರು. ಇಲ್ಲಿ ಗಂಡಸರ ಹೆಂಗಸರ ವಿಭಾಗ ಬೇರೆ ಬೇರೆಯಾಗಿತ್ತು. ಗಂಡ-ಹೆಂಡಿರನ್ನು ಕೂಡಾ ಒಡೆದು ಬೇರೆ ಬೇರೆ ಕಡೆ ಇಡುತ್ತಿದ್ದರು. ಆಶ್ರಮದಲ್ಲಿರುವಷ್ಟು ದಿನ ಅವರು ಬ್ರಹ್ಮಚಾರಿಗಳಾಗಿರಬೇಕಾಗಿತ್ತು.

ತೀರಾ ಸರಳ ರೀತಿಯ ಆಹಾರ: ಟೀ, ಕಾಫಿ, ಸಕ್ಕರೆ, ಜಾಂ, ಮಸಾಲೆ ಪದಾರ್ಥ, ಕಡೆಗೆ ಉಪ್ಪು ಕೂಡಾ ಆಹಾರದ ಪಟ್ಟಿಯಲ್ಲಿರಲಿಲ್ಲ. ಆ ಕಾಲಕ್ಕೆ ಗಾಂಧೀಜಿಗೆ ಉಪ್ಪಂತೂ ತೀರಾ ನಿಷಿದ್ಧವಾಗಿತ್ತು ಆಶ್ರಮವಾಸಿಗಳೆಲ್ಲಾ ಈ ನಿಯಮಗಳನ್ನು ಪಾಲಿಸುತ್ತಿದ್ದರು. ಹಾಗೆಂದೇ ಹೇಳಬೇಕು. ನನ್ನ ಪರಿಚಯದ ತರುಣರು ಕೆಲವರಿಗೆ ಈ ನಿಷ್ಠುರ ಸನ್ಯಾಸಿಜೀವನ ಸರಿಹೋಗುತ್ತಿರಲಿಲ್ಲ. ಆದಕ್ಕೆ ಅವರು ತಮಗೆ ಬೇಕಾದುದನ್ನು ಹೇಗೋ ಕಳ್ಳತನದಲ್ಲಿ ತರಿಸಿಕೊಳ್ಳುತ್ತಿದ್ದರು. ಹೇಗೆ ತರಿಸಿಕೊಳ್ಳುತ್ತಿದ್ದರೆಂದು ನನಗೆ ಹೇಳಿದರು. ಸಣ್ಣ ಹುಡುಗರ ಹಾಗೆ 'ಕಳ್ಳ ಪೆಟ್ಟಿಗೆ'ಗಳನ್ನಿಟ್ಟುಕೊಂಡಿದ್ದು ಎಲ್ಲಾ ಮಲಗಿದ ಮೇಲೆ ಎದ್ದು ತಿನ್ನುತ್ತಿದ್ದರು. ನನಗೇನೋ ಇವರ ಬಗ್ಗೆ ಸಹಾನುಭೂತಿಯೇ ಇತ್ತು. ಈ ಸನ್ಯಾಸಿಯ ಊಟ ಹರೆಯದ ಹುಡುಗರಿಗೆ ಹೇಗೆ ಸರಿಬೀಳಬೇಕು! ಹದಿನೆಂಟು, ಇಪ್ಪತ್ತು ವರ್ಷದ ತರುಣರವರು. . ಒಂದು ದಿನ ಗಾಂಧೀಜೀ ನನ್ನೆದುರಿಗೆ ಈ ಹುಡುಗರು ರಸಗವಳವನ್ನು ಬಿಟ್ಟು ಉಪ್ಪಿಲ್ಲದ ಈ ಸಾದಾ ಊಟಕ್ಕೆ ಹೇಗೆ ಹೊಂದಿಕೊಂಡಿದಾರೆ' ಎಂಥ ಸರಳ ಜೀವನ ' ನಡೆಸುತ್ತಿದಾರೆ ಎಂದು ಹೊಗಳುತ್ತಿದ್ದರು. ನಾನು ಸುಮ್ಮನಿದ್ದೆ.

'ಏಕೆ ಸುಮ್ಮನಿದೀಯೆ ? ಈ ಹುಡುಗರ ತ್ಯಾಗಬುದ್ಧಿ ನಿನಗೆ ಮೆಚ್ಚಿಗೆಯಾಗುವುದಿಲ್ಲೇನು ?' ಗಾಂಧೀಜೀ ಕೇಳಿದರು.

'ಮೆಚ್ಚದೆ ಏನು, ಆದರೆ ನಾನಿದನ್ನು ತ್ಯಾಗವೆಂದು ಕರೆಯಲಾರೆ. ಇದೆಲ್ಲಾ ಅವರಿಗೆ ಒಳ್ಳೇ ಸಂತೋಷವಾಗಿದೆ. ನನಗಂತೂ ಹಾಗೆ ಕಾಣಿಸುತ್ತಾರೆ.'

'ಅದೇ ಅದರ ಸೊಗಸು; ಎಷ್ಟು ಸಂತೋಷವಾಗಿದಾರೆ, ಎಂಥಾ ಸರಳ, ನಿಷ್ಠ ಹುಡುಗರು!' ಎಂದರು ಗಾಂಧೀಜೀ.

'ಹೂ' ಎಂದೆ ನಾನು ಅವರ ಮಾತು ನಂಬದವಳಂತೆ.

' ಏಕೆ ? ನೀನೇನೋ ಯೋಚಿಸುತ್ತಿದೀಯೆ ' ಎಂದರು ಗಾಂಧೀಜೀ.

'ಊಹು. ಅಂಥ ಮಹತ್ವದ್ದೇನು ಅಲ್ಲ.' ಎಂತ ನಾ ಉತ್ತರ ಕೊಟ್ಟೆ.

ಟೀ, ಕಾಫಿ, ಸಕ್ಕರೆ, ಉಪ್ಪು-ಇನ್ನೂ ಹತ್ತು ನಿಷಿದ್ಧ ಪದಾರ್ಥ ಆಶ್ರಮದೊಳಗೆ ಬರುತ್ತಿತ್ತೆಂಬುದು ಗಾಂಧೀಜಿಗೇನು ಗೊತ್ತು !

೦ ೦ ೦ ೦

೧೪

ಇಂಗ್ಲೆಂಡಿನ ಹೆಂಗಸರ 'ಓಟಿನ ಚಳುವಳಿ' ಬಗ್ಗೆ ಗಾಂಧೀಜಿಗೆ ತುಂಬಾ ಗೌರವವಿತ್ತೆಂದು ನಾನು ಈ ಮೊದಲೇ ತಿಳಿಸಿದೇನೆ.

ಒಂದು ದಿನ ಪ್ರಮುಖ ಭಾರತೀಯ ವ್ಯಾಪಾರಿಯೊಬ್ಬರು ಅನುಕೂಲ ಮಾಡಿಕೊಟ್ಟ ಸಭಾಂಗಣದಲ್ಲಿ ನನ್ನ ಮೊದಲ ಮಹಿಳಾ ಸಭೆ ನಡೆಯಿತು. ಸುಮಾರು ನಲವತ್ತು ಜನ ಹೆಂಗಸರು ಬಂದಿದ್ದರು. ಎಲ್ಲಾ ವರ್ತಕರ ಮನೆ ಹೆಂಗಸರು. ಮಕ್ಕಳುಮರಿ ಸಹಿತವಾಗಿ ಬಂದಿದ್ದರು ತಮ್ಮ ಗಂಡಸರ ಹೋರಾಟದ ಬಗ್ಗೆ ನಾ ಹೇಳಿದ್ದೆಲ್ಲವನ್ನು, ತುಂಬಾ ಉತ್ಸುಕತೆಯಿಂದ ಕೇಳಿದರು. ಸಂಕ್ಷಿಪ್ತವಾಗಿವಿದ್ಯಮಾನವೆಲ್ಲವನ್ನು ಹೇಳಿದೆ. ಎಷ್ಟೋ ಪ್ರಶ್ನೆ ಕೇಳಿದರು. ಗಾಂಧೀಜೀ ಏನು ಮಾಡುತ್ತಿದ್ದಾರೆ? ಏಕೆ? ಹೇಗೆ? ನನಗೆ ತಿಳಿದ ಮಟ್ಟಿಗೆ ಎಲ್ಲಾ ತಿಳಿಸಿ ಇಂಗ್ಲೆಂಡಿನಲ್ಲಿ ನಡೆಯುತ್ತಿದ್ದ ಸ್ತ್ರೀಯರ ಓಟಿನ ಹಕ್ಕಿನ ಹೋರಾಟದ ವಿಚಾರ ತಿಳಿಸಿದೆ. ಇದೆಲ್ಲಾ ಆದ ಮೇಲೆ ಹದಿನೈದು ದಿನಕ್ಕೊಂದು ಸಾರಿ ನಾವು ಸಭೆ ಸೇರಿಸಬೇಕೆಂದು ತೀರ್ಮಾನವಾಯಿತು. ಇದೇ ಮುಂದೆ ಟ್ರಾನ್ಸ್‌ವಾಲ್ ಭಾರತ ಮಹಿಳಾ ಸಂಘವಾಗಿ ಬೆಳೆದು ಸತ್ಯಾಗ್ರಹ ಚಳುವಳಿಯಲ್ಲಿ ಹೆಚು ಸೇವೆ ಸಲ್ಲಿಸಿತು.

ಗಾಂಧೀಜೀ ಜೈಲಿನಿಂದ ಹೊರ ಬಂದ ಮೇಲೆ ಹೆಂಗಸರ ಈ ಹೊಸ ಚಳುವಳಿ ವಿಚಾರ ಕೇಳಿ ತುಂಬಾ ಸಂತೋಷಪಟ್ಟರು. ನನ್ನನ್ನು ಬಾಯಿ ತುಂಬಾ ಹೊಗಳಿದರು.

‘ ಹೆಂಗಸರ ನೆರವಿನಿಂದ ಗಂಡಸರ ಕೈ ತುಂಬಾ ಬಲವಾಗುತ್ತದೆ ಹೆಣ್ಣು ಜಗತ್ತಿನ ಕಾರ್ಯದಲ್ಲಿ ಹೆಚ್ಚು ಹೆಚ್ಚು ಭಾಗವಹಿಸುತ್ತಿದಾಳೆ ಈಗೀಗ. ಎಂಥ ಚಳುವಳಿಗಾಗರೂ ಹೆಂಗಸರದು ಒಳ್ಳೆ ಸೇನೆ’ ಎಂದರು.

‘ ಹೆಂಗಸರು ಗಂಡಸರಿಬ್ಬರೂ ಸಾರ್ವಜನಿಕ ರಂಗಕ್ಕಿಳಿದರೆ, ಗೃಹಕಲಹಕ್ಕೆ ಕಾರಣವಾಗದೆ? ಎಂದು ನಾನು ಕೇಳಿದೆ.

‘ ಹಾಗಾದರೂ ಆಗಬಹುದು.’

‘ ಇಬ್ಬರೂ ಒಂದೇ ನೇರಕ್ಕೆ ಯೋಚಿಸುವುದಿಲ್ಲ. ಒಬ್ಬರ ಮನಸ್ಸು ಒಂದು ಬಗೆ. ಹೆಂಡತಿ ಗಂಡನ ವಿರುದ್ಧವಾಗಿ ಯೋಚಿಸಿಯಾಳು. ಹೀಗಾದರೆ ಮನೆಯ ಸುಖಶಾಂತಿ ಉಳಿದೀತೆ?’

‘ ಈಗಲೂ ಹೆಂಗಸರು ಅದನ್ನು ಮಾಡಬಹುದು ತಮಗೆ ಬೇಡಾದ್ದನ್ನೇನಾದರೂ ಗಂಡ ಮಾಡಿದರೆ, ಅತ್ತು ಕರೆದು ಜಗಳ ವಾಡಬಹುದಲ್ಲ? ಗಂಡ ಹೆಂಡಿರು ಜಗಳವಾಡಲು ಸಾರ್ವಜನಿಕ ಕೆಲಸವೇ ಆಗಬೇಕೇನು?’ ಎಂದರು ಗಾಂಧೀಜೀ.

‘ ಭಾರತೀಯರ ಮನೆಯಲ್ಲೂ ಹಾಗಾದೀತೆ? ಛೆ! ಛೆ! ಎಂದೂ ಭಾರತೀಯರ ಮನೆಯಲ್ಲಿ ಇಂಥ ವಿರಸವಾಗದು’ ಎಂದು ನಾನು ಗಾಂಧೀಜೀಯನ್ನು ನಗೆಚಾಟಿಕೆಗೆ ರೇಗಿಸಿದೆ.

ಗಾಂಧೀಜೀ ನಗುತ್ತಾ ಹೇಳಿದರು. ‘ಅಹಿಂಸೆ ಒಳ್ಳೆ ಪ್ರಬಲ ವಾದ ಶಸ್ತ್ರವೆಂಬುದನ್ನು ನನಗೆ ಎಂದೂ ಹೆಂಗಸರ ಹಾಗೆ ಮತ್ತಾರೂ ಕಲಿಸಲಿಲ್ಲ. ತನಗಿಷ್ಟವಿಲ್ಲದ್ದನ್ನು, ಖಂಡಿತವಾಗಿ ಮಾಡಲಾರೆ ಎಂಬುದನ್ನು ಮಾಡಿಸಲು ನನಗೂ ಶಕ್ತಿ ಇಲ್ಲವೆಂಬುದನ್ನು ಬಾ ನನಗೆ ಚೆನ್ನಾಗಿ ಕಲಿಸಿದಾಳೆ. ಸುಮ್ಮನೆ ಕೂತುಬಿಡುತ್ತಾಳೆ; ಏನಾದರೂ ಸರಿಯೆ ನಾನಿನ್ನೇನು ಮಾಡಲಿ. ಸುಮ್ಮನಾಗುತ್ತೇನೆ.’

೦ ೦ ೦ ೦

ನಮ್ಮ ಪರಿಚಯದವರ ಪೈಕಿ ಒಬ್ಬ ಭಾರತೀಯರಿದ್ದರು. ಅವರಿಗೆ ಸುಮಾರು ನಲವತ್ತು ವರ್ಷ ವಯಸ್ಸು. ಅಷ್ಟಿಷ್ಟು ಕಲಿತವರು. ತಾವು ಗಾಂಧೀಜಿಯ ಅನುಯಾಯಿ ಎಂತ ಹೇಳಿಕೊಳ್ಳುತ್ತಿದ್ದರು ಇವರು ಒಂದುಸಲ ಭಾರತಕ್ಕೆ ಹೋಗಿ ಹಿಂದಿರುಗಿ ಬರುವಾಗ ಜೊತೆಯಲ್ಲಿ ಹೊಸ ಹೆಂಡತಿಯನ್ನು ಕರೆದುಕೊಂಡು ಬಂದರು. ಅವಳು ಹದಿಮೂರು ವರ್ಷದ ಹಸುಳೆ. ಇದನ್ನು ನೋಡಿ ಗಾಂಧೀಜಿಗೆ ತುಂಬಾ ಬೇಸರವಾಯಿತು. ಅವರ ನಡತೆಯನ್ನು ತುಂಬಾ ಕಟುವಾಗಿ ತಿರಸ್ಕರಿಸಿದರು. ಇಂಥ ವಿಷಮ ದಾಂಪತ್ಯದ ಸಂಖ್ಯೆ ದಕ್ಷಿಣ ಆಫ್ರಿಕದಲ್ಲಿ ಅಷ್ಟಿರಲಿಲ್ಲ; ಎಂತಲೇ ಗಾಂಧೀಜಿಗೆ ಇವರನ್ನು ಏನು ಮಾಡಬೇಕೋ ತೋಚಲಿಲ್ಲ. ಒಂದೆರಡು ವರ್ಷವಾದರೂ ಈತನಿಂದ ಹುಡುಗಿಯನ್ನು ದೂರವಾಗಿಡೋಣವೆಂದರೆ ಹತ್ತಿರದಲ್ಲಿ ಅವಳ ಸಂಬಂಧಿಗಳೂ ಯಾರೂ ಇರಲಿಲ್ಲ. ತಾವೇನೂ ಮಾಡಲಾಗದ್ದರಿಂದ ಗಾಂಧೀಜೀ ಕುಗ್ಗಿ ಹೋಗಿದ್ದರು.

‘ಛಿ! ಶುದ್ಧ ನಾಚಿಕೆಗೇಡು, ಯಾವ ದೇಶವಾದರೇನು? ಇಂಥ ಮದುವೆ ಎಲ್ಲಾದರೂ ನಡೆಯಗೊಡಬಹುದೆ? ಇವಳಿನ್ನೂ ಹಸುಗೂಸು’ ನಾ ಹೇಳಿದೆ.

‘ನಿಜ. ನಿಜ. ಶುದ್ಧ ನಾಚಿಕೆಗೇಡಿನ ಮಾತು’ ಎಂದರು ಗಾಂಧೀಜೀ ದುಃಖದಿಂದ.

‘ಇವರು ಸಂಸಾರ ಮಾಡುತ್ತಾರೇನು ಇಲ್ಲಿ?’ ನಾನು ಕೇಳಿದೆ.

‘ಮಾಡಬಹುದು’ ಎಂದು ಗಾಂಧೀಜೀ ಉತ್ತರ ಕೊಟ್ಟರು.

‘ಆ ಮನುಷ್ಯನನ್ನು ಚಾಟಿಯಿಂದ ಹೊಡೆದು ಕೆಡವಬೇಕು. ಇಂಥ ಹಸುಳೆಯ ಕೂಡ ಲಗ್ನವಾಗುವುದೇ ಶುದ್ಧ ಅತ್ಯಾಚಾರ. ನಾನು ರೇಗಿ ಹೇಳಿದೆ.

'ನೀನು ಹಾಗೆ ಸಿಟ್ಟಾದರೆ ಅದು ಸರಿ. ಏನುವೂ ನ್ಯಾಯವಾದ ಕಾರಣಕ್ಕಾಗಿ ಸಿಟ್ಟಾಗುವುದು ಸರಿ ಎಂದಿದ್ದಾನೆ. ಅಸಹಾಯಕ ಶಿಶುವಿನ ಮೇಲಾಗುತ್ತಿರುವ ಅನ್ಯಾಯವನ್ನು ನೋಡಿ ನೀನು ಸಿಟ್ಟಾಗುತ್ತಿದೀಯೆ, ಆದರೂ ಈ ತಪ್ಪಿನಲ್ಲಿ ಹೆಣ್ಣು ಕೂಡ ಪಾಲುಗಾರಳೇ, ಅಲ್ಲವೆ?'

'ಊಹು. ಖಂಡಿತವಾಗಿಯೂ ಅಲ್ಲ ಈ ನಲವತ್ತು ವರುಷದ ಬೊಜ್ಜು ಬೆಳೆದ ಧಾಂಡಿಗನಿಗೆ ಯಾವ ತಾಯಿಯೂ ತನ್ನ ಹನ್ನೆರಡು ವರ್ಷದ ಕಂದಮ್ಮನನ್ನು ಮನಸಾರೆ ಒಪ್ಪಿ ಧಾರೆ ಎರೆದು ಕೊಡಲಾರಳು. ಅದು ತೀರಾ ಅಸ್ವಾಭಾವಿಕ.'

'ಆದರೂ ಆಕೆ ಹಾಗೆ ಮಾಡುತ್ತಾಳೆ ಹಿಂದೆ ಹೀಗೆ ಮಾಡಿದಾಳೆ. ಈ ಮದುವೆಯನ್ನು ಆ ಮನೆಯ ಹೆಂಗಸರೇ ಏರ್ಪಾಡು ಮಾಡಿದ್ದರೂ ಮಾಡಿರಬಹುದು. ಅವರು ಇದಕ್ಕೆ ಒಪ್ಪಿದ್ದಂತೂ ಸ್ವಯಂ ಸ್ಪಷ್ಟ. ಇಂಥ ವಿಷಮಲಗ್ನ ನಡೆಯಬಾರದೆಂದರೆ ಹೆಂಗಸೇ ಅಡ್ಡನಿಂತು ತಪ್ಪಿಸಬೇಕು.'

'ಪಾಪ! ಆಕೆ ಏನು ಮಾಡಿಯಾಳು? ಅವಳಿಂದೇನಾದೀತು? ವೈದಿಕರೂ ಶಾಸನಗಳೂ ಕಟ್ಟಿದ ಈ ಕಬ್ಬಿಣದ ಕೋಟೆಯನ್ನು ಒಡೆಯಲು ಆಕೆಗೆ ಸ್ವಾತಂತ್ರ್ಯವಾದರೂ ಎಲ್ಲಿದೆ? ನೀವೆಲ್ಲಿ ಕೊಟ್ಟದೀರಿ. ಅಂಥ ಸ್ವಾತಂತ್ರ್ಯ?' ನಾನು ಕೇಳಿದೆ.

'ಆದರೂ ಅವರೇ ಅದನ್ನು ಒಡೆಯಬೇಕು. ಸಮಾಜ ಸಂಸ್ಕಾರ ಕಾರ್ಯದಲ್ಲಿ ತನ್ನ ಪಾಲಿನ ಕೆಲಸಮಾಡಲು ಹೆಣ್ಣು ಎದ್ದು ನಿಲ್ಲಬೇಕು. ಬಾಳಿನ ಮಟ್ಟವನ್ನು ಗೊತ್ತುಮಾಡಬೇಕಾದವರು ಹೆಂಗಸರು. ಅದವರ ಹಕ್ಕು, ಕರ್ತವ್ಯ' ಎಂದರು ಗಾಂಧೀಜೀ.

ನಾನು ಮತ್ತೆ ಕೇಳಿದೆ. 'ಅವರೇನು ಮಾಡಿಯಾರು ಹೇಳಿ? ಹಿಂದುಸ್ಥಾನದಲ್ಲಿ ಅವರಿಗೇನು ಶಕ್ತಿಯಿದ್ದೀ?'

'ಬೇಕಾದಷ್ಟು; ನಿನ್ನ ಊಹೆಗಿಂತ ಹೆಚ್ಚು ಕೆಲಸ ಮಾಡ ಬಹುದು! ಇನ್ನೇನಲ್ಲವಾದರೆ ಹೋಗಲಿ, ಇಂಥ ಹೊಲಸು ಕೆಲಸಕ್ಕೂ ತಮಗೂ ಏನೂ ಸಂಬಂಧವಿಲ್ಲವೆಂದು ಖಂಡಿತವಾಗಿ ಹೇಳಲಿ; ಗಂಡಿನ ಹೀನಗೆಲಸದಲ್ಲಿ ನಾನು ಭಾಗ ವಹಿಸುವುದಿಲ್ಲವೆಂದು ಹೆಣ್ಣು ಪಟ್ಟುಹಿಡಿದು ಹೇಳಿದರೆ ಗಂಡಿನ ಬುದ್ಧಿ ತಾನೇ ಶುದ್ಧವಾಗುತ್ತದೆ. ಹೆಣ್ಣಿನ ಹಟದಮುಂದೆ ಗಂಡು ತಲೆ ಬಾಗಲೇಬೇಕು.'

'ಹೆಣ್ಣು ಹಟ ಹಿಡಿದರೆ ಗಂಡು ಬಲಾತ್ಕಾರ ಮಾಡುತ್ತಾನೆ. ಬಿಡುತ್ತಾನೇನು? ಅವಳ ಮೈಮುರಿದು ತನ್ನಿಚ್ಛೆಯಂತೆ ನಡಸುತ್ತಾನೆ ಗಂಡು-ಪಶು. ಇತಿಹಾಸದುದ್ದಕ್ಕೂ ಇದಕ್ಕೆ ಉದಾಹರಣೆ ಕಾಣಿ ಸುತ್ತವೆ.'

'ಹಾಗೂ ಆಗಬಹುದು.'

'ಅಂದರೆ—?' ನಾ ಕೇಳಿದೆ

'ಸೋಲದೆ ಸಾಯಬಹುದು. ಸತ್ತ ಹೆಣ್ಣಿನ ಶವದ ಮುಂದೆ ಯಾವ ಗಂಡಿನ ಹಟ ಗಟ್ಟಿಯಾಗಿ ನಿಂತೀತು!' ಗಾಂಧೀಜೀ ನಿರ್ಧಾರ ವಾಗಿ ಉತ್ತರ ಕೊಟ್ಟರು.

ಗಾಂಧೀಜಿಯ ಈ ಮಾತು ಕೇಳಿ ನನಗೆ ಆಲಿವ್ ಷ್ರೀನರ್ 'ಸ್ವಪ್ನಗಳು' ಎಂಬ ಗ್ರಂಥದಲ್ಲಿ ಹೆಣ್ಣು ತನ್ನ ಪ್ರಯತ್ನದಿಂದಲೇ ತನ್ನ ಶೃಂಖಲೆ ಹರಿದು, ಕೋಟಿಕದನ ನಡಸಿದ ಮೇಲೆ ಬಿಡುಗಡೆ ಪಡೆದಾ ಳೆಂದು ಕಡ್ಡಾಯವಾಗಿ ಹೇಳಿದ್ದು; ಗಾಂಧೀಜಿಯ ಮಹಾ ಕಾರ್ಯಗಳಲ್ಲಿ ಅಡಿ ಕದಲಿಸದೆ ನೇರವಾಗಿ ಪ್ರೋತ್ಸಾಹ ಕೊಟ್ಟ ಆ ದಿವ್ಯ ಸ್ತ್ರೀಜೀವ-ಆಲಿವ್ ಷ್ರೀನರ್-ದೊಂದಿಗೆ ಗಾಂಧೀಜಿಗಿದ್ದ ಗೆಳೆತನ; ಎರಡೂ ನೆನಪಿಗೆ ಬಂತು. ಯುದ್ಧ ನಡೆಯುತ್ತಿದ್ದಾಗ ನನ್ನ ಗಂಡ ಇಂಗ್ಲೆಂ ಡಿಗೆ ಹೋಗಿದ್ದ. ಆಲಿವ್ ಷ್ರೀನರ್ ಆಗ ಇಂಗ್ಲೆಂಡಿನಲ್ಲೇ 'ಬಲವಂತ ವಾಸ' ಮಾಡುತ್ತಿದ್ದರು. ನನ್ನ ಗಂಡ ಅವರನ್ನು ನೋಡಲು

ಹೋದಾಗ ಚಿಕ್ಕ ಹುಡುಗಿಯಂತೆ ಉತ್ಸಾಹದಿಂದ 'ಈಚೆಗೆ ಗಾಂಧೀನ ನೋಡಿದ್ದೆಯಾ? ಹೇಗಿದಾನೆ ಮಗು?' ಎಂದಳಂತೆ, ನನ್ನ ಗಂಡನ ಮುಖ ನೋಡಿದ ಕೂಡಲೇ. ಅದೇ ಆಕೆ ಕೇಳಿದ ಪ್ರಥಮ ಪ್ರಶ್ನೆ. ಗಾಂಧೀಜೀ ಅಂದರೆ ಅಷ್ಟು ಪ್ರೀತಿ ಆಕೆಗೆ.

೧೬

ದರ್ಬಾನಿನಲ್ಲಿದ್ದು ಇನ್ನೂ ಒಂಭತ್ತು ತಿಂಗಳು ಕೂಡಾ ಕಳೆದಿರಲಿಲ್ಲ, ಭಾರತೀಯರ ಪರಿಸ್ಥಿತಿ ಮತ್ತೆ ಪ್ರಕೋಪಕ್ಕೆ ಹೋಯಿತು. ಮೊದಲಬಾರಿಗಿಂತ ಈ ಬಾರಿಯದು ಹೆಚ್ಚು ವಿಷಮ; ಪರಿಣಾಮ ಇನ್ನೂ ಆಳ.

ಈ ವೇಳೆಗೆ ನಾವು ಎತ್ತರವಾದ ಸ್ಥಳದಲ್ಲಿದ್ದು, ಸುಂದರವಾಗಿದ್ದ ಬಂಗಲೆಯೊಂದರಲ್ಲಿದ್ದೆವು. ನನ್ನ ತಂಗಿಯರಿಬ್ಬರು ಅಲ್ಲಿಗೆ ಬಂದು ನನ್ನೊಡನಿದ್ದರು. ಕುಲುಕಾಟವೆಲ್ಲಾ ಮುಗಿದು ರಚನಾತ್ಮಕ ಕಾರ್ಯಕ್ರಮಕ್ಕೆ ನಾನು ಕೈಯಿಟ್ಟಿದ್ದೆ. ಕಸ್ತೂರಿ ಬಾ, ಅವರ ಮಕ್ಕಳು ಎಲ್ಲಾ ಫೀನಿಕ್ಸ್ ಆಶ್ರಮದಲ್ಲೇ ಇದ್ದರು. ಗಾಂಧೀಜೀ ಮಾತ್ರ ಜೊಹಾನೆಸ್ ಬರ್ಗಿನಲ್ಲೊಂದು ಕಾಲು, ಫೀನಿಕ್ಸ್‌ನಲ್ಲೊಂದು ಕಾಲು ಇಟ್ಟುಕೊಂಡು ಭಾರತೀಯ ಜೀವನದ ನಾಡಿಯನ್ನು ಪರೀಕ್ಷಿಸುತ್ತಿದ್ದರು. ಲಾಯರಿ ಕೆಲಸವೂ ನಡೆಯುತ್ತಿತ್ತು.

ಭಾರತದ ಹಿರಿಯ ರಾಜಕಾರಣಿ, ಗೋಪಾಲಕೃಷ್ಣ ಗೋಖಲೆ ದಕ್ಷಿಣ ಆಫ್ರಿಕಕ್ಕೊಮ್ಮೆ ಬಂದು ಹೋಗಿದ್ದರು. ಅವರು ಇಲ್ಲಿದ್ದಾಗ ಮೂರು ಹೊತ್ತೂ ಗಾಂಧೀಜಿಯೇ ಅವರ ಮೇಲ್ವಿಚಾರಣೆ ನೋಡಿಕೊಳ್ಳುತ್ತಿದ್ದರು. ಇಲ್ಲಿಗೆ ಬಂದಾಗ ಗೋಖಲೆಯವರಿಗೆ 'ಬಹುಮೂತ್ರ' ವ್ಯಾಧಿ. ಆಹಾರದಲ್ಲಿ ತುಂಬಾ ಕಟ್ಟುನಿಟ್ಟು. ಎಂತಲೇ ಅವರಿಗೆ ಗಾಂಧೀಜೀ ತಾವೇ ಅಡಿಗೆ ಮಾಡುತ್ತಿದ್ದರು. ನಾನೂ ಎಷ್ಟೋ ಸಲ ಅವರಿಗೆ ಸಹಾಯಮಾಡಿದೆ. ಅವರಿಳಿದುಕೊಂಡಿದ್ದ

ಮನೆ, ನಮ್ಮ ಮನೆಗೆ ಹತ್ತಿರವಾಗಿದ್ದುದರಿಂದ ನನಗೂ ಆಗಾಗ ಅಲ್ಲಿಗೆ ಹೋಗಿ ಎಲ್ಲಾ ಸರಿಯಾಗಿದೆಯೋ ಇಲ್ಲವೋ ನೋಡಿಕೊಳ್ಳಲು ಅನುಕೂಲವಾಗಿತ್ತು. ಅಡಿಗೆಯಲ್ಲಿ ಬೇರೆಯದನ್ನು ನಾನು ಮಾಡುತ್ತಿದ್ದರೂ ಒಂದನ್ನು ಮಾತ್ರ ಗಾಂಧೀಜಿಯೇ ಮಾಡುತ್ತಿದ್ದರು. ಅದಿನ್ನಾವ ನಳಪಾಕವೂ ಅಲ್ಲ; ಆಲೂಗಡ್ಡೆ ಪಲ್ಯ. ಆಲೂಗಡ್ಡೆಯನ್ನು ತೆಳ್ಳಗೆ ಹೆಚ್ಚಿ ಬೆಂಕಿಯಲ್ಲಿ ಹಾಕಿ ತೀರಾ ಕರೀ ಕಾಗದಂತೆ ಸುಟ್ಟುಕೊಡುವುದು. ಆದರೂ ಅದರ ವಿಚಾರದಲ್ಲಿ ತುಂಬಾ ಎಚ್ಚರಿಕೆ ತೆಗೆದುಕೊಂಡು ಸುಡುತ್ತಿದ್ದೆವು. ಗೋಖಲೆಯವರ ವಸ್ತ್ರದ ವಿಷಯವೂ ಅಷ್ಟೆ, ಮಡಿಕೆಯಲ್ಲಿ ಸ್ವಲ್ಪ ಸುಕ್ಕಾದರೂ ಪ್ರಳಯವಾದಂತೆ ಮಾಡುತ್ತಿದ್ದರು. ಎಂತಲೇ ಗಾಂಧೀಜೀ ಅವರ ವಸ್ತ್ರವನ್ನು ತಾವೇ ಹುಷಾರಾಗಿ ಇಸ್ತ್ರಿಮಾಡಿ, ಮಡಿಕೆ ಹಾಕಿ ಕೊಡುತ್ತಿದ್ದರು. ಗಾಂಧೀಜಿಯ ಪಾಲಿಗೆ ಗೋಖಲೆ ಹಿರಿಯಣ್ಣ; ರಾಜಕಾರಣದಲ್ಲಿ ಗುರು, ಮಾರ್ಗದರ್ಶಕ.

ಈ ಸಲದ ಭಾರತೀಯರ ಹೋರಾಟ ಬಹು ಬೇಗ ವಿಷಮ ಮಟ್ಟಕ್ಕೇರಿ, ಕಣ್ಣು ಮುಚ್ಚಿ ತೆಗೆವುದರೊಳಗೆ ನೂರಾರು ಮಂದಿ ಸೆರೆ ಸೇರಿದ್ದರು; ದೊಡ್ಡದೊಡ್ಡವರೆಲ್ಲಾ ದಸ್ತಗಿರಿಯಾಗಿದ್ದರು.

ವ್ಯವಸ್ಥಿತ ಸಮಾಜದಲ್ಲಿ ತಾವೂ ಸ್ವತಂತ್ರ ಮಾನವರಂತೆ ಜೀವಿಸುವ ಹಕ್ಕನ್ನು ಸಾಧಿಸುವ ಈ ಹಿರಿ ಹೋರಾಟವನ್ನು ನಡೆಸುವ ಹೊರೆ, ದೊಡ್ಡವರೆಲ್ಲ ಸೆರೆ ಸೇರಿದ್ದರಿಂದ ಕಿರಿಯರ ಮೇಲೆ ಬಿತ್ತು. ಕಸ್ತೂರಿ ಬಾ ತನ್ನೊಂದಿಗೆ ಸಣ್ಣದೊಂದು ಹೆಂಗಸರ ಗುಂಪು ಕಟ್ಟಿಕೊಂಡು ಚಳುವಳಿಯ ಚಕ್ರತೀರ್ಥದಲ್ಲಿ ಧುಮುಕಿದರು. ಅವರಿಗೂ ಮೂರು ತಿಂಗಳು ಶಿಕ್ಷೆಯಾಯಿತು.

ಗೋಖಲೆಯವರು, ಇನ್ನೊಂದು ಬಾರಿ ನನ್ನ ಗಂಡನಿಗೆ ಹಿಂದುಸ್ಥಾನಕ್ಕೆ ಹೋಗಿ ಅಲ್ಲಿನ ಸರಕಾರಕ್ಕೆ ಇಲ್ಲಿಯ ಭಾರತೀಯರ ಸ್ಥಿತಿಗತಿ ತಿಳಿಸುವಂತೆ ಹೇಳಿದರು. ನನ್ನ ಗಂಡ ಅದಕ್ಕೆ ಒಪ್ಪಿದ.

ಹೋಗುವ ಮುನ್ನ ನನ್ನ ಗಂಡ ಗಾಂಧೀಜಿಯನ್ನೊಮ್ಮೆ ಕಂಡು, ಅವರ ಸಲಹೆ ಪಡೆಯಲೆಂದು ಅವರನ್ನು ಕಾಣಲು ಹೋದ. ಗಾಂಧೀಜೀ ಆಗ ಸಹಸ್ರಾರು ಸತ್ಯಾಗ್ರಹಿಗಳೊಂದಿಗೆ ನೇಟಾಲಿನಿಂದ ಟ್ರಾನ್ಸ್ವಾಲ್‌ನ ಒಳಕ್ಕೆ ತಮ್ಮ ಇತಿಹಾಸ ಪ್ರಸಿದ್ಧ ಯಾತ್ರೆಯನ್ನು ಆರಂಭಿಸಿದ್ದರು. ನನ್ನ ಗಂಡ ಅವರನ್ನು ನೋಡಲು ನೂರಾರು ಮೈಲಿ ಪ್ರಯಾಣಮಾಡಿ, ಕಡೆಗೊಮ್ಮೆ ಅವರನ್ನು ಕಂಡ. ಆದರೇನು, ಆ ಹೊತ್ತಿಗೆ ಅವರೇ ದಸ್ತಗಿರಿಯಾಗಿದ್ದರು. ಅದೆಂಥ ಗಳಿಗೆ! ಹಿಂದೆ-ಮುಂದೆ ಯೋಚಿಸುವುದಕ್ಕುಂಟೆ? ನನ್ನ ಗಂಡ ಕೂಡಲೆ ಆ ನಾಯಕ ನಿಲ್ಲದ ಸೇನೆಯ ಸೇನಾಧಿಪತ್ಯವನ್ನು ವಹಿಸಿದ. ಮರುದಿನವೇ ಫಲ ಸಿಕ್ಕಿತು. ಚಳುವಳಿಗೆ ನೆರವಾಗಿ ಸಹಾಯ ಮಾಡಿದನೆಂದು ಆತನೂ ದಸ್ತಗಿರಿಯಾದ. ಬೇಗನೆ ಬರಬೇಕೆಂದು ನನಗೆ ಕರೆ ಬಂತು. ರಣರಂಗಕ್ಕೆ ಹೋದೆ. ಗಾಂಧೀಜೀ, ನನ್ನ ಗಂಡ, ಇಬ್ಬರದೂ ವಿಚಾರಣೆಯಾಗುವಾಗ ನಾನು ಅಲ್ಲೇ ಇದ್ದೆ. ಅದು ಮುಗಿದು ಅವರಿಗೆ ಶಿಕ್ಷೆಯಾದ ಕೂಡಲೆ ನಾನು ದರ್ಬಾನಿಗೆ ಹಿಂದಿರುಗಿದೆ.

ನನ್ನ ಗಂಡನ ಬದಲಾಗಿ ನಾನೇ ಭಾರತಕ್ಕೆ ಹೋಗಬೇಕೆಂದು ಭಾರತೀಯರು ಒತ್ತಾಯ ಮಾಡಿದರು. ೨೪ ಗಂಟೆಗಳ ಅವಧಿ! ಹೊರಟುಬಿಟ್ಟೆ. ಆದರೆ ನಾನು ಡೆಲೋಗಾ ಕೊಲ್ಲಿ ತಲುಪುವಹೊತ್ತಿಗೆ ಗೋಖಲೆಯವರಿಂದ ಕೇಬಲ್ ಬಂತು: ಭಾರತದಿಂದ ದಕ್ಷಿಣ ಆಫ್ರಿಕಾ ಪರಿಸ್ಥಿತಿಯನ್ನು ಪರಿಶೀಲಿಸಲು ಹಿಂದುಸ್ಥಾನದಿಂದ ಒಂದು ಅಧಿಕಾರಿ ಸಮಿತಿ ಕೂಡಲೇ ಬರಲಿದೆ; ಅನಧಿಕಾರಿಯಾಗಿ ಅವರಿಗೆ ಸಹಾಯ ಮಾಡಲು ಶ್ರೀ ಸಿ. ಎಫ್. ಆಂಡ್ರೂಸರನ್ನು ಕಳಿಸುತ್ತೇನೆ; ನೀನು ಹಿಂದಿರುಗಿ ಬಾ, ಎಂತ. ನಾನು ಹಿಂದಿರುಗಿ ಬಂದುಬಿಟ್ಟೆ.

ಇಲ್ಲಿಂದಾಚೆಯ ಘಟನೆಗಳ ಓಟ ಬಹುವೇಗ. ನಾಲ್ಕಾರು ವಾರ ಸರಿಯುವಷ್ಟರಲ್ಲೆ ನಾನು ಮತ್ತೊಮ್ಮೆ ಟ್ರಾನ್ಸ್ವಾಲಿಗೆ ಪಯಣ ಬೆಳೆಸಿದೆ. ಈ ವೇಳೆಗೆ ಭಾರತೀಯರ ಕುಂದುಕೊರತೆಗಳನ್ನು ವಿಚಾರಿಸಿ ಪರಿಸೀಲಿಸಿ ವರದಿಮಾಡಲು ವಿಚಾರಣಾ ಸಮಿತಿಯನ್ನು-

ನೇಮಕ ಮಾಡಿದ್ದರಿಂದ ಬಿಕ್ಕಟ್ಟು ಕೊನೆಗಂಡು ಕೆಲ ವಾರಗಳ ಸೆರೆ ಮನೆಯ ವಾಸದ ಬಳಿಕ ಗಾಂಧೀಜಿಯನ್ನೂ ನನ್ನ ಗಂಡನನ್ನೂ ಬಿಡು ಗಡೆಮಾಡಿದ್ದರು ಸರಕಾರದಲ್ಲಾದ ಈ ಪರಿವರ್ತನೆಯಿಂದ ಎಲ್ಲರಿಗೂ ಸಂತೋಷವಾಗಿತ್ತು, ಉತ್ಸಾಹ ಉಕ್ಕಿತ್ತು. ಗಾಂಧೀಜಿಗೂ ಇದು ತೃಪ್ತಿಯನ್ನುಂಟು ಮಾಡಿತ್ತು. ಅದನ್ನು ಆಡಿಯೂ ತೋರಿಸಿದ್ದರು. ಯಾರಿಗೂ ಹೇಳದೆ ಕೇಳದೆ ನಾನು ಭಾರತಕ್ಕೆ ಹೊರಟಿದ್ದನ್ನು ಕುರಿತು ಗೇಲಿ ಮಾಡಿದರು. ಮಕ್ಕಳನ್ನು ಕೈ ಬಿಟ್ಟು ಹೋಗಿದ್ದಕ್ಕೆ ಕೊಂಕು ಮಾತಾಡಿ ಹೆಂಗಸಿನ ಹಣೇಬರಹವೇ ಅಷ್ಟು, ಗಂಡ ಕಣ್ಮರೆ ಯಾದರೆ ಸಾಕು, ಲಗಾಮಿಲ್ಲದ ಕುದುರೆಯಾಗಿಬಿಡುತ್ತಾಳೆ ಎಂದು ಹಾಸ್ಯಮಾಡಿದರು. ನಿಜವಾಗಿಯೂ ಹಾಗೇ ಆಗಿತ್ತು. ನಾನು ಯಾರಿಗೂ ಹೇಳದೆ ಹೊರಡುವ ನಿಶ್ಚಯಮಾಡಿದ್ದೆ. ಆದರೆ ನನ ಗಾಗಿ ನನ್ನ ಪತ್ರಿಕೋದ್ಯೋಗಿ ಮಿತ್ರರೊಬ್ಬರು, ನನ್ನ ಗಂಡನ ಬದಲು ನಾನು ಭಾರತಕ್ಕೆ ಹೊರಡಲು, ಆತನ ಒಪ್ಪಿಗೆಯನ್ನು ಕಷ್ಟಪಟ್ಟು ತರಿಸಿದ್ದರು.

ಇದಾದ ಮೇಲೆ ಗಾಂಧೀಜಿಯೊಂದಿಗೆ ನಾನು, ಸೆರೆಯಿಂದ ಹೊರಬರುತ್ತಿದ್ದ ಕಸ್ತೂರಿ ಬಾ, ಅವರ ಮಕ್ಕಳನ್ನು ನೋಡಲು ಹೋದೆ. ತಾ ಮಾಡಿದ ಕೆಲಸವನ್ನು ಗಾಂಧೀಜೀ ಹೊಗಳುತ್ತಿದ್ದಾಗ ಬಾ ಕಣ್ಣಿನಲ್ಲಿ ಎಂಥ ನಾಚಿಕೆ ತುಂಬಿತ್ತೋ !

ಸರಕಾರಕ್ಕೂ, ಭಾರತೀಯರಿಗೂ-ಬಹು ದಿನ ಇದಿರು ನೋಡಿದ ಒಪ್ಪಂದ ಆಗಿ ಆ ದೀರ್ಘ ಕಾಲದ ಯಾತನೆ ಕೊನೆಗೊಂಡಿತು. ಇದಾ ದ ಮೇಲೆ ನಾನೂ, ಹೆನ್ರಿ, ಗಾಂಧೀಜೀ ಮೂರೂಜನ ಕೂತು ಮುಂದೇ ನು ಮಾಡಬೇಕೆಂದು ಚರ್ಚಿಸಿದೆವು. ಇತ್ತೀಚೆಗೆ ಗಾಂಧೀಜಿಯ ದೃಷ್ಟಿ ಭಾರತದ ಕಡೆ ಹೊರಳಿತ್ತು; ಹೃದಯ ಹಿಂದುಸ್ಥಾನಕ್ಕಾಗಿ ಕಾತರಿಸು ತ್ತಿತ್ತು. ಹೋರಾಟ ಮುಗಿದ ಮೇಲಂತೂ ಹಿಂದುಸ್ಥಾನಕ್ಕೆ ಹೋ ಗಲು ಅನುಮತಿ ಸಿಕ್ಕಹಾಗಿತ್ತು. ಹೋರಾಟದಿಂದ ಗೆದ್ದ ನೆಲವನ್ನು ಅಣಿ ಮಾಡಿದೊಡನೆಯೇ ದಕ್ಷಿಣ ಆಫ್ರಿಕಾವನ್ನು ಬಿಟ್ಟು ಹೊರಡಲು

ಗಾಂಧೀಜೀ ನಿಶ್ಚಯಿಸಿದರು. ಹೋರಾಟ ಮುಗಿವ ಮುನ್ನ ಗಾಂಧೀಜಿ ನನಗೆ ಮಾತುಕೊಟ್ಟರು: ನೀನು ಇಲ್ಲೇ ಇರುವುದಾದರೆ ಇರು, ನಾನೂ ನಿನ್ನೊಂದಿಗೆ ಇರುತ್ತೇನೆ; ಇಲ್ಲವಾದರೆ ಸಂಸಾರದೊಂದಿಗೆ ಇಂಗ್ಲೆಂಡಿಗೇ ಹೋಗುವೆಯಂತೆ, ಎಂತ. ನಾನು ಇಂಗ್ಲೆಂಡಿಗೇ ಹೋಗುತ್ತೇನೆ ಎಂದೆ. ಇದ್ದಷ್ಟು ದಿನ ದಕ್ಷಿಣ ಆಫ್ರಿಕದಲ್ಲಿ ಕಷ್ಟವನ್ನೇ ಅನುಭವಿಸಿದ್ದರಿಂದ ಇನ್ನು ಮುಂದೆಯೂ ಅಲ್ಲೇ ಇರುವ ಆಸೆ ನನಗಿರಲಿಲ; ಅದಕ್ಕಾಗಿಯೇ ಮನೆಯ ಮಾರಾಟಕ್ಕೆ, ಸಾಮಾನಿನ ಹರಾಜಿಗೆ ಏರ್ಪಾಟು ಮಾಡಿದೆವು. ನನ್ನ ತಂಗಿಯೊಬ್ಬಳ ಲಗ್ನವಾಗಬೇಕೆಂದು ಗೊತ್ತಾಗಿತ್ತು. ಹೊರಡುವ ಮುನ್ನವೇ ಅದೂ ಆಗಬೇಕೆಂದು ಹತ್ತಿರದ ಮಹೂರ್ತ ನಿಶ್ಚಯಿಸಿದೆವು.

ಒಂದು ದಿನ ಬೆಳಿಗ್ಗೆ ಒಂದು ವಿಚಿತ್ರವಾದ ಕಾಗದ ಬಂತು ಗಾಂಧೀಜಿಗೆ. ಗಾಂಧೀಜೀ ದಕ್ಷಿಣ ಆಫ್ರಿಕದ ಭಾರತೀಯರ ಯೋಗಕ್ಷೇಮವನ್ನು ಯಾರ ಹೆಗಲ ಮೇಲೆ ಹಾಕಿ ಹೋಗಬೇಕೆಂದು ನಿಶ್ಚಯಿಸಿದ್ದರೋ ಆತನಿಂದ ಬಂದ ಕಾಗದ ಅದು. ಆತ ಪೂರ್ವ ಆಫ್ರಿಕಾದಲ್ಲಿ ನೆಲೆಸುವ ನಿಶ್ಚಯಮಾಡಿ ಕಾಗದ ಬರೆದಿದ್ದ. 'ನಿಮ್ಮಿಬ್ಬರಲ್ಲಿ-ನನ್ನ ಗಂಡ, ಗಾಂಧೀಜೀ-ಯಾರಾದರೊಬ್ಬರು ಇಲ್ಲೇ ಇದ್ದು ಭಾರತೀಯರ ಯೋಗಕ್ಷೇಮ ನೋಡಿಕೊಳ್ಳಬೇಕು; ಇಬ್ಬರೂ ದಕ್ಷಿಣಆಫ್ರಿಕ ಬಿಟ್ಟು ಹೋಗಬಾರದು.' ಎಂದು ಕೇಳಿಕೊಂಡಿದ್ದ. ಇದಕ್ಕೆ ಗಾಂಧೀಜಿಯಾಗಲಿ, ನನ್ನ ಗಂಡನಾಗಲಿ ಏನು ತಾನೆ ಹೇಳಿಯಾರು. ಏನಾದರೂ ಹೇಳಬೇಕಾಗಿದ್ದರೆ ನಾನೇ. ನಾನು ಇಂಗ್ಲೆಂಡಿಗೆ ಹೋಗಲು ಅವರಿಬ್ಬರೂ ಒಪ್ಪಿದ್ದರು. ಆ ವಚನಶೃಂಖಲೆಯಿಂದ ನಾನವರನ್ನು ಬಿಡಿಸದೆ ಅವರು ಏನೂ ಹೇಳುವಹಾಗಿರಲಿಲ್ಲ. ನನಗೂ ತುಂಬಾ ತಾಪತ್ರಯಕ್ಕಿಟ್ಟುಕೊಂಡಿತು. ಗಾಂಧೀಜಿಗೆ ಹಿಂದುಸ್ಥಾನಕ್ಕೆ ಹೋಗುವ ಆಸೆ ಇರುವಾಗ ಅವರನ್ನು ಇಲ್ಲೇ ಇರುವಂತೆ ಹೇಳಲೆ? ಅಥವಾ ಅವರೂ ಇಲ್ಲದೆ, ಒಹ. ದಿನದ ಆಶೆಯನ್ನು ಕಳೆದುಕೊಂಡು ಇಲ್ಲೇ ನಿಲ್ಲಲೇ? ಏನು ಮಾಡಲಿ ಗಾಂಧೀಜಿಯೇನೋ ನನ್ನ ಗಂಡನಿಗೆ 'ಮಿಲ್ಲೀಗೆ ನೀನೇನೂ ಹೇಳಲು ಹೋಗಬೇಡ, ಅವಳಿಗೆ ತೋಚಿದ

ಹಾಗೆ ಮಾಡಲಿ' ಎಂದು ಗದರಿಸಿ ಹೇಳಿ, ನನ್ನ ಕಡೆ ತಿರುಗಿ ಏನೂ ತಿಳಿಯದಂತೆ 'ನೋಡು ಮಿಲ್ಲೀ, ನಿನಗಿಂತ ಹೆಚ್ಚು ವರ್ಷ ನಾನು ಇಲ್ಲಿಯ ಸಾರ್ವಜನಿಕ ರಂಗದಲ್ಲಿ ದುಡಿದಿದೇನೆ. ಈಗ ಹಿಂದುಸ್ಥಾನಕ್ಕೆ ಹೋಗುವ ಬಯಕೆಯಾಗಿದೆ. ಆದರೂ ನೀನು ಇಲ್ಲೇ ಇರು ಎಂದರೆ ಇದ್ದುಬಿಡುತ್ತೇನೆ, ಖಂಡಿತವಾಗಿಯೂ ಇರುತ್ತೇನೆ' ಎಂದರು.

ಸರಿ. ಚೀಟಿ ಎತ್ತುವ ಕೆಲಸ ನನ್ನ ಪಾಲಿಗೇ ಬಂತು. ಆದರೆ ಏನು ಹೇಳಲಿ? ನನ್ನ ಆಸೆಗಳನ್ನೆಲ್ಲಾ ಮೂಟೆಕಟ್ಟಿ ದಕ್ಷಿಣ ಆಫ್ರಿಕಾದಲ್ಲಿರಬೇಕಾದದ್ದೇ ನನ್ನ ಹಣೇಬರಹ! ಸರಿ ನಾನೂ ನನ್ನ ಗಂಡ ಇಲ್ಲೇ ಇರುತ್ತೇವೆಂದು ಗಾಂಧೀಜಿಗೆ ಕಾಗದ ಬರೆದು ಹಾಕಿದೆ. ನನ್ನ ಗಂಡ ಕೂಡಲೆ ದರ್ಬಾನಿನಿಂದ ಜೊಹಾನೆಸ್‌ಬರ್ಗಿಗೆ ಹೋಗಿ ಗಾಂಧೀಜಿಯ ಲಾಯರಿ ಆಫೀಸಿನ ಕಾರುಬಾರು ವಹಿಸಿಕೊಂಡ. ದರ್ಬಾನಿನಲ್ಲಿ! ಕೆಲಸ ಮುಗಿಸಿ ನಾನೂ ಇನ್ನೊಂದು ಮನೆ ಹೂಡಲು ಹೊರಟೆ. ಸ್ಟೇಷನ್ನಿಗೆ ನನ್ನ ಗಂಡನೊಡನೆ ಗಾಂಧೀಜಿಯೂ ಬಂದಿದ್ದರು. ಅವರನ್ನು ದಕ್ಷಿಣ ಆಫ್ರಿಕದ ಬಂಧನದಿಂದ ಬಿಡಿಸಿದ್ದಕ್ಕಾಗಿ ನನ್ನನ್ನು ಬಾಯಿತುಂಬ ಹೊಗಳಿ, ನಿನ್ನ ತ್ಯಾಗಕ್ಕೆ ತಕ್ಕ ಫಲ ಸಿಗುತ್ತದೆ ಎಂದು ಹರಸಿದರು ಗಾಂಧೀಜೀ.

ಗಾಂಧೀಜೀ ದಕ್ಷಿಣ ಆಫ್ರಿಕವನ್ನು ಬಿಟ್ಟು ಹೋಗಲು ಸಕಲ ಸಿದ್ಧತೆಗಳೂ ಆದವು: ಅವಸರವಸರವಾಗಿ ಎಲ್ಲಾ ಮಾಡಿದ್ದಾಯಿತು. ಅವರು ಹೊರಡುವ ದಿನವೂ ಬೇಗನೆ ಬಂತು. ಹಿಂದಿನ ರಾತ್ರಿ ನನ್ನ ಆರುವರ್ಷದ ಮಗುವನ್ನು ತಮ್ಮ ಹತ್ತಿರವೆ ಮಲಗಿಸಿಕೊಂಡು ಅವನೊಡನೆ ಮಾತಾಡುವುದಾಗಿ ಹೇಳಿದರು ಗಾಂಧೀಜೀ.

'ನಿಮಗೆ ತುಂಬಾ ಆಯಾಸವಾಗುತ್ತದೆ. ವಾಲ್ಡೋನ ಗದ್ದಲ ಹಚ್ಚಿಕೊಳ್ಳಬೇಡಿ. ಹೆಚ್ಚಿಗೆ ಹೊತ್ತೂ ಇಲ್ಲ ನಿಮಗೆ' ಎಂದೆ ನಾನು.

'ಹೊತ್ತಿನ ಚಿಂತೆ ನಿನಗೇಕೆ. ಅವನು ನನ್ನೊಡನಿದ್ದರೆ ಹೊತ್ತು ಹೇಗೋ ಸಿಗುತ್ತದೆ.' ಎಂದರು ಗಾಂಧೀಜೀ.

ಎಷ್ಟು ಹೇಳಿದರೂ ಬಿಡದೆ ಆ ರಾತ್ರಿ ವಾಲ್ಕೋನನ್ನು ಗಾಂಧೀಜೀ ತಮ್ಮ ಮನೆಗೇ ಕರೆದುಕೊಂಡು ಹೋದರು. ಎಷ್ಟು ಹೊತ್ತು ಮಾತಾಡುತ್ತಿದ್ದರೋ. ಬಾ ಮಾತ್ರ ಮಲಗಿ ಬಿಟ್ಟರಂತೆ. ಮತ್ತೆ ಬೆಳಿಗ್ಗೆ ನಾಲ್ಕು ಗಂಟೆಗೇ ಇಬ್ಬರೂ ಎದ್ದರು; ಮತ್ತೆ ಮಾತು. ಆಮೇಲೆ ಗಾಂಧೀಜೀ ನನಗೆ ಹೇಳಿದರು: 'ನಾನೂ ನಿನ್ನ ಮಗನೂ ಎರಡು ಗಂಟೆ ಕಾಲ ದೇವರ ವಿಚಾರ ಮಾತಾಡಿದೆವು. ಅವನಿಗೆ ನಾನೇನೂ ಕಲಿಸಬೇಕಾದ್ದಿಲ್ಲ. ನನಗಿಂತ ಅವನೇ ಹೆಚ್ಚು ಪರಿಣತನಾಗಿದಾನೆ, ದೇವರಿಗೆ ಸಮೀಪವಾಗಿದಾನೆ.'

ಅಲ್ಲಿಂದ ಗಾಂಧೀಜಿಯನ್ನು ಹಿಂಬಾಲಿಸಿದ ಗುಂಪಿನೊಡನೆ ನಾನೂ ನನ್ನ ಗಂಡನೂ ಕೇಪ್‌ಟೌನಿಗೆ ಹೋದೆವು. ಕೇಪ್‌ಟೌನಿನಲ್ಲಿ ನಮ್ಮನ್ನು ಗಾಡಿಯಲ್ಲಿ ಕೂಡಿಸಿ ಊರಿನಲ್ಲೆಲ್ಲಾ ಮೆರವಣಿಗೆ ಮಾಡಿದರು. ಇದುರಿಗೆ ಬ್ಯಾಂಡು ವಾದನ. ಅವರು 'ಬೆಳಗಾಗುವ ವರೆಗೆ ನಾವು ಮನೆಗೆ ಮರಳುವುದಿಲ್ಲ' ಎಂಬ ಹಾಡನ್ನು ಬಾರಿಸುತ್ತಿದ್ದರು ಆ ಸಂದರ್ಭಕ್ಕೆ ಹಾಡು ಶುದ್ಧ ಅಸಂಬದ್ಧ. ಬಾರಿಸುವವರಿಗೇನು ಗೊತ್ತು ಈ ವಿರೋಧಾಭಾಸ! ಆದರೂ ಬಾರಿಸುತ್ತಿದ್ದರು. ಸಂತೋಷ, ದುಃಖ ಯಾವುದನ್ನೂ ವ್ಯಕ್ತಪಡಿಸದೆ ಗಾಂಧೀಜೀ ನಿರ್ಲಿಪ್ತರಾಗಿ ತಾಳ್ಮೆಯಿಂದ ನಾಟಕವನ್ನೆಲ್ಲಾ ನೋಡುತ್ತಿದ್ದರು; ಆಡುತ್ತಿದ್ದರು.

೦ ೦ ೦

ಹಡಗು ಹೊಗೆಯುಗುಳುತ್ತಾ ಹೊರಟಿತು. ಇದ್ದಕ್ಕಿದ್ದ ಹಾಗೆ ನನ್ನ ಬಾಳೇ ಬರಿದಾದ ಹಾಗೆ ನನಗನಿಸಿತು. ಎದೆಯಲ್ಲಿ ಏನೋ ಶೂನ್ಯತೆ! ವೇಗವಾದ ಕಾರ್ಯ, ಭಾವರಾಗ, ವಿಚಾರದಿಂದ ತುಂಬಿದ ಅಧ್ಯಾಯವೊಂದು ಸ್ಪಷ್ಟವಾಗಿ ಮುಗಿದು ಹೋಯಿತು, ನನ್ನ ಬಾಳಿನಲ್ಲಿ. ಇದು ನಡೆದದ್ದು ೧೯೧೪ ರಲ್ಲಿ. ಗಾಂಧೀಜೀ ಭಾರತಕ್ಕೆ ಹೋಗುವ ಮುನ್ನ ಇಂಗ್ಲೆಂಡಿಗೆ ಹೋಗಬೇಕಾಗಿತ್ತು. ಅದು ಅವರ ಯಾತ್ರೆಯ ಮೊದಲ ಮಜಲು. ಅವರು ಇಂಗ್ಲೆಂಡು ತಲಪಿದ ದಿನವೇ ಮಹಾ ಯುದ್ಧದ ಘೋಷಣೆಯಾಯಿತು.

## ೧೭

ಮಹಾ ಯುದ್ಧದ ಮೂರನೆಯ ವರ್ಷದಲ್ಲಿ ನಾನು ಗಾಂಧೀಜಿಯನ್ನು ಮತ್ತೊಮ್ಮೆ ಭೇಟಿಮಾಡಿದೆ; ಈ ಸಲ ಹಿಂದೂಸ್ಥಾನದಲ್ಲಿ. ಈ ನಡುವಿನ ಕೆಲ ವರ್ಷ ತುಂಬ ಕಾತರ, ಬಿಡುವಿಲ್ಲದ ಕೆಲಸ. ಎಷ್ಟೋಜನ ಇತರ ಆದರ್ಶವಾದಿಗಳಂತೆ, ನಾನೂ ನನ್ನ ಗಂಡನೂ ಬಹುಕಾಲದಿಂದ ಕಟ್ಟಿಕೊಂಡ ಕೆಲ ಆದರ್ಶಗಳಿಗೆ ತಿಲಾಂಜಲಿ ಕೊಡಬೇಕಾಗಿ ಬಂತು ಈ ಕಾಲದಲ್ಲಿ. ಆದರೆ ಜಗತ್ತೇ ಅನುಭವಿಸುತ್ತಿದ್ದ ನರಕಯಾತನೆಯ ಇದಿರು ನಮ್ಮದು ಲೆಕ್ಕಕ್ಕೆ ಕೂಡಾ ಬಾರದಷ್ಟು ಕಿರಿದು. ಈಗ ಇತರದೇಶದ ಜನಗಳು ಭೋಗಿಸುತ್ತಿದ್ದ ಗೋಳನ್ನು ನೋಡಿದರೆ, ನಮ್ಮ ಬಾಳು ತುಂಬಾ ಶಾಂತವಾಗಿತ್ತೆಂದೇ ಹೇಳಬೇಕು

ಇಷ್ಟು ಹೊತ್ತಿಗೆ ದಕ್ಷಿಣ ಆಫ್ರಿಕದಲ್ಲಿ ನಮ್ಮ ಕೆಲಸ ಮುಗಿದಿತ್ತು. ಇದನ್ನು ಕಂಡು ಗಾಂಧೀಜೀ ಇಂಗ್ಲೆಂಡಿಗೆ ಹೋಗಲು ನಮಗೆ ಅನುಮತಿ ಕೊಟ್ಟರು. ಇಂಗ್ಲೆಂಡಿಗೆ ಹೋಗುವ ಮುನ್ನ ನನ್ನ ಗಂಡ ಕೆಲವು ಮುಖ್ಯ ಕೆಲಸಗಳಿಗಾಗಿ ಹಿಂದುಸ್ಥಾನಕ್ಕೆ ಹೋಗಲೇ ಬೇಕಾಗಿತ್ತು. ಎಂತಲೇ ಆತ ನನಗಿಂತ ಕೆಲ ತಿಂಗಳು ಮುಂಚೆಯೇ ಹಿಂದೂಸ್ಥಾನಕ್ಕೆ ಹೊರಟು ಹೋದ. ಬೊಂಬಾಯಲ್ಲಿ ನಾವಿಬ್ಬರೂ ಸೇರಿದೆವು. ಅಲ್ಲಿಂದ ಇಬ್ಬರೂ ಜೊತೆಯಾಗಿ ಗಾಂಧೀಜಿಯನ್ನು ನೋಡಲು ಅಹಮದಾಬಾದಿಗೆ ಹೊರಟೆವು. ಆಗ ಗಾಂಧೀಜೀ ತಮ್ಮ ಕೆಲವರು ಹಿಂದೀ ಗೆಳೆಯರೊಂದಿಗೆ ಅಹಮದಾಬಾದಿಗೆ ಸಮೀಪದ ಆಶ್ರಮದಲ್ಲಿದ್ದರು ನಾವು ಆಶ್ರಮದಲ್ಲಿ ಇಳಿದುಕೊಳ್ಳುವ ಹಾಗಿರಲಿಲ್ಲ. ಅಹಮದಾಬಾದಿನಲ್ಲಿದ್ದು ದಿನವೂ ಅವರನ್ನು ನೋಡಲು ಹೋಗುತ್ತಿದ್ದೆವು.

ಈ ಮೂರು ವರ್ಷಗಳಲ್ಲಿ ಅವರ ವಿಚಾರಚಕ್ರ ಬಹುದೂರ ಮುಂದೆ ಹೋಗಿತ್ತು. ನೋಡುವ ಮುಂಚೆ 'ಅವರೂ ಎಷ್ಟೋ ಬದಲಾಯಿಸಿರುತ್ತಾರೆ; ಈಗ ಅವರು ವಿಶ್ವವ್ಯಕ್ತಿಯಲ್ಲ, ಭಾರ

ತೀಯ ದಕ್ಷಿಣ ಆಫ್ರಿಕದ ನನ್ನ ಹಿರಿಯಣ್ಣನಲ್ಲ' ಎನಿಸಿತ್ತು ನನಗೆ. ಆದರೆ ನನ್ನ ಊಹೆ ತಪ್ಪೆಂದು ಗೊತ್ತಾಯಿತು. ನನ್ನ ಮಟ್ಟಿಗಂತೂ ಅವರು ಸ್ವಲ್ಪವೂ ಬದಲಾಯಿಸಿರಲಿಲ್ಲ ಅದೇ ಗಾಂಧೀಜೀ; ಅದೇ ಸ್ನೇಹಮಯ ಮೃದುಮೂರ್ತಿ. ನನ್ನ ಬಾಳಿನ ಚಿಲ್ಲರೆ ವಿಚಾರ, ಹಿರೀ ಸಮಸ್ಯೆ, ಎಲ್ಲದರಲ್ಲೂ ಹಿಂದಿನ ಹಾಗೆ ಅದೇ ಆಸಕ್ತಿ, ಸಹಾನುಭೂತಿ ಸ್ವಲ್ಪವೂ ಮಾಸಿರಲಿಲ್ಲ.

ಇಷ್ಟುಮಾತ್ರ ನಿಜ ಅವರೊಳಗಿನ ಸನ್ಯಾಸಿಜೀವ ಈಗ ಹೆಚ್ಚು ಪ್ರಕಟವಾಗಿತ್ತು, ಗೃಹಿಜೀವ ಮತ್ತಷ್ಟು ಎದ್ದು ಕಾಣಿಸುತ್ತಿತ್ತು. ಸುತ್ತಲವರಿಗೆ ಆಧ್ಯಾತ್ಮಿಕ ಮಹತ್ವವನ್ನು ಒತ್ತಿಒತ್ತಿ ಹೇಳುತ್ತಿದ್ದರು, ಆತ್ಮಜಿ ನಸೇವಾಡಿ ಎಂದು ಸಾರುತ್ತಿದ್ದರು. ಅವರ ಹೃದಯ ಮಾತ್ರ ಭಾರತದ ರಾಜಕೀಯ, ಬಡತನ, ಯಾತನೆ, ಅದರ ಪರಿಹಾರಕ್ಕಾಗಿ ಚಿಂತನೆ, ಇದರಲ್ಲೆ ಕರಗಿ ಹೋಗಿತ್ತು; ಮೂರು ಹೊತ್ತೂ ಅದೇ ಧ್ಯಾನ.

ಮೈಮೇಲೆ ಬಡ ಗುಜರಾತೀ ರೈತನ ಉಡುಪು; ಮೊಣಕಾಲವರೆಗೆ ಬರುವ ಒಂದು ತುಂಡು ಪಂಚೆ; ಮೇಲೊಂದು ವಸ್ತ್ರ; ಅಲ್ಲಿಗೆ ಅವರ ಉಡುಪು ಮುಗಿಯಿತು. ರಸ್ತೆಯಲ್ಲಿ ನಡೆಯುವಾಗ ಜೋಡು; ಮನೆಯಲ್ಲಿದ್ದರೆ ಬರಿಗಾಲೇ!

ಮನಸ್ಸು ಹರಿವ ಹಾದಿಯನ್ನು ಮೈಮೇಲಿನ ಉಡುಪು ಎತ್ತಿ ತೋರುತ್ತಿತ್ತು! ಒಂದೊಂದು ಬಗೆಯ ಉಡುಪು ಒಂದೊಂದು ಬಗೆಯ ವಿಚಾರದ ಕನ್ನಡಿ ಆದರಲ್ಲೂ ಎಂಥ ನಿರ್ಲಿಪ್ತತೆ! ಒಂದೊಂದೂ ಅವರ ವಿಚಾರಧಾರೆಯ ಅಜ್ಞಾತ ಪ್ರದರ್ಶನ ಇವೆಲ್ಲದರ ಹಿಂದೆ ವ್ಯಕ್ತಿಯನ್ನ ಬಟ್ಟೆಯಂತೆ ಧರಿಸಿ, ದೇವನಿದಿರು ಅದನ್ನೂ ಕಿತ್ತೆಸೆದು ನಗ್ನನಾಗಿ ನಿಲ್ಲಲು ಸಿದ್ಧವಾದ ಮಾನವ ಮೂರ್ತಿ ಕಾಣುತ್ತಿತ್ತು ದಕ್ಷಿಣ ಆಫ್ರಿಕದಲ್ಲಿ ನಾನವರನ್ನು ಮೊದಲಬಾರಿಗೆ ನೋಡಿದಾಗ ತಲೆಯಮೇಲೆ ಕಸಬಿನ ಕುರುಹಾದ ಕಪ್ಪು

ರುಮಾಲು, ಪಟ್ಟೆ ಪಟ್ಟೆ ನಿಲುವಂಗಿ-ಕಪ್ಪು ನೀಲಿ ಪಟ್ಟೆಗಳಿದ್ದುದು ಅವರಿಗೆ ತುಂಬಾ ಪ್ರೀತಿ-, ಕಾಲರು ಟೈ ಕಾಲುಚೀಲ ಬೂಟ್ಸ್. ಅದೇ ಲಂಡನ್ನಿನಲ್ಲಿ ಕಂಡಾಗ ಸಿಲ್ಕ್‌ಹ್ಯಾಟು, ಸೊಗಸಾಗಿ ಹೊಲಿದ ಕೋಟು, ಹೊಳೆಹೊಳೆವ ಬೂಟು; ಎದ್ದು ಕಾಣಿಸುತ್ತಿದ್ದರು ಗಾಂಧೀಜೀ ಬಟ್ಟೆಯನ್ನು ಬೇಕಾದಷ್ಟು ಇಟ್ಟುಕೊಂಡಿದ್ದರು ಆ ಕಾಲಕ್ಕೆ. ಆಮೇಲೆ ನಾನೇ ಇವನ್ನೆಲ್ಲಾ ಅವರಿವರಿಗೆ ದಾನ ಮಾಡಿಬಿಟ್ಟೆ.

ಲಂಡನ್ನಿಂಗ ದಕ್ಷಿಣ ಆಫ್ರಿಕಕ್ಕೆ ಹಿಂದಿರುಗಿದ ಮೇಲೆ ಮತ್ತೆ ನಿಲುವಂಗಿ. ಈ ಸಲ ಅವರಿಗಾಗೇ ಹೊಲಿದದ್ದೂ ಅಲ್ಲ, 'ರೆಡಿಮೇಡ್', ಜೂಲಾಜಾಲಾ ಬೂಟ್ಸ್ ಕೂಡಾ ಅಷ್ಟೆ, ಮೊದಲಿನ ಹಾಗೆ ಹೊಳೆಯುತ್ತಿರಲಿಲ್ಲ. ಕಾಲರಿಗಂತೂ ಎಳ್ಳುನೀರು ಬಿಟ್ಟುಬಿಟ್ಟರು. ಇದಾದ ಕೆಲವು ವರ್ಷಗಳ ಮೇಲೆ ಪಾಯಿಜಾಮಾ, ಜುಬ್ಬಾ, ಚಪ್ಪಲಿ; ಕಡೆಗೆ ತುಂಡುಪಂಚೆ, ಅಂಗವಸ್ತ್ರ ! ಅದೂ ಕೈಯಲ್ಲೇ ನೂತು ನೆಯ್ದುದ್ದು. ಇಷ್ಟು ಹೊತ್ತಿಗೆ ಒಂದೆರಡು ಹಲ್ಲೂ ಉದುರಿದ್ದವು! ಏಕೆ ಎಂದು ಕೇಳಿದಕ್ಕೆ 'ಹೆಚ್ಚು ದ್ರಾವಕವಿದ್ದ ಹಣ್ಣು ತಿಂದು ತಿಂದು ಹಲ್ಲು ಉದುರಿಹೋದವು' ಎಂದು ಹೇಳಿ ನಕ್ಕರು.

ಹಲ್ಲು ಉದುರಿದ್ದರಿಂದ ಅವರ ಮುಖದಲ್ಲಿ ತುಂಬಾ ಬದಲಾವಣೆಯಾಗಿತ್ತು. ನಕ್ಕರೆ ಬಾಯಲ್ಲಿ ಕರ್ರಗೆ ಸಂದು ಕಂಡು ಯಾಕಾದರೂ ನಗುತ್ತಾರೋ ಎನಿಸುತ್ತಿತ್ತು. ಆಮೇಲೆ ಕೃತಕ ಹಲ್ಲು ಕಟ್ಟಿಸಿಕೊಂಡರಾಗಲಿ, ಅದನ್ನು ಊಟಮಾಡುವಾಗ ಅಗೆಯಲು ಅನುಕೂಲವಾಗಲೆಂದು ಮಾತ್ರ ಉಪಯೋಗಿಸುತ್ತಿದ್ದರು.

ಕಸ್ತೂರಿ ಬಾ ಕಲಿತ ನಾಲ್ಕಾರು ಇಂಗ್ಲೀಷು ಮಾತಿನಲ್ಲಿ ಒಂದೆರಡನ್ನು ಮರೆತುಬಿಟ್ಟಿದ್ದರು. ಆದರೂ ಇಲ್ಲಿನ ಬಿಡುವಿಲ್ಲದ ದುಡಿತದ ಜೀವನ ಅವರಿಗೆ ಸಂತೋಷವಾಗಿತ್ತು. ಕೆಲವು ದಿನಗಳ ಹಿಂದೆಯೇ ಅವರ ಹಿರಿಯ ಸೊಸೆ ತೀರಿಕೊಂಡಿದ್ದರಿಂದ ಆಕೆಯ ಮೂರು ಜನ ಮಕ್ಕಳೂ ಬಾ ಹತ್ತಿರವೇ ಇದ್ದರು. ಇವರ ಜವಾಬ್ದಾರಿ ಬೇರೆ ನಿತ್ಯದ ಬಿಡುವಿಲ್ಲದ ಕೆಲಸದೊಂದಿಗೆ.

ಆಶ್ರಮವನ್ನೆಲ್ಲಾ ನೋಡಿ, ಅದರ ವಿಚಾರ ಚರ್ಚಿಸಿದ್ದಾದ ಮೇಲೆ ಮಾತು ಯುದ್ಧದ ಕಡೆ ಹೊರಳಿತು. ಈ ಯುದ್ಧದಲ್ಲಿ ತಾವೇನು ಮಾಡಬೇಕೆಂಬುದ ಗಾಂಧೀಜಿಗೆ ಗೊತ್ತಿರಲಿಲ್ಲ. ಯುದ್ಧ, ರಕ್ತಪಾತವೆಂದರೆ ಅವರಿಗೆ ಹೇಸಿಗೆ. ಜನರಾಗಲಿ ದೇಶಗಳಾಗಲಿ ಕೊಲೆಗೆ ಕೈ ಹಾಕದೆ ತಮ್ಮ ಜಗಳ ತೀರಿಸಿಕೊಳ್ಳಬಾರದೇಕೆ ಎಂಬುದು ಅವರ ಪ್ರಶ್ನೆ. ಆದರೂ ಜರ್ಮನರೆದಿರ ಸತ್ಯಾಗ್ರಹ ಹೂಡುವ ಮಾತನ್ನು ಗಾಂಧೀಜೀ ಹೇಳುತ್ತಿರಲಿಲ್ಲ. ಗೀತೆಗೆ ಗಾಂಧೀಜೀ ಯಾವಾಗಲೂ ಆಧ್ಯಾತ್ಮಿಕ ಅರ್ಥ ವಿವರಣೆ ಕೊಡುತ್ತಿದ್ದರು. ಭಗವಾನನ ಮಾತಿಗೆ ಲೌಕಿಕ ಅರ್ಥವನ್ನು ಅವರೆಂದೂ ಒಪ್ಪುತ್ತಿರಲಿಲ್ಲ. ಆದರೂ [illegible] ತ್ರೀ, ಅದರಲ್ಲಿ ಶ್ರೀಕೃಷ್ಣ, ಅರ್ಜುನನಿಗೆ ಶತ್ರುವಿನೊಡನೆ ಹೋರಾಡುವಂತೆ ಹೇಳಿದ್ದನ್ನು ಹೇಳಿ ನಾವೂ ಹಾಗೇ ಮಾಡಬೇಕೆನ್ನುತ್ತಿದ್ದರು. ಮುಂದೆ ತಮ್ಮ ಜನರು ಸೇನೆಗೆ ಸೇರಬೇಕೆಂದು ಕೂಡಾ ಅವರು ಹೇಳಿದರು.

‘ಇದೇನು? ನೀವೂ ಯುದ್ಧದ ಪರವಾಗಿ ವಾದಿಸುತ್ತೀರಲ್ಲಾ?’ ಒಂದು ದಿನ ಮಾತಾಡುತ್ತಿರುವಾಗ ನಾನು ಕೇಳಿದೆ.

‘ಮಾಡುವ ಕೃತ್ಯಕ್ಕೆ ಅದರಿಂದಾಗಬಹುದಾದ ಪರಿಣಾಮಕ್ಕೆ ಹೆದರಿ ಕೆಲಸವನ್ನೇ ಮಾಡದಿರುವುದು ಒಂದು ಸದ್ಗುಣವಲ್ಲ’ ಎಂದರು ಗಾಂಧೀಜೀ.

‘ಹಾಗಾದರೇನು ಮಾಡಬೇಕೆನ್ನುತ್ತೀರಿ?’

‘ಪೂರ ಕಲಿವವರೆಗೆ, ನಿನ್ನ ಕೆಲಸ ನೀ ಮಾಡುತ್ತಿರಬೇಕು. ಕಲಿತಮೇಲೆ ನೀನು ಕೆಲಸ ಮಾಡಬೇಕಾಗಿಲ್ಲ, ಅಲ್ಲಿಗೆ ನೀನು ಸಿದ್ಧಳಾದಂತೆ’ ಎಂದರು.

“ನಿಮ್ಮ ಮಾತು ಕೇಳಿದರೆ ಯುದ್ಧ ಮಾಡುವುದೂ ಸರಿಯೇ ಎನಿಸುತ್ತದೆ. ಸರಿ, ತಪ್ಪು ಎಂಬುವು ನ್ಯಾಯಾಂಗಕ್ಕೆ [illegible] ಎನಿಸುತ್ತದೆ ನನಗೆ. ಎಷ್ಟೋ ಸಲ ಹೀಗೂ ಅನಿಸಿದೆ. ನೀವು ಎಷ್ಟೋ ಸಲ

ತರ್ಕವಾಡತೆ, ದೇವರ ಮೇಲೆ ಭಾರ ಹಾಕಿ, ಯಾವುದು ಸರಿ ಎನಿಸುತ್ತದೆಯೋ ಅದನು ಮಾಡಿಬಿಡುತ್ತೀರಿ. ಆದರೆ ನೀವೇ ಹೇಳಿರಲಿಲ್ಲವೆ? ಪ್ರೇಮ ಹಗೆತನವನ್ನು ತುಳಿದು ಬೆಳಗುತ್ತದೆ ಎಂತ."

'ನಿಜ. ನಾ ಬಲ್ಲೆ. ಆದರೆ ಹಿಂದುಸ್ತಾನದ ಜನ ಹಿಂಸೆಗೆ ಕೈ ಹಾಕದಿರುವುದಕ್ಕೆ ಕಾರಣ ಸತ್ಯಾಗ್ರಹಿಗಳ ಮೇಲಿನ ಪ್ರೀತಿ, ಭ್ರಾತೃ ಭಾವ ಅಲ್ಲ ಹೇಡಿತನ. ಹೇಡಿತನದಿಂದೊಡಗೂಡಿ 'ಶಾಂತಿ; ಧೈರ್ಯ ತುಂಬಿದ ಕಾಳಗಕ್ಕಿಂತ ಕೀಳಾದ್ದು. ಆದರು ಹೆದರಿ ಹಿಂಜರಿವುದಕ್ಕಿಂತ ಸೋರಿ ಸಾಯುವುದೇ ನನಗೆ ಹೆಚ್ಚು ಪ್ರಿಯ ಎಂದರು ಗಾಂಧೀಜೀ ದುಃಖದಿಂದ.

ಉಳಿದವರಿಗೆ ಆದರ್ಶವಾಗಲು ಗಾಂಧೀಜೀ ತಾವೇ ಸೇನೆಗೆ ಸೇರಲು ಸಿದ್ಧರಾಗಿದ್ದರು. ಆ ನಿರ್ಧಾರದಿಂದ ಅವರನ್ನು ಕದಲಿಸಲು ನನ್ನ ಗಂಡ, ಗಾಂಧೀಜಿಯು ಇತರ ಗೆಳೆಯರು ಕೋಟಿಗುಜ್ಜು ಮಾಡಬೇಕಾಯಿತು.

o o o

ಸಾವಿನ ಬಳಿಕ—ಮುಂದೇನು? ಈ ಪ್ರಶ್ನೆಯ ಬಗ್ಗೆ ಗಾಂಧೀಜಿಯ ಹತ್ತಿರ ಚರ್ಚಿಸಬೇಕೆಂದು ಎಷ್ಟೋ ಸಲ ಪ್ರಯತ್ನಮಾಡಿದೆ. ಆದ ಅವರ ಮನಸ್ಸು ಮಾತ್ರ ಎಂದೂ ಈ ಊಹಾಪೋಹದ ಚಕ್ರ ತೀರ್ಥಕ್ಕಿಳಿಸುತ್ತಿರಲಿಲ್ಲ. ಧಾರ್ಮಿಕ ಅನುಭವದಲ್ಲಿ ಗಾಂಧೀಜಿಯದು ಅನುಭಾವಿಯ ಪಂಥ; ತತ್ವ ಶಾಸ್ತ್ರಪಾರಂಗತನದಲ್ಲ. ಪುನರ್ಜನ್ಮದ ಬಗ್ಗೆ ಬೇಕಾದಷ್ಟು ಮಾತಾಡಿದರು 'ಸತ್ತ' ಎಂದ ಹತ್ತು ನಿಮಿಷದ ಮೇಲೆ ಏನಾಗುವುದೋ ಗಾಂಧೀಜೀ ಹೇಳುತ್ತಿರಲಿಲ್ಲ. ಒಂದು ಸಲ ಗಾಂಧೀಜಿಗೆ ನನ್ನ ಗೆಳೆಯರೊಬ್ಬರ 'ಭಾವಾನುಭವ'ದ ವಿಚಾರ ಹೇಳುತ್ತಿದ್ದೆ. ಅವನ್ನು ಕೇಳುವಷ್ಟು ತಾಳ್ಮೆ ಕೂಡಾ ಗಾಂಧೀಜಿಗಿರಲಿಲ್ಲ. ಸತ್ತಮೇಲೆ ಏನಾಗಬಹುದೆಂದು ಚರ್ಚಿಸು

ವುದು ,ಹೊತ್ತು ಹಾಳುಮಾಡಿದ ಹಾಗೆ ಎಂದು ಗಾಂಧೀಜಿಯು ಅಭಿಪ್ರಾಯ.

'ಆದರೆ ಕೆಲವರಿಗೆ ಅದು ವ್ಯರ್ಥ ಕಾಲಹರಣವೆನಿಸುವುದಿಲ್ಲ. ಬಾಳಿಗಿಂತ ಹೆಚ್ಚಾಗಿ ಸಾವಿನ ಪರದೆಯಾಚೆ ಏನಿದೆಯೋ ನೋಡ ಬೇಕೆಂಬ ಆಸಕ್ತಿ ಅವರಿಗೆ' ನಾನು ಹೇಳಿದೆ.

'ಇದ್ದೀತು, ಆದರೂ ತಮ್ಮ ಈಗಿನ ಬಾಳು, ತಮ್ಮ ಸುತ್ತಲ ಜೀವಿಗಳಿಗೆ ಸುಖಕೊಡುವ ಸಮಸ್ಯೆ—ಇದೇ ಮಾಡಬೇಕಾದ ಕೆಲಸ' ಎಂದರು ಗಾಂಧೀಜೀ

'ಸಾವಿನ ಅರ್ಥ ತಿಳಿದರೆ ಅವರು ಹೆಚ್ಚು ಸುಖಿಗಳಾಗಬಹು ದೆಂದು ನಿಮಗನಿಸುವುದಿಲ್ಲವೇ ?'

ಅದರ ಬಗ್ಗೆ ಯೋಚಿಸಲೇಬಾರದು. ಸಾವು ಅಂಥ ದೊಡ್ಡ ವಿಷಯವಲ್ಲ.'

'ಆದರೂ ಅದರ ಬಗ್ಗೆಯೆ ನಾವು ಹೆಚ್ಚು ಗೋಳಾಡು ತ್ತೇವೆ.......' ಗಾಂಧೀಜೀ ಅಲ್ಲಿಗೇ ಮಾತು ಮುರಿದುಬಿಟ್ಟರು· ಮುಂದೆ ಮಾತನಾಡುವುದು ಅವರಿಗೆ ಬೇಕಾಗಿರಲಿಲ್ಲ.

o o o

ನಾನು ಹಿಂದೂಸ್ಥಾನಕ್ಕೆ ಬಂದದ್ದು, ಒಂದೆರಡು ತಿಂಗಳು ಇದ್ದು ಹೋಗಲೆಂದು. ಆದರೆ ಯುದ್ಧದಿಂದಾಗಿ ಈ ಎರಡು ತಿಂಗಳು ಎರಡು ವರ್ಷ ಆಯಿತು. ನನ್ನ ಗಂಡ ಇಲ್ಲಿರುವಾಗ ಜೋರಾಗಿ ಖಾಯಿಲೆಯಾಯಿತು. ಬದುಕುವುದೇ ಕಷ್ಟವಾಯಿತು. ಹುಷಾ ರಾದ ಮೇಲೂ ಒಂದೆರಡು ತಿಂಗಳು ಎದ್ದು ಓಡಾಡುವಷ್ಟು ಶಕ್ತಿ ಇರಲಿಲ್ಲ. ಆದ್ದರಿಂದ ನನ್ನನ್ನು, ನನ್ನ ತಂಗಿ, ನನ್ನ ಮಕ್ಕಳನ್ನು ಗಾಂಧೀಜಿಯ ಜೋಳಿಗೆಗೆ ಹಾಕಿ ನನ್ನ ಗಂಡ ಇಂಗ್ಲೆಂಡಿಗೆ ಹೊರಟು ಹೋದ. ಬೊಂಬಾಯಿಂದ ಹೆನ್ರಿ ಇಂಗ್ಲೆಂಡಿಗೆ ಹೊರಟಾಗ ನನಗೂ

ಖಾಯಿಲೆ. ನನ್ನ ಗಂಡನ ಮನೆಗೆ ಅತೃಪ್ತಿ ಮಾಡುವುದರಲ್ಲಾದ ದಣಿವಿನಿಂದ ನಾನೇ ಮಲೇರಿಯಾ ಬಂದು ಹಾಸಿಗೆ ಹಿಡಿದಿದ್ದೆ.

ನಮ್ಮ ಜೊತೆಯಲ್ಲಿ ಒಂದೆರಡು ದಿನ ಇದ್ದುಹೋಗಲೆಂದು ಗಾಂಧೀಜೀ ಬೊಂಬಾಯಿಗೆ ಬಂದಿದ್ದರು. ಹೆನ್ರಿಯನ್ನು ಕಳಿಸಿದವರೇ ಬಂದರಿನಿಂದ ನೆಟ್ಟಗೆ ನನ್ನನ್ನು ನೋಡಲು ಬಂದರು. ದಿನದ ಮೇಲೆ ದಿನ ಕಳೆಯಿತು ಜ್ವರ ಮಾತ್ರ ತಗ್ಗಲಿಲ್ಲ ಗಾಂಧೀಜಿಗೆ ತುಂಬಾ ಯೋಚನೆಗಿಟ್ಟುಕೊಂಡಿತು. ನನ್ನ ಜ್ವರ ಇಳಿಯುವವರೆಗೂ ತಾವು ಬೊಂಬಾಯಿ ಬಿಡುವುದಿಲ್ಲನೆಂದು ಹೇಳಿಬಿಟ್ಟರು. ದಿನವೂ ನನ್ನನ್ನು ನೋಡಿಕೊಂಡು ಹೋಗಲು ಬರುತ್ತಿದ್ದರು. ಹಾಸಿಗೆಯ ಪಕ್ಕದಲ್ಲಿ ಕೂತು ಮಾತಾಡಿಸುತ್ತಿದ್ದರು. ನಾನೂ ಕಣ್ಣೀರಿಡುತ್ತಾ ಕೇಳುತ್ತಿದ್ದೆ ಎಂದೂ ಅವರು ನನ್ನನ್ನು ಗದರಿಸಲಿಲ್ಲ; ಮನಸ್ಸುಮಾಡಿ ಹಾಸಿಗೆ ಬಿಟ್ಟೇಳಬಾರದೆ ಎಂದು ಕೇಳಲಿಲ್ಲ. ಬೇರೆಯವರಾಗಿದ್ದರೆ ಎಷ್ಟು ರೇಗುತ್ತಿದ್ದರೋ! ಆದರೆ ಗಾಂಧೀಜಿಯ ಬಾಯಿಂದ ಒಂದು ಗಟ್ಟಿ ಮಾತು, ಬೇಸರದ ದನಿ ನಾ ಕೇಳಲಿಲ್ಲ. ನನ್ನ ಪಕ್ಕದಲ್ಲಿ ಅದೂ ಇದೂ ಸುದ್ದಿ ಹೇಳುತ್ತಾ, ಆಗಾಗ ತಮಾಷ ಮಾಡಿ ನಗಿಸುತ್ತಾ ಇದ್ದರು.

ಅಹಮದಾಬಾದಿನಲ್ಲಿ ಅವರಿಗಾಗಿ ಅವಸರದ ಕೆಲಸ ಕಾದಿತ್ತು. ನನಗಾಗಿ ಅದನ್ನು ತಡಮಾಡುತ್ತಿದ್ದರು; ಇದು ನನಗೂ ಗೊತ್ತಿತ್ತು. 'ನಾನಿದ್ದ ಮನೆಯವರು ನನ್ನನ್ನು ನೋಡಿಕೊಳ್ಳುತ್ತಾರೆ. ನನಗೂ ಬೇಗ ಹುಷಾರಾಗುತ್ತದೆ. ನೀವು ಹೋಗಿ' ಎಂದು ಒಂದು ಸಲ ಸೂಚಿಸಿದೆ.

'ಊಹು, ನಿನಗೆ ಗುಣವಾಗುವವರೆಗೂ ಬಿಟ್ಟು ಕದಲುವುದಿಲ್ಲ' ಎಂದು ಬಿಟ್ಟರು ಖಡಾಖಂಡಿತವಾಗಿ. ಹಾಗೇ ನನಗೆ ಸಂಪೂರ್ಣ ಗುಣವಾಗಿ ತನ್ನ ಭಯವಿಲ್ಲ ಎನ್ನುವವರೆಗೂ ನನ್ನನ್ನು ಬಿಟ್ಟು ಹೋಗಲಿಲ್ಲ ಬಾಪೂಜೀ.

○ ○ ○ ○

ನಾನು ಹಿಂದುಸ್ತಾನದಲ್ಲಿದ್ದಾಗಲೇ ಒಮ್ಮೆ ಗಾಂಧೀಜಿಯ ಬಾಳಹೊಳೆ ಬತ್ತುವ ಘೋರಕಾಲ ಬಂದಿತ್ತು. ಕರುಳಿನ ವ್ಯಾಧಿಯಿಂದ ಹಾಸಿಗೆ ಹಿಡಿದಿದ್ದರು. ಇಬ್ಬರು ವೈದ್ಯರು ಗಾಂಧೀಜಿಯ ಜೀವವನ್ನು ಸರ್ಪಗಾವಲು ಕಾಯುತ್ತಿದ್ದರು. ಅವರಿಗೆ ಹೇಗೆ ಆಹಾರ ಕೊಡಬೇಕೆಂಬುದು ಅವರಿಗೆ ದೊಡ್ಡ ಸಮಸ್ಯೆಯಾಗಿಹೋಗಿತ್ತು. ಹಾಲೊಂದೇ ವೈದ್ಯರಿಗೆ ಕೊಡಬಹುದಾಗಿದ್ದ ಆಹಾರ. ಆದರೆ ಹಸುವಿನ ಹಾಲು ಕುಡಿವುದಿಲ್ಲವೆಂಬುದು ಗಾಂಧೀಜಿಯ ಪ್ರತಿಜ್ಞೆ. ಗೆಳೆಯರೆಲ್ಲಾ ಕೋಟಿ ಬಾರಿ ಕೇಳಿಕೊಂಡರು; ಕಸ್ತೂರಿ ಬಾ ಕಾಲಿಗೆ ಬಿದ್ದು ಕೇಳಿಕೊಂಡರು; ಗಾಂಧೀಜಿಯ ನಿರ್ಧಾರ ಮಾತ್ರ ಕದಲಲಿಲ್ಲ. ನಮ್ಮ ಪ್ರಾಣಕ್ಕಿಂತ ಮಿಗಿಲಾಗಿ ಅವರನ್ನು ಪ್ರೀತಿಸುತ್ತಿದ್ದ ನಾವೆಲ್ಲಾ, ಅವರು ಗಳಿಗೆ ಗಳಿಗೆಗೆ ಸಾವಿನ ಸಮೀಪಕ್ಕೆ ಜಾರುತ್ತಿರುವುದನ್ನು ನೋಡುತ್ತಾ ಕೂತಿದ್ದೆವು. ನಾನಾಗ ಗಾಂಧೀಜಿಯ ಹತ್ತಿರವಿರಲಿಲ್ಲ. ನಾನಿದ್ದ ಸ್ಥಳಕ್ಕೂ ಅವರಿದ್ದ ಕಡೆಗೂ ಎರಡು ದಿನದ ಪ್ರಯಾಣ. ಆದರೂ ಅವರ ದೇಹಸ್ಥಿತಿಯ ವಿಷಯ ದಿನವೂ ನನಗೆ ತಿಳಿಯುತ್ತಿತ್ತು. ಒಂದು ದಿನ ಗಾಂಧೀಜೀ ತಮ್ಮ ಗುಮಾಸ್ತನಿಗೆ ಹೇಳಿ ಬರೆಸಿ ತಮ್ಮ ಚರಮಪತ್ರ ಕಳಿಸಿದರು ನನಗೆ. 'ನಾನು ಸಾಯುತ್ತಿದ್ದೇನೆ, ಸಾಯುವ ಮುನ್ನ ನಿನಗೊಂದು ಪ್ರೀತಿಯ ಮಾತು' ಎಂದು ಬರೆಸಿದ್ದರು. ನನ್ನೊಳಗೆ ಅಂತರಾತ್ಮ ಹೇಳುತ್ತಿತ್ತು: ಇದು ಕೊನೆಯಲ್ಲ, ಗಾಂಧೀಜೀ ಬದುಕುತ್ತಾರೆ. ನಾನು ಗಾಂಧೀಜಿಗೆ ಹಾಗೆಂದೇ ಕಾಗದ ಬರೆದೆ: 'ಭಾರತದಲ್ಲಿ ನೀವು ಮಾಡಬೇಕಾದ ಕೆಲಸ ಇನ್ನೂ ಬೆಟ್ಟದಷ್ಟಿದೆ; ನೀವು ಬದುಕುತ್ತೀರಿ, ಖಂಡಿತವಾಗಿಯೂ'.

ಗಾಂಧೀಜಿಗೆ ಗುಣವಾಯಿತು ! ಹೇಗೆ ಗುಣವಾಯಿತೆಂದು ಎಷ್ಟೋ ದಿನ ಕಳೆದ ಮೇಲೆ ಗಾಂಧೀಜೀ ನನಗೆ ಹೇಳಿದರು. ಅವರು 'ನೂರು ತೊಂದರೆ ಕೊಡುವ ಈ ಮಾಂಸದ ಮೈ ಹೋಗುವುದಾದರೆ ಹೋಗಲಿ; ಹಾಲಿನಿಂದ ಮಾತ್ರ ಇದನ್ನು ಉಳಿಸುವ್ಪದಾದರೆ ಇದಕ್ಕಾಗಿ ಪ್ರತಿಜ್ಞೆ ಮುರಿಯುವುದಿಲ್ಲ' ಎಂದು ನಿರ್ಧಾರಮಾಡಿಕೊಂಡು ಬಿಟ್ಟರಂತೆ. 'ಕಡೆಗೆ ಬಾ ಒಂದು ದಾರಿ ಹುಡುಕಿದರು. ನೀವು

ಪ್ರತಿಜ್ಞೆ ಮಾಡಿದ್ದು ಹಸುವಿನ ಹಾಲು ಕುಡಿಯುವುದಿಲ್ಲ ಎಂತ. ಮೇಕೆಯ ಹಾಲೇನೂ ನಿಷಿದ್ಧವಲ್ಲ. ಅದನ್ನು ತೆಗೆದುಕೊಳ್ಳಿ; ನಿಮ್ಮ ಪ್ರತಿಜ್ಞೆಗೇನೂ ಭಂಗಬರುವುದಿಲ್ಲ ಎಂತ ಹೇಳಿದರು. ಅವಳ ಮಾತು ಕೇಳಿದೆ. ನೀವು ಹೆಂಗಸರಿದ್ದೀರಲ್ಲಾ, ಅಬ್ಬಾ! ಚಂಡಿ ಹಟ ನಿಮ್ಮದು, ರಂಗೋಲಿಯ ಕೆಳಗೆ ನುಸುಳುವ ಜನ ನೀವು' ಎಂದರು ಗಾಂಧೀಜೀ. ಅವರು ಕಣ್ಣು ಹಾಸ್ಯತುಳುಕಿ ಹೊಳೆಯುತ್ತಿತ್ತು. ತಮ್ಮ ಪ್ರಾಣಕ್ಕಾಗಿ ಇಂಥ ಸೂಕ್ಷ್ಮತರ್ಕ ಹುಡುಕಿದ್ದಕ್ಕಾಗಿ ಮಾತಿನಲ್ಲಿ ಹೆಂಡತಿಯ ಬಗ್ಗೆ ಪ್ರೀತಿಗೆ ತುಂಬಿ ತುಳುಕುತ್ತಿತ್ತು. ಮೇಕೆಯ ಹಾಲೇ ಬಾಪೂ ಜೀವಕ್ಕೆ ಸಂಜೀವನಿಯಾಯಿತು ಗಾಂಧೀಜೀ ಬದುಕಿಕೊಂಡರು; ಮತ್ತೆ ಮೊದಲಿನಹಾಗೇ ಆದರು.

೧೮

ಯುದ್ಧ ಎಂದಿಗೆ ಮುಗಿದೀತೋ, ಯಾವಾಗ ಹೋಗಿ ನನ್ನ ಗಂಡನನ್ನು ಕಾಡಿಕೊಂಡೇನೋ ಎಂದು ದಿನ್ನ ದಿನವನ್ನು ಕೋರಿಯುತ್ತಿದ್ದ ಕಾತರ ಗಾಂಧೀಜಿಗೆ ಗೊತ್ತಿತ್ತು. ನನ್ನ ಬಯಕೆಯ ಬಗ್ಗೆ ತುಂಬಾ ಸಹಾನುಭೂತಿ ಇತ್ತು ಅವರಿಗೆ, ನಾವಿಷ್ಟು ದಿನ ಅಗಲಿರಬೇಕಾಗಿ ಬಂದುದಕ್ಕಾಗಿ ನನ್ನಷ್ಟೇ ಅವರೂ ನೊಂದಿದ್ದರು. ನಾವು ಕೂಡಿಬಾಳುವ ದಿನಕ್ಕಾಗಿ ನನ್ನಷ್ಟೇ ಕಾತರದಿಂದ ಅವರೂ ಕಾಯುತ್ತಿದ್ದರು. ಆದರೂ ಎಷ್ಟೋ ಸಲ 'ಈ ಅಗಲಿಕೆಯಿಂದ ಒಳ್ಳೆಯದೇ ಆಯಿತು. ಇಲ್ಲವಾದರೆ ಸಂಸಾರ ಬೇಸರವಾಗುತ್ತಿತ್ತು, ಅಲ್ಲವೆ?' ಎಂದು ಕೀಟಲೆ ಮಾಡುತ್ತಿದ್ದರು.

'ಅದೆಲ್ಲಾ ಸರಿ. ಅಗಲಿಕೆ ಎದೆಗಳನ್ನು ಬೆಸೆದ ಹಾಗೆ, ಎಷ್ಟೋ ಸಲ ಆ ಸ್ನೇಹ ತಂತುವನ್ನು ಹರಿದೂ ಬಿಡುತ್ತದೆ.' ಎಂದೆ ನಾನು.

'ನಿನ್ನ ವಿಷಯದಲ್ಲಿ ಅದು ಸಾಧ್ಯವಿಲ್ಲ, ಹೆನ್ರಿ ಒಳ್ಳೆಗಂಡ' ಎಂದರು ಗಾಂಧೀಜೀ.

'ಅಂದರೆ ನಾನು ಒಳ್ಳೆ ಹೆಂಡತಿ ಅಲ್ಲವೇನು?' ಚುರುಕಾಗಿ ಕೇಳಿದೆ. 'ಸದ್ಗುಣಗಳೆಲ್ಲಾ ಗಂಡಸರ ಗುತ್ತಿಗೆಯಲ್ಲ.'

'ಅಲ್ಲವಾದರೆ ಸರಿ. ಅಂತೂ ಈ ಸಲ ನೀನೆಂಥ ಹೆಂಡತಿಯೆಂಬುದು ತಾನೇ ಗೊತ್ತಾಗುತ್ತದೆ. ಹೇಳಿಕೊಳ್ಳಬೇಕಾದದ್ದೇನೂ ಇಲ್ಲ!' ಎಂದು ದಬಾಯಿಸಿದರು ಗಾಂಧೀಜೀ.

ನಾನು ಬಾಯಿ ಮುಚ್ಚಿಕೊಂಡೆ!

ಯುದ್ಧ ಮುಗಿದು, ಹಡಗುಗಳು ಸರಾಗವಾಗಿ ಹೋಗಿ ಬರುವ ಹಾಗಾದ ಕೂಡಲೆ 'ನೀಲಗಿರಿ ಬಿಟ್ಟು ಬೊಂಬಾಯಿಗೆ ಕೂಡಲೆ ಬಾ' ಎಂದು ಗಾಂಧೀಜೀ ಕಾಗದ ಬರೆದರು. ನೀಲಗಿರಿಯಿಂದ ಬೊಂಬಾಯಿಗೆ ಎರಡು ದಿನದ ಪ್ರಯಾಣ. ಆದರೂ ನಾನು ಗಾಂಧೀಜಿಯನ್ನು ನೋಡಿ ಎರಡು ವರ್ಷವಾಗಿತ್ತು. ಕಾಗದ ಬಂದ ಆರುವಾರದ ಮೇಲೆ ಗಾಂಧೀಜಿಯನ್ನು ನೋಡಿದೆ. ಎಷ್ಟು ಬಡವಾಗಿ ಹೋಗಿದ್ದರು. ಬಾಪೂ! ನನಗಂತೂ ಕರಳು ಚುರ್ರೆನ್ನುವ ಹಾಗಾಯಿತು. ಗಾಂಧೀಜಿಯೇನೋ 'ನಾನು ಚೆನ್ನಾಗಿಯೇ ಇದೇನೆ. ಅದಿರಲಿ. ನೀನೂ ನಿನ್ನ-ಮಕ್ಕಳೂ ಹೇಗಿದೀರಿ ಹೇಳು' ಎಂದರು. ಎಂಥ ಜೀವಿ ಇದು.

ಭಾರತವನ್ನೇ ತನ್ನ ಅಗ್ನಿಹಸ್ತದಿಂದ ಸುಟ್ಟು ಕರಕಾಗಿಸಿದ ಇನ್ಫ್ಲುಯೆಂಜಾ ಮಾರಿ ಜಗತಾನೆ ತನ್ನ ಮೃತ್ಯು ನಾಟ್ಯ ಮುಗಿಸಿ ಹೋಗಿದ್ದಳು. ನೀಲಗಿರಿಯಂಥ ಸಣ್ಣ ಊರಿನಲ್ಲೂ ಈ ತಾಂಡವದ ದುರ್ಭರ ಬೇಗೆ ನನಗೆ ಅನುಭವವಾಗಿತ್ತು. ಸಾವಿನ ಘೋರಾಕಾರದ ಇದಿರು ಮಾನವನು ಎಷ್ಟು ಅಸಹಾಯಕನೆಂಬುದು ನನಗೆ ಕಣ್ಣಾರೆ ಕಂಡು, ನನ್ನೆದೆಯಲ್ಲಿ ಅಳಿಸಲಾಗದ ಬರೆ ಎಳೆದಿತ್ತು. ಊನೂರಿನಲ್ಲಿ ಇದ್ದವರಿಗಿಂತ ಸತ್ತವರೆ ಹೆಚ್ಚು! ಇದನ್ನು ನೋಡಿ ನನಗೆ ಬಾಳಿಗಿಂತ ಸಾವೇ ಸತ್ಯವೆನಿಸಿತು. ನಾನೂ ನನ್ನ ಮಕ್ಕಳು, ನನ್ನ ತಂಗಿ, ಆಳು ಕಾಳು ಎಲ್ಲಾ ಆ ಬೇನೆಯನ್ನು ಅನುಭವಿಸಿದೆವು. ಆದರೆ ಯಾರೂ ಸಾಯಲಿಲ್ಲ; ನಮ್ಮ ಪುಣ್ಯ! ಹತ್ತಿರದಲ್ಲಾರೂ

ವೈದ್ಯರಿಲ್ಲದ್ದರಿಂದ ನಾನೂ ನನ್ನ ತಂಗಿಯೇ ವೈದ್ಯರಾಗಿದ್ದೆವು; ತೋಚಿದ ಸಿಕ್ಕಿದ ಔಷಧ ಕೊಡುತ್ತಿದ್ದೆವು. ನಾನು ಸೇನೆಗೆ ಸೇರಿರಲಿಲ್ಲ; ಅಲ್ಲದೆ ದಕ್ಷಿಣ ಆಫ್ರಿಕಾದಲ್ಲಿದ್ದಾಗ ನನ್ನ ಗಂಡ ಗಾಂಧೀಜಿಯ ಆಪ್ತ ಗೆಳೆಯನಾಗಿದ್ದುದು ಅಲ್ಲಿಯ ಐರ್ಲೋಪ್ಯರಿಗೆಲ್ಲಾ ಗೊತ್ತಿತ್ತು. ಹೆಚ್ಚುಕಡಿಮೆ ಅವರು ನಮಗೆ ಬಹಿಷ್ಕಾರವನ್ನೇ ಹಾಕಿದ್ದರು. ಆದ್ದರಿಂದ ಅವರಿಂದಲೂ ನನಗೇನೂ ಸಹಾಯ ಸಿಗುವ ಹಾಗಿರಲಿಲ್ಲ. ಆರು ವಾರ ಕಾಲ—ಅಬ್ಬಾ! ಎಂಥ ದುರ್ದಿನಗಳವು!!—ನಾನು ನನ್ನ ತಂಗಿ ಇಬ್ಬರೇ ಸಾವಿನೊಂದಿಗೆ ಹೋರಾಡುತ್ತಿದ್ದೆವು ಒಂದು ತಿಂಗಳ ಕಾಲ ಆಳುಗಳೂ ಹಾಸಿಗೆ ಹಿಡಿದಿದ್ದರಿಂದ ಮಕ್ಕಳ ಜೊತೆಗೆ ಅವರಿಗೂ ಉಪಚಾರ ಮಾಡಬೇಕಾಯಿತು. ಜೊತೆಗೆ ಮನೆಗೆಲಸವೆಲ್ಲಾ ನಮ್ಮಿಬ್ಬರ ಮೇಲೆಯೆ. ಕಟ್ಟಿಗೆ ಮಾರುವವರೆಲ್ಲಾ ಸತ್ತು ಹೋಗಿದ್ದುದರಿಂದ ಕಟ್ಟಿಗೆ ಕೂಡಾ ಸಿಗುತ್ತಿರಲಿಲ್ಲ. ಅಡಿಗೆಯವನ ಎಂಟು ವರ್ಷದ ಮಗ ಕಾಡಿಗೆ ಹೋಗಿ ಕಟ್ಟಿಗೆಚೂರು ಆರಿಸಿಕೊಂಡು ಬರುತ್ತಿದ್ದ. ಅದರಿಂದಲೇ ಹಾಲು ಗಂಜಿ ಕಾಯಿಸುತ್ತಿದ್ದೆವು ರೋಗಿಗಳಿಗಾದರಾಯಿತು; ನಮ್ಮ ಯೋಚನೆಯೆ ನಮಗಿರಲಿಲ್ಲ.

ಇವೆಲ್ಲಾ ಕೇಳಿ ಗಾಂಧೀಜೀ ತುಂಬಾ ನೊಂದುಕೊಂಡರು. ಅವರ ಜೊತೆಗೆ ನಾವು ಬೊಂಬಾಯಿಗೆ ಹೋದಾಗ, ಅಲ್ಲಿ ಕಾಲರಾ ಹತ್ತಿ ಬೇಯುತ್ತಿತ್ತು. ನಾವು ಅಲ್ಲಿರುವುದು ಗಾಂಧೀಜಿಗೆ ಸರಿ ತೋರಲಿಲ್ಲ.

'ನೀವು ಇಲ್ಲಿರುವುದು ಸರಿಯಲ್ಲ.' ಹಡಗು ಗೊತ್ತಾಗುವವರೆಗೆ ಮಾಥೆರಾನಿಗೆ ಹೋಗಿ ಇರಿ ಈ ಹೊಸಮಾರಿ ಇಲ್ಲಿರುವಾಗ ನಿಮ್ಮನ್ನು ಇಲ್ಲಿ ನಾನಿಡಲಾರೆ ಏನೇನು ಬೇಕೋ ಆ ಸಿದ್ಧತೆ ಮಾಡಿಕೊಂಡು ಕೂಡಲೆ ಮಾಥೆರಾನಿಗೆ ಹೋಗಿಬಿಡಿ' ಎಂದರು ಗಾಂಧೀಜೀ.

'ನನ್ನ ಹತ್ತಿರ ದುಡ್ಡೇ ಇಲ್ಲವಲ್ಲ, ಅದಕ್ಕೇನು ಮಾಡಲಿ?' ಎಂದು ನಾನು ತಕರಾರು ತೆಗೆದೆ.

'ಅದರ ಯೋಚನೆ ನಿನಗೇಕೆ? ಹೇಗೋ ಅದನ್ನೆಲ್ಲಾ ನಾನು ನೋಡಿಕೊಳ್ಳುತ್ತೇನೆ. ನೀನು ಆರೋಗ್ಯವಾಗಿರುವುದು ಮಾತ್ರ ನನಗೆ ಬೇಕು.'

'ಮನೆಗೆ ಹೋಗಲಿಕ್ಕೇನು ಮಾಡಲಿ.'

'ಒಂದು ಸಮಿತಿಯ ಮುಂದೆಹೋಗಿ ನಿಮ್ಮ ಹೇಳಿಕೆ ಕೊಟ್ಟು ಟಿಕೀಟು ಪಡೆಯಬೇಕು. ಅದಕ್ಕಿಂತ ಮೊದಲು ಈ ಪ್ರಯಾಣದ ಕಷ್ಟವನ್ನು ನಿನ್ನ ಮೈ ತಡೆಯಬಲ್ಲದೆಂಬುದಕ್ಕೆ ವೈದ್ಯರ ಸಿಫಾರಸಾಗಬೇಕು. ಇದಕ್ಕೇನು ಬೇಕೋ ಅದನ್ನು ಮೊದಲು ಮಾಡೋಣ'

ನಾನು ಮಾತಾಡುತ್ತಿದ್ದಾಗ ಅವರು ಮಲಗಿಕೊಂಡೇ ನಮ್ಮ ಪ್ರಯಾಣಕ್ಕೆ ಬೇಕಾದ ಸಿದ್ಧತೆಗಳನ್ನೆಲ್ಲಾ ಮಾಡುತ್ತಿದ್ದರು. ಮರು ದಿನ ವೈದ್ಯಪರೀಕ್ಷೆ, ಸಮಿತಿಯ ಪರೀಕ್ಷೆ ಮುಗಿಸಿಕೊಂಡು ನಾನು ಮಾಥೆರಾನಿಗೆ ಹೋದೆ. ಅಲ್ಲಿ ಆರುವಾರ ಕಾಲ ವಾಸ, ಅಲ್ಲಿರುವಷ್ಟು ದಿನವೂ ವಾರಕ್ಕೊಂದು ಸಲ ಬಂದು ಗಾಂಧೀಜಿಯನ್ನು ನೋಡಿ ಕೊಂಡು ಹೋಗುತ್ತಿದ್ದೆ.

ಒಂದು ದಿನ ಏಕೋ ಏನೋ ತುಂಬಾ ಬೇಸರವಾಗಿತ್ತು. ಸುತ್ತಲೂ ಸಾವು ಕಂಡು, ಬದುಕುವುದು ಎಂಥ ಪ್ರಯಾಸದ ಕೆಲಸ ಎನಿಸಿತ್ತು. ಗಾಂಧೀಜಿಗೆ 'ಭಾರತದ ಜನ ಕಾಳಿಯನ್ನೇಕೆ ಪೂಜಿಸುತ್ತಾರೆ ಎಂಬುದು ನನಗೀಗ ಅರ್ಥವಾಯಿತು' ಎಂದೆ

'ಕಾಳೀಪೂಜೆ ಮಾಡಿದರೆ ಸಾವು ತಪ್ಪುತ್ತದೆಯೆ? ಅದನ್ನಿದಿರಿಸಲೇ ಬೇಕು' ಎಂದರು ಗಾಂಧೀಜೀ, ನೋವು ತುಂಬಿದ ನಗು ನಗುತ್ತಾ.

ಅದಕ್ಕೆ ನಾನೇನೂ ಉತ್ತರ ಕೊಡಲಿಲ್ಲ ಒಂದೆರಡು ನಿಮಿಷ ಹಾಗೇ ಸುಮ್ಮನೆ ಕುಳಿತಿದ್ದೆವು.

'ಈ ಅವತಾರದಲ್ಲೇ ನನ್ನ ಪುನರ್ಜನ್ಮದ ಚಕ್ರ ಮುಗಿಸಬಹುದೆಂದು ಒಮ್ಮೆ ನನಗನಿಸಿತ್ತು' ಗಾಂಧೀಜೀ ಹೇಳಿದರು. 'ಅದು

ಸಾಧ್ಯವಿಲ್ಲವೆಂದು ನನಗೀಗ ಗೊತ್ತಾಗಿದೆ. ನಾನು ಮತ್ತೆ ಹುಟ್ಟಲೇ ಬೇಕು. ಅದನ್ನು ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ ನಾನು ಇನ್ನೊಂದು ಬಾರಿ ಮಾತ್ರ ಹುಟ್ಟುತ್ತೇನೆ ಅನಿಸುತ್ತಿದೆ. ಅಷ್ಟೆ.'

ನಾನು ಹೇಳಿದೆ: 'ನನಗೆ ಬಾಳು ಬೇಸರವಾಗಿದೆಯೆಂದಲ್ಲ. ಬಾಳಿನಲ್ಲೇ ಏನೋ ಒಂದು ಸೌಂದರ್ಯವಿದೆ ಜನನ, ಪುನರ್ಜನ್ಮಗಳ ಯೋಚನೆಯಿಂದ ನನಗೆ ದುಃಖವಾಗುವುದಿಲ್ಲ. ಆದರೆ ಇಲ್ಲಿ ಭೀಕರ ಸಾವು ಬೆತ್ತಲೆ ತಿರುಗುತ್ತಿದೆಯಲ್ಲ. ಅದಕ್ಕೆ ಸೋಲುವುದೇ ಸುಲಭವೆಂದು ನನಗನಿಸುತ್ತದೆ.'

'ನಿನ್ನಂಥವಳು ಆಡಬೇಕಾದ ಮಾತಲ್ಲ ಇದು' ಗಾಂಧೀಜೀ ಹೇಳಿದರು. 'ಊಹೆಗೆ ಹೆದರಿ ನೀನು ಹೇಡಿಯಾಗುತ್ತಿದ್ದೀಯೆ. ನಿನ್ನ ದೈವಭಕ್ತಿ, ನಂಬಿಕೆ ಎಲ್ಲಿಗೆ ಹೋಯಿತು ಈಗ?

'ಸದ್ಯಕ್ಕೆ ನಾನು ದುರ್ಬಲಳಾಗಿದೇನೆ. ಎಂತಲೇ ಹೆದರುತ್ತಿದೇನೆ.'

'ಊಹೂಂ ಈ ಮಾತಾಡಿ ನಿನಗೇ ನೀನು ದ್ರೋಹ ಮಾಡಿಕೊಳ್ಳುತ್ತಿದೀಯೆ ನೀನಿಂಥ ಹೇಡಿತನದ ಮಾತಾಡುವುದು ನನಗೆ ಎಳ್ಳಷ್ಟೂ ಸೇರದು'

೦ ೦ ೦

'ನಾನು ಭಾರತವನ್ನು ಬಿಡುವ ದಿನ ಬಂತು. ಗಾಂಧೀಜೀ ಇನ್ನೂ ಎದ್ದು ಓಡಾಡುವ ಹಾಗಿರಲಿಲ್ಲವಾದ್ದರಿಂದ ಅವರಿಗೆ ಹೇಳಿ ಹೋಗಲು, ಆಶೀರ್ವಾದ ಪಡೆಯಲು, ನಾನೇ ಮಕ್ಕಳನ್ನು ಕರೆದುಕೊಂಡು ಅವರನ್ನು ನೋಡಲು ಹೋದೆ. ಆಗಲುವಾಗ ಈ ಭಾವನೆ ನಮ್ಮಿಬ್ಬರ ಮನಸಿನಲ್ಲೂ ಮಿಡಿಯುತ್ತಿತ್ತು—'ಈ ಜನ್ಮದಲ್ಲಿ ಮತ್ತೊಂದಾದರೂ ಒಬ್ಬರನ್ನೊಬ್ಬರು ನೋಡುತ್ತೇವೆಯೇ?'

——: :——

ಅಂದ * ಚಂದ * ಬೆಲೆ * ಬಾಳಿಕೆಗೆ

ಖಾತರಿಯಾದ ಅಂಗಡಿ

# ಚಂದೀರಾಮ್ ಬ್ರದರ್ಸ್

ಸ್ಪೆಷಲಿಸ್ಟ್ಸ್ :

ಸಿಲ್ಕ್ ಮತ್ತು ಬೆನಾರಿಸ್ ಸೀರೆಗಳು ಬ್ರೋಕೇಡ್‌ಗಳು

ಮತ್ತು ಬಾರ್ಡರ್‌ಗಳು.

- ಸಿಲ್ಕ್ ಸೀರೆಗಳು
- ಬೆನಾರಿಸ್ ಸೀರೆಗಳು
- ಬಾರ್ಡರ್‌ಗಳು
- ಬ್ರೋಕೇಡ್‌ಗಳು

ಮತ್ತು ಎಲ್ಲಾ ತರಹೆಯ ಇತರ ಉಡುಪುಗಳಿಗೆ

ಇಂದೇ ಭೇಟಿ ಕೊಡಿ

# ಇಂಡಿಯನ್ ಸಿಲ್ಕ್ ಸ್ಟೋರ್ಸ್

೧೩೩-೧೩೪, ಕಮರ್ಷಿಯಲ್ ಸ್ಟ್ರೀಟ್, ಬೆಂಗಳೂರು.

# "ನೈ ಲ್ಯಾಂಡ್"

# ಕೊಂಬಿನ ಗುಂಡಿಗಳು

* ಕೋಟಿನ ಗುಂಡಿ
* ಓವರ್ ಕೋಟ್ ಗುಂಡಿ
* ಷರಟಿನ ಗುಂಡಿ
* ಕೈ ಗುಂಡಿ

★

**ಚಪ್ಪಲಿ, ಷೂ, ವಗೈರೆ ನಾನಾ ನಮೂನೆಗಳಲ್ಲಿ ದೊರೆಯುತ್ತವೆ.**

---

**ಸ್ಯಾಂಪಲ್ ಗುಂಡಿ ಬೇಕಾದವರು ರೂ. ೧—೮—೦ ಯನ್ನು ಮನಿ ಆರ್ಡರ್ ಅಥವಾ ಪೋಸ್ಟಲ್ ದ್ವಾರ ಕಳುಹಿಸುವುದು.**

★

ವಿವರಗಳಿಗೆ

**ದಿ ಮೈಸೂರು**

**ಲೆದರ್ ಅಂಡ್ ಇಂಡಸ್ಟ್ರಿಯಲ್ ಪ್ರಾಡಕ್ಟ್ಸ ಲಿ.,**

**ಚಿತ್ರದುರ್ಗ.**

N.B.—ಒಟ್ಟು ವ್ಯಾಪಾರಿಗಳಿಗೆ ಸೂಕ್ತ ರಿಯಾಯಿತಿ ಕೊಡಲಾಗುವುದು.

# ಚಂದೀರಾಮ್

ಬಳಿಗೆ ಬನ್ನಿ

★

ರೇಷ್ಮೆಬಟ್ಟೆ, ಸೀರೆಗಳು ಹೊಸಹೊಸ ತರದ್ದು
ಸಿಗುತ್ತವೆ. ಯೋಗ್ಯ ನಿಗದಿ ಧಾರಣೆ.

★

ಹೊಸ ಹೊಸ ರೇಷ್ಮೆ ಅಂದವಾದ ಸೀರೆ, ನಚ್ಚು
ಮೆಚ್ಚಿನ ಅಂಚು, ವಿವಿಧ ಬಣ್ಣಗಳ ಬ್ರೋಕೇಡು
ಇನ್ನೂ ಎಷ್ಟೋ ಕಾಣಿಕೆ ಸಾಮಾನುಗಳು,
ಕೈಚೀಲ, ದಂತ, ಬೆಳ್ಳಿ ಸಾಮಾನು,
ಫಿನಿಷಿಂಗ್ ಫ್ಯಾಬ್ರಿಕ್
ಇತ್ಯಾದಿ ಇತ್ಯಾದಿ

★

## ಚಂದೀರಾಮ್ ಬ್ರದರ್ಸ್

೪, ಸೌತ್ ಪರೇಡ್ :: ಬೆಂಗಳೂರು.

# ಜಬ್‌ಕೋ

★ ಯುದ್ಧಕ್ಕೆ ಮೊದಲು

ನೀವು ಕಾಣಿರ! ಜಬ್‌ಕೋ ಗುರುತಿನ ಸಾಮಾನನ್ನು ಕೊಂಡ ಗಿರಾಕಿಗಳು ಮತ್ತೆಮತ್ತೆ ತಿರುಗಿಬಂದು ಜಬ್‌ಕೋ ಸಾಮಾನನ್ನೇ ಕೊಂಡರು.

★ ಯುದ್ಧ ಕಾಲದಲ್ಲಿ

ನೀವೇ ನೋಡಿದಿರಿ! ಜಬ್‌ಕೋ ಗಿರಾಕಿಗಳು ಅದನ್ನೇ ಕೊಂಡರು. ಪರದೇಶೀ ಮಾಲು ಸಿಗದೆಂದಲ್ಲ, ಜಬ್‌ಕೋ ಸಾಮಾನನ್ನೇ ಅವರು ಕೊಂಡದ್ದು: ಅದರ ಉತ್ತಮ ಗುಣವನ್ನು ಯುದ್ಧಕ್ಕೆ ಮೊದಲು ಕಂಡಿದ್ದುದರಿಂದ

★ ಯುದ್ಧಾನಂತರ

ನೀವೇ ನೋಡಿದಿರಿ! ಪೇಟೆಯೊಳಗೆ ಪರದೇಶೀ ಮಾಲು ಎಷ್ಟೇ ರಾಶಿ ರಾಶಿ ಬಂದು ಬೀಳಲಿ, ಜಬ್‌ಕೋ ಸಾಮಾನು ಯಥಾಪ್ರಕಾರ ತಮ್ಮ ಗಿರಾಕಿಗಳನ್ನು ಹೆಚ್ಚಿಸುತ್ತಲೇ ಬಂದಾವು. ಯುದ್ಧ ಮುಗಿದ ಮೇಲೆ ಜಬ್‌ಕೋ ಮೊದಲಿಗಿಂತ ಹೆಚ್ಚಾಗಿ ಬೆಳೆಯುವುದನ್ನು ನೀವೇ ಕಾಣುವಿರಿ.

★ ಕಾರಣ

ಕಣ್ಣಿದ್ದವರೆಲ್ಲ ಕಂಡ ಸತ್ಯ ಅದು ಪದಾರ್ಥಗಳು ಬೆಲೆ, ಎರಡೂ ಜಬ್‌ಕೋ ಸಾಮಾನಿನಲ್ಲಿ ಸಮರಸವಾಗಿ ಬೆರೆತು ಬಂದಂತೆ ಇದುವರೆಗೆ ವ್ಯಾಪಾರ ಉದ್ಯೋಗಗಳಲ್ಲಿ ಯಾವುದರಲ್ಲೂ ಬಂದಿಲ್ಲ. ಅದರದೇ ಒಂದು ಮೇಲ್ಪಂಗ್ತಿ.

ನಾವು ತಯಾರಿಸಿದ ಸಾಮಾನು ★

**ಫೌಂಟೆಂಕ್, ಕೇಶವರ್ಧಿನಿ, ಬ್ರಿಲಿಯರ್ಟೈನ್, ಸ್ನೋ, ಲೈಮೆಗ್ಲಿಸ್, ಸುವಾಸನೆ ಹರಳೆಣ್ಣೆ ಇತ್ಯಾದಿ.**

ಜಯಭಾರತ ಕಂ., ಮಲ್ಲೇಶ್ವರಂ, ಬೆಂಗಳೂರು